ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 31

ಆಗಸ್ಟ್ 03, 2014


ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com



ಮಹಿಳೆಯರ ಮೇಲಿನ ಹೀನಾಯ ಕ್ರೌರ್ಯಕ್ಕೆ ಯಾರು ಹೊಣೆ ??





ಲೈಂಗಿಕ ದೌರ್ಜನ್ಯಗಳ ವಿರುದ್ಧ ವ್ಯಾಪಕ ಪ್ರತಿಭಟನ



ತ್ರಿಪುರ ಪಂಚಾಯತ್ ಚುನಾವಣೆ: ಎಡರಂಗದ ವಿಜಯ ದುಂದುಭಿ



ಉಜಿರೆಯಲ್ಲಿ ಸಂಘ ಪರಿವಾರದ ಅ'ನೈತಿಕ ಪೋಲಿಸ್ ಗಿರಿ'



ಗೋವಾದಲ್ಲಿ ಬಡ ಕನ್ನಡಿಗರು ಬೀದಿಪಾಲು

ಬುಡಕಟ್ಟುಗಳಿಂದ ಜನಪದಗಳೆಡೆಗೆ, ರಾಜ ಪ್ರಭುತ್ವ, ಚಾತುರ್ವರ್ಣ್ಯ ಬಲಗೊಳ್ಳುವುದರೆಡೆಗೆ..


ಗಂಗಾ ನದಿ ಬಯಲಿನಲ್ಲಿ ಆರ್ಯರು ವಸತಿ ಹೂಡಿದ ಮೇಲೆ ಅವರ ಜೀವನದ ಪರಿಸ್ಥಿತಿಯಲ್ಲಿ ಗಣನೀಯ ಬದಲಾವಣೆಗಳಾದವು. ಅಲ್ಲಿಯ ಮಳೆ, ನದಿ ನೀರಿನ ಲಭ್ಯತೆ, ಫಲವತ್ತಾದ ಮೆಕ್ಕಲು ಮಣ್ಣಿನ ಭೂಮಿ ಮತ್ತು ಆ ವೇಳೆಗಾಗಲೇ ಕಲಿತ ಕೃಷಿ ಮತ್ತು ಕಬ್ಬಿಣದ ಉಪಕರಣಗಳ ಲಭ್ಯತೆಯಿಂದ ಅರಣ್ಯ ಭೂಮಿಯನ್ನು ಕೃಷಿಗಾಗಿ ತೆರವುಗೊಳಿಸಲು ಸಾಧ್ಯವಾಗಿದ್ದು ಇವೆಲ್ಲವುಗಳಿಂದ ಆಹಾರ ಉತ್ಪಾದನೆಯಲ್ಲಿ ದೊಡ್ಡ ಪ್ರಮಾಣದ ಹೆಚ್ಚಳವುಂಟಾಯಿತು. ಇವೆಲ್ಲ ಆರ್ಯರು ಅಲ್ಲಿ ನೆಲೆಗೊಳ್ಳುವುದಕ್ಕೆ ಕಾರಣವಾಯಿತು. ಆಗಿಂದಾಗ್ಗೆ ವಲಸೆ ಬರುವುದು ಒಂದು ಪ್ರದೇಶದಲ್ಲಿ ಕೆಲವು ಕಾಲ ಜೀವಿಸುವುದು, ನಂತರ ವಲಸೆ. ಅದರಲ್ಲಿ ಕೆಲ ಜನರು ಅಲ್ಲಿಯೇ ನೆಲಸುವುದು ಉಳಿದವರು ಬೇರೆ ಬೇರೆ ದಿಕ್ಕುಗಳಲ್ಲಿ ಮತ್ತೆ ವಲಸೆ ಹೋಗುವುದು. ಹೀಗೆ ಜೀವನ ನಡೆಸುತ್ತಿದ್ದುದರಿಂದ ಅವರ ಸಮಾಜ ವ್ಯವಸ್ಥೆಯೂ ಅದಕ್ಕೆ ಪೂರಕವಾಗಿತ್ತು. ಬುಡುಕಟ್ಟುಗಳ ಸ್ವರೂಪವನ್ನೇ ಉಳಿಸಿಕೊಂಡಿತ್ತು. ರಾಜತ್ವ ರೂಪುಗೊಂಡಿದ್ದರೂ ಅವರು ಬುಡುಕಟ್ಟು ರಾಜರಾಗಿದ್ದರು.

ವಲಸೆಯಿಂದ ನೆಲೆ ಕಂಡುಕೊಳ್ಳುವ ಹಂತ ಆರ್ಯರ ಜೀವನದಲ್ಲಿ ಒಂದು ಬಹಳ ಮುಖ್ಯ ಹಂತ. ಇದು ಅವರ ಜೀವನ ವಿಧಾನ, ಸಮಾಜ ರಚನೆ, ರಾಜಕೀಯ ನಿಯಂತ್ರಣ ಇವುಗಳಲ್ಲಿ ಬದಲಾವಣೆಗಳನ್ನು ತಂದಿತು. ಹೀಗೆ ತಾವು ನೆಲೆ ನಿಂತ ಪ್ರದೇಶವನ್ನು ಶಾಶ್ವತವಾಗಿ ತಮ್ಮ ಅಧೀನದಲ್ಲಿಟ್ಟುಕೊಳ್ಳುವ ಯೋಚನೆ ಮಾಡಬೇಕಾಯಿತು. ಒಂದು ಕಡೆ ತಾವು ನೆಲಸಿದೆಡೆಗಳಲ್ಲಿ ವಾಸಿಸುತ್ತಿದ್ದ ಜನರನ್ನು ನಿರ್ಣಾಯಕವಾಗಿ ಸೋಲಿಸಬೇಕು, ಅವರನ್ನು ಅಧೀನದಲ್ಲಿಟ್ಟುಕೊಳ್ಳಬೇಕು. ಮತ್ತೊಂದು ಕಡೆ ತಮ್ಮ ಪ್ರದೇಶದ ಮೇಲೆ ಇತರರು ಧಾಳಿ ಮಾಡದಂತೆ ಅದನ್ನು ಭದ್ರಪಡಿಸಿಕೊಳ್ಳಬೇಕು. ಅದಕ್ಕಾಗಿ ಪಶ್ಚಿಮದಲ್ಲಿ ತಾವು ಹಿಂದೆ ವಸತಿ ಮಾಡಿದ್ದ ಪ್ರದೇಶಗಳಲ್ಲಿ ನೆಲೆ ಕಂಡುಕೊಂಡ ತಮ್ಮದೇ ಆಚರಣೆಗಳನ್ನು ಹೊಂದಿದ್ದ ಬುಡಕಟ್ಟಗಳ ಜೊತೆ ಸೆಣಸಬೇಕು. ಮತ್ತೊಂದು ಕಡೆ ಪೂರ್ವದಲ್ಲಿ ಆರ್ಯೇತರ ಜನ ಸಮುದಾಯಗಳು ತಮ್ಮ ಮೇಲೆ ಧಾಳಿ ಮಾಡದಂತೆ ಕಾಪಾಡಿಕೊಳ್ಳಬೇಕು. ಮತ್ತು ಕೆಲವೊಮ್ಮೆ ತಮ್ಮ ತಮ್ಮಲ್ಲೇ ಇರುವ ಬುಡಕಟ್ಟುಗಳ ನಡುವೆ ಕದನಗಳಿಗೂ ಸಜ್ಜಾಗ ಬೇಕು. ಈ ಎಲ್ಲ ಯುದ್ಧಗಳಿಂದಾಗಿ ಕ್ಷತ್ರಿಯರ ಸಂಖ್ಯೆ ಮತ್ತು ಬಲ ಅದಕ್ಕಾಗಿ ಮತ್ತೆ ಮತ್ತೆ ಸೈನ್ಯ ಪಡೆ, ಶಸ್ತ್ರಾಗಾರ ಇತ್ಯಾದಿಗಳ ಅವಶ್ಯಕತೆ ಉಂಟಾಯಿತು. ಇದ-ರಿಂದಾಗಿ ರಾಜತ್ವ ಬಲಗೊಂಡಿತು. ಜೊತೆ ಜೊತೆಗೇ ಸಾಮಾನ್ಯ ಜನರ ಮೇಲೆ ಹೆಚ್ಚು ಹೆಚ್ಚು ತೆರಿಗೆಗಳನ್ನು ವಿಧಿಸಲಾಯಿತು. ಅಥರ್ವಣ ವೇದದಲ್ಲಿ ಕುರುಗಳ ರಾಜ ಪರೀಕ್ಷಿತನ ಬಗ್ಗೆ ಹೀಗೆ ಹೇಳಿದೆ : 'ಅವನು ಎಲ್ಲ ಜನಗಳ ರಾಜ, ನರರ ನಡುವಣ ದೇವನೇ ಅವನು. ತನ್ನ ನಿಯಂತ್ರಣದ ಪ್ರದೇಶದಲ್ಲಿ ಹಳ್ಳಿ, ಕುದುರೆಗಳು ದನಗಳು ಇವೆಲ್ಲವುಗಳಲ್ಲಿ ಪಾಲು ಪಡೆಯುವ ಅಧಿಕಾರವಿದೆ'. ಅಥರ್ವಣ ವೇದ ಮತ್ತೂ ಹೇಳುತ್ತದೆ : 'ಇಂದ್ರನೇ ಈ ಆದಾಯದಲ್ಲಿ ಶತ್ರುಗಳು ಪಾಲು ಪಡೆಯದಂತೆ ಮಾಡು.' ಆದ-ರೆ ಅದೇ ಸಮಯದಲ್ಲಿ ಶತ್ರುಗಳ ಮನೆಗಳನ್ನು ವಶ ಮಾಡಿಕೊಳ್ಳಲು, ಅವರನ್ನು ಅವರು ವಾಸ ಮಾಡುತ್ತಿದ್ದ ಪ್ರದೇಶದಿಂದ ಓಡಿಸಲು ಇವರು ಬಯಸುತ್ತಾರೆ.

(22.2,7 ; 122.7–10). ಅಂದರೆ ಆಗಲೇ ರಾಜ ದೇವರೆಂದು ಪರಿಗಣಿತವಾಗುವಷ್ಟು ಪ್ರಾಮುಖ್ಯತೆ ಪಡೆದಿದ್ದಾನೆ. ತನ್ನ ಪ್ರಜೆಗಳಿಂದ ಅವರ ದುಡಿಮೆಯಲ್ಲಿ ಪಾಲು, ಶತ್ರುಗಳ ಪ್ರದೇಶವನ್ನು ವಶ ಪಡಿಸಿಕೊಳ್ಳುವ ಕಾತರ. ಆಗ ಬಲಿ ಎಂದು ಕರೆಯಲ್ಪಡುತ್ತಿದ್ದ ತೆರಿಗೆ, ಕಪ್ಪ ಕಾಣಿಕೆಗಳ ಬಗ್ಗೆ ಅನೇಕ ಕೃತಿಗಳಲ್ಲಿ ಪದೇ ಪದೇ ಉಲ್ಲೇಖ ಕಾಣುತ್ತದೆ. ಇದು ರಾಜತ್ವದ ಆಧಾರ ಸಿದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ. ಸಮಾಜದ ಮೇಲೆ ಅದರ ಪರಿಣಾಮವನ್ನು ನಾವು ಮುಂದೆ ನೋಡಲಿದ್ದೇವೆ.

ರಾಜತ್ವದ ಪ್ರಾಬಲ್ಯದ ಬೆಳವಣಿಗೆ ಶತಪಥ ಬ್ರಾಹ್ಮಣದಲ್ಲಿ ಕಾಣುವಂತೆ ರಾಜನ ಪರಿವಾರದ ಬೆಳವಣಿಗೆಯಲ್ಲಿ ಕಾಣುತ್ತದೆ. ಆಗಲೇ ರಾಜ ಪರಿವಾರವನ್ನು ರತ್ನಗಳು ಎಂದು ಕರೆಯಲು ಆರಂಭಿಸಲಾಗಿದೆ. ಈ ಬ್ರಾಹ್ಮಣ 11 ರತ್ನಗಳನ್ನು ಹೆಸರಿಸಿದೆ.

1. ಸೇನಾನಿ
2. ಪುರೋಹಿತ
3. ರಾಣಿ
4. ಸೂತ (ಸಲಹೆಗಾರ)
5. ಗ್ರಾಮಣಿ (ಗ್ರಾಮಗಳ ಮುಖ್ಯಸ್ಥ ಮತ್ತು ತೆರಿಗೆಗಳ ಸಂಗ್ರಾಹಕ)
6. ಕ್ಷತ್ರಿ (ಅರಮನೆ ವ್ಯವಹಾರಗಳ ನಿರ್ವಹಣೆಗಾರ)
7. ಸಂಗ್ರಾಹಿತ್ರಿ (ರಥದ ಸಾರಥಿ)



8. ಭಾಗಾದುಘ (ಸಂಬಳ ಕೊಡುವವನು)
9. ಅಕ್ಷವಾಪ (ಪಗಡೆ ದಾಳಗಳ ಸಂರಕ್ಷಕ)
10. ಗೋವಿಕರ್ತನ (ಗೋವಧೆ ಮಾಡಿ ಮಾಂಸ ಒದಗಿಸುವವನು / ಬೇಟೆಗಾರ)
11. ಪಾಲಾಗಲ (ಸಂದೇಶವಾಹಕ)

ಹೀಗೆ

ಈ ಎಲ್ಲ ಪರಿವಾರಗಳ ಜೊತೆ-ಗೆ ರಾಜನ ಪಟ್ಟಾಭಿಷೇಕ ಮಹೋತ್ಸವ ಹೆಚ್ಚು ವೈಭವೀಕರಣಗೊಳ್ಳುತ್ತಾ ಹೋಯಿತು. ಅದಕ್ಕಾಗಿ ರಾಜಸೂಯ ಯಾಗವೊಂದನ್ನು ಅಥರ್ವಣ ವೇದ, ಯಜುರ್ವೇದಗಳ ಕಾಲದಿಂದ ನಡೆಸುತ್ತಿರುವುದನ್ನು ಕಾಣುತ್ತೇವೆ. ಇದನ್ನು ನಡೆಸುವ ಬಗೆಯನ್ನು ವಿವರಿಸುತ್ತವೆ ಬ್ರಾಹ್ಮಣಗಳು. ಅಶ್ವಮೇಧ ಯಾಗವು ಕೂಡ ಹೆಚ್ಚು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತಾ ಹೋಗಿದೆ. ಸಾಮ್ರಾಜ್ಯದ ಗಡಿಗಳನ್ನು ವಿಸ್ತರಿಸುವುದಕ್ಕೆ ಹಾಗೂ ತಮ್ಮ ಅಧಿಪತ್ಯವನ್ನು ಸ್ಥಿರಗೊಳಿಸಿಕೊಳ್ಳುವುದಕ್ಕೆ ಇವು ನೆರವಾಗತೊಡಗಿದುವು. ಈ ಯಜ್ಞಗಳ ಆಚರಣೆ ರಾಜರಿಗೆ ಪ್ರಜೆಗಳು, ಅಧೀನ ಆಡಳಿತಗಾರರು ಕಪ್ಪ, ಕಾಣಿಕೆಗಳನ್ನು ಅರ್ಪಿಸುವ ಸಂದರ್ಭಗಳೂ ಆದವು. ಇವುಗಳ ವೈಭವ ಹೆಚ್ಚಾದಷ್ಟೂ ಬ್ರಾಹ್ಮಣರ ಪಾತ್ರವೂ ಹೆಚ್ಚು ಪ್ರಾಮುಖ್ಯತೆ ಪಡೆಯ ತೊಡಗಿ-ತು.

ಇವುಗಳಿಂದ ರಾಜ್ಯಗಳು ವಿಸ್ತಾರವಾಗತೊಡಗಿದುವು. ಅನೇಕ ಬುಡಕಟ್ಟುಗಳು ಒಂದನ್ನೊಂದು ಸೋಲಿಸಿದುವು. ಒಂದರೊಡನೊಂದು ಸೇರಿಕೊಂಡವು. ಹಿಂದೆ ಭರತರು ಎಂಬ ಬುಡುಕಟ್ಟು ಪ್ರಬಲವಾಗಿದ್ದೆಡೆಗಳಲ್ಲಿ ಕುರು–ಪಾಂಚಾಲ ಎಂಬ ಜೋಡಿ ಹೆಸರಿನ ಬುಡುಕಟ್ಟು ಕಾಣತೊಡಗುತ್ತದೆ. ಹಾಗೆಯೇ ಕಾಶಿ ಮತ್ತು ವಿದೇಹ ಪ್ರತ್ಯೇಕವಾಗಿ ಮತ್ತು ಕೆಲವೆಡೆಗಳಲ್ಲಿ ಜೋಡಿಯಾಗಿ ಹೆಸರಿಸಲ್ಪಡುತ್ತವೆ.

ವಿವಿಧ ಆರ್ಯ ಬುಡಕಟ್ಟುಗಳು ವಿವಿಧ ಪ್ರದೇಶಗಳನ್ನು ಆಳಲು ಪ್ರಾರಂಭಿಸಿದವು. ಈ ಪ್ರದೇಶಗಳಲ್ಲಿ ಅವರ ಆಳ್ವಿಕೆಯಲ್ಲಿ ವಿವಿಧ ರೀತಿಯ ಜನ ಸಮುದಾಯಗಳು ಒಳಪಟ್ಟವು. ಅದರಲ್ಲಿ ಒಂದನೆಯದಾಗಿ ಆ ಪ್ರದೇಶದಲ್ಲಿ ಪ್ರಧಾನವಾಗಿದ್ದ ಆ ಪ್ರದೇಶಕ್ಕೆ ಹೆಸರನ್ನು ಕೊಟ್ಟ ಆರ್ಯ ಬುಡಕಟ್ಟು. ಎರಡನೆಯದಾಗಿ ಈ ಬುಡಕಟ್ಟಿನವರಲ್ಲದ ಈ ಪ್ರದೇಶಗಳಲ್ಲಿ ವಾಸವಾಗಿದ್ದರೂ ಪ್ರಧಾನ ಆರ್ಯ ಬುಡಕಟ್ಟಿನಿಂದ ಸೋಲಿಸಲ್ಪಟ್ಟ ಅಥವಾ ಅವರ ಜೊತೆ ಮಿಳಿತವಾದ ಬೇರೆ ಆರ್ಯ ಬುಡಕಟ್ಟುಗಳ ಜನ ಸಮುದಾಯಗಳು, ಬೇರೆ ಅರ್ಯ ಬುಡಕಟ್ಟಗಳಿಂದ ವಿವಿಧ ಕಾರಣಗಳಿಗಾಗಿ ಬೇರ್ಪಟ್ಟ ಬಿಡಿ ಕುಟುಂಬಗಳು ಕೂಡ. ಮೂರನೆಯದಾಗಿ ಅರ್ಯೇತರ ಜನ ಸಮುದಾಯಗಳಿಗೆ ಸೇರಿದ ಆಳುವ ಆರ್ಯ ಬುಡಕಟ್ಟಿನಿಂದ ಪರಾಜಿತರಾದ ಜನ ಸಮುದಾಯಗಳು. ಇವುಗಳಲ್ಲಿಯೂ ವಿವಿಧ ಆರ್ಯೇತರ ಬುಡಕಟ್ಟುಗಳು ವಿವಿಧ ರೀತಿಯಲ್ಲಿ ಹಾಗೂ ಪ್ರಮಾಣದಲ್ಲಿ ಆರ್ಯ ಸಂಪ್ರದಾಯಗಳನ್ನು ಒಪ್ಪಿಕೊಂಡವುಗಳೆಂಬ ವ್ಯತ್ಯಾಸ. ಹಿಂದೆ ನೋಡಿದ ದಾಸ, ದಸ್ಯು ಎಂಬ ವ್ಯತ್ಯಾಸ ಅಥವಾ ಮಗಧ, ಆಂಧ್ರ ಎಂಬ ವ್ಯತ್ಯಾಸಗಳು. ಆರ್ಯ ಸಂಪ್ರದಾಯಗಳನ್ನು ಪಾಲಿಸಲಾರಂಭಿಸಿದವರಿಗೇ ಈ ಆಚರಣೆಗಳನ್ನು ಮಾಡಿಸಲು ಆರ್ಯ ಬ್ರಾಹ್ಮಣ ಪುರೋಹಿತರುಗಳ ಸ್ವೀಕಾರ. ಹೀಗೆ ಒಂದು ಪ್ರದೇಶದಲ್ಲಿ ಈ ಎಲ್ಲ ರೀತಿಯ ಜನ ಸಮುದಾಯಗಳು ಸೇರಿ ಅಲ್ಲಿಯ ಜನಪದಗಳಾದವು. ತಮ್ಮ ತಮ್ಮಲ್ಲಿಯೇ ಕಾದಾಡುತ್ತಿದ್ದ ಆರ್ಯಬುಡಕಟ್ಟುಗಳು ಮತ್ತು ಬಿಡಿ ಬಿಡಿಯಾಗಿ ಬೇರೆ ಬೇರೆಯಾಗಿ ಜೀವಿಸುತ್ತಿದ್ದ ಆರ್ಯೇತರ ಬುಡಕಟ್ಟುಗಳು ಇವರೆಲ್ಲರೂ ಒಂದು ಪ್ರದೇಶ ಆಧಾರಿತವಾದ ರಾಜಪ್ರಭುತ್ವದ ಅಡಿಯಲ್ಲಿ ಒಂದು ಸಮಾಜವಾಗಿ ಜೀವಿಸುವ ಪ್ರಕ್ರಿಯೆ ಆರಂಭವಾಯಿತು.

ಪಶು ಸಂಗೋಪನೆ ಮತ್ತು ಕೃಷಿಗಳನ್ನು ಒಂದು ವ್ಯವಸ್ಥೆಗೆ ತರಲು ಇದರಿಂದ ಸಾಧ್ಯವಾಯಿತು. ಇದು ಉತ್ಪಾದನೆಗೆ ಒಂದು ದೊಡ್ಡ ನೆಗೆತವನ್ನು ನೀಡಿತು. ಇದರ ಗಣನೀಯ ಪಾಲನ್ನು ಪಡೆದು ರಾಜಪ್ರಭುತ್ವಗಳು ಪ್ರಬಲವಾದವು.

ಮುಂದೆ ಈ ಕಾಲಘಟ್ಟದ ನಂತರ ಬಂದ ಬೌದ್ಧ ಸಾಹಿತ್ಯದಲ್ಲಿ 16 ಜನಪದಗಳನ್ನು ಹೆಸರಿಸಲಾಗಿದೆ. ವಿಶೇಷವೆಂದರೆ 'ಹಳೆಯ ಅವೆಸ್ತಾ'ದ ಆನಂತರದ 'ನಂತರದ ಅವೆಸ್ಥಾ'ದ ಭಾಗಗಳಲ್ಲಿಯೂ ಜನಪದಗಳ ಹೆಸರು ಬೇರೆ-ಯಾದರೂ ಸಂಖ್ಯೆ ಮಾತ್ರ 16 ಆಗಿದೆ.

ಬುಡಕಟ್ಟುಗಳ ಸಮಾಜದಿಂದ ಜನಪದಗಳ ಸಮಾಜ ರಚಿತವಾದದ್ದು ಮಾನವನ ಬೆಳವಣಿಗೆಯ ಇತಿಹಾಸದಲ್ಲಿ ಒಂದು ಮುಖ್ಯ ಹಂತ. ಬುಡಕಟ್ಟುಗಳ ಹಂತದಿಂದ ಪ್ರಭುತ್ವದ ಹಂತಕ್ಕೆ ಮಾನವ ಸಮುದಾಯ ಜಿಗಿದದ್ದರ ಗುರುತು ಇದು. ಸಾಮಾನ್ಯವಾಗಿ ಇತಿಹಾಸಕಾರರು ಈ ಹಂತದಲ್ಲಿ ಸಮಾಜದಲ್ಲಿ ಆಗುವ ಬದಲಾವಣೆಗಳಿಗೆ ಸರಿಯಾದ ಪ್ರಾಮುಖ್ಯತೆ ನೀಡುವುದಿಲ್ಲ. ಅಪರೂಪಕ್ಕೆ ಕೊಸಾಂಬಿಯವರಂತಹ ವಿದ್ವಾಂಸರು ಮಾತ್ರ ಇದನ್ನು ಆಳವಾಗಿ ಅಧ್ಯಯನ ಮಾಡುತ್ತಾರೆ.

ಭಾಗ – 34




ಚೋಮನ ದುಡಿ

ಜಿ. ಎನ್. ನಾಗರಾಜ್

ಬುಡಕಟ್ಟುಗಳ ಸಮಾಜಗಳು ಸಾಮಾನ್ಯವಾಗಿ ಅಲೆಮಾರಿ ಸಮುದಾಯಗಳು. ಈ ಸಮುದಾಯಗಳಿಗೆ ಯಾವುದೇ ಪ್ರದೇಶದ ಹಂಗಿಲ್ಲ. ಇನ್ನೂ ಕೃಷಿ ಪ್ರಧಾನ ಜೀವನ ಆಧಾರವಾಗದ ಹಂತಗಳಾದ್ದರಿಂದ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುವುದರಿಂದ ತಮ್ಮ ಜನ ಸಮುದಾಯವನ್ನು ಗುರುತಿಸಲು ಹಾಗೂ ಇತರ ಸಮುದಾಯಗಳನ್ನೂ ಗುರುತಿಸಲು ಅನೇಕ ಕಟ್ಟಕಟ್ಟಳೆ, ಗುರುತುಗಳನ್ನು ರೂಪಿಸಿಕೊಂಡಿರುತ್ತವೆ ಮತ್ತು ಬಹಳ ಕಟ್ಟುನಿಟ್ಟಾಗಿ ಜಾರಿಗೆ ತರುತ್ತವೆ. ಬುಡಕಟ್ಟು ಆಡಳಿತ, ನ್ಯಾಯ ಪಂಚಾಯತಿಗಳು, ಮದುವೆಯ ಕಟ್ಟಳೆಗಳು ಇತ್ಯಾದಿ. ಆಹಾರದ, ನೀರಿನ ತೀವ್ರ ಕೊರತೆಯನ್ನು ಎದುರಿಸಬೇಕಾದ್ದರಿಂದ ಇತರೆಲ್ಲ ಬುಡಕಟ್ಟುಗಳನ್ನು ತಮ್ಮ ಎದುರಾಳಿಗಳೆಂದೇ ಕಾಣುತ್ತಾರೆ. ಬುಡಕಟ್ಟು ನಿಷ್ಠೆಯನ್ನು ಬಹಳ ಕಠಿಣವಾಗಿ ಪಾಲಿಸುತ್ತಾರೆ. ತಮ್ಮ ಬುಡಕಟ್ಟಿನ ಪ್ರತಿಯೊಬ್ಬರ ರಕ್ಷಣೆ ಪ್ರತಿಯೊಬ್ಬರಿಗೂ ಸೇರಿದ್ದು ಎಂಬ ಆಳವಾದ ನಂಬಿಕೆ. ಹೀಗೆ ಹಲವನ್ನು ವಿವರಿಸಬಹುದು.

ಆದರೆ ಒಂದು ಪ್ರದೇಶದಲ್ಲಿ ನೆಲೆಗೊಂಡು ಬೇರೆ ಬೇರೆ ಬುಡಕಟ್ಟುಗಳೊಂದಿಗೆ ಒಂದೇ ವಾಸ ಪ್ರದೇಶದಲ್ಲಿ ಬದುಕಲಾರಂಭಿಸಿದ ಮೇಲೆ ಸಾವಿರಾರು ವರ್ಷಗಳಿಂದ ಈ ಸಮುದಾಯಗಳನ್ನು ಕಾಪಾಡಿದ ಬುಡಕಟ್ಟು ಕಟ್ಟಳೆಗಳು ಈಗಿನ ಬದುಕಿಗೆ ಅಡ್ಡಿಯಾಗತೊಡಗುತ್ತವೆ. ಆದ್ದರಿಂದ ಹಿಂದಿನ ಬುಡಕಟ್ಟುಗಳ ಸಮಾಜದ ಕಟ್ಟುಕಟ್ಟಳೆಗಳು ಅನಿವಾರ್ಯವಾಗಿ ಸಡಿಲವಾಗತೊಡಗಿದುವು. ಹೊಸ ಬದುಕಿನ ರೀತಿಗೆ ಅನುಗುಣವಾಗಿ ಹೊಸ ಕಟ್ಟಳೆಗಳು ರೂಪುಗೊಳ್ಳತೊಡಗಿದುವು. ಆದ-ರೆ ಈ ಕಟ್ಟಳೆಗಳಿಗೂ ಹಿಂದಿನ ಬುಡಕಟ್ಟು ಸಮಾಜದ ಕಟ್ಟಳೆಗಳಿಗೂ ಒಂದು ಬಹಳ ಮುಖ್ಯ ವ್ಯತ್ಯಾಸ. ಬುಡಕಟ್ಟು ಸಮಾಜದ ಕಟ್ಟಳೆಗಳು ಇಡೀ ಸಮುದಾಯದ ತಲೆ ತಲೆಮಾರುಗಳ ಅನುಭವದಲ್ಲಿ ರೂಪುಗೊಂಡ ಕಟ್ಟಳೆಗಳು. ಅಂ-ದರೆ ಜನ ಸಮುದಾಯವೇ ರೂಪಿಸಿಕೊಂಡ ಕಟ್ಟಳೆಗಳು. ಅಂದು ಬುಡಕಟ್ಟುಗಳಿಗೆ ಒಬ್ಬರೋ ಇಬ್ಬರೋ ನಾಯಕರಿರುತ್ತಿದ್ದರು. ಈಗಲೂ ಭಾರತದ ಹಾಗೂ ವಿಶ್ವದೆಲ್ಲಾ ಬುಡಕಟ್ಟುಗಳಲ್ಲಿ ಇದನ್ನು ಕಾಣಬಹುದು. ಹಿಂದೆ ಕಾಕನಕೋಟೆ ನಾಟಕದ ಕಾಡು ಕುರುಬರ ಜೀವನದ ಬಗ್ಗೆ ಬರೆಯುವಾಗ ಈ ವಿಷಯವನ್ನು ಗಮನಿಸಿದ್ದೇವೆ. ಒಬ್ಬ ಗೌಡ ಮತ್ತೊಬ್ಬ ಬುದ್ವಂತ. ಇಬ್ಬರೂ ಇಡೀ ಬುಡಕಟ್ಟಿನ ಜನರಿಂದ ಆಯ್ಕೆಯಾದವರು. ಏನೇ ತೀರ್ಮಾನವಾಗಬೇಕಾದರೂ ಅದು ಬುಡಕಟ್ಟಿನ ಎಲ್ಲ ಜನರ–ಗಂಡಸರಿಗೆ ಮಾತ್ರವಲ್ಲ ಹೆಂಗಸರಿಗೂ ಸಮಾನ ಅವಕಾಶವಿರುವ ಸಭೆಗಳಲ್ಲಿ ಮಾತ್ರ. ಆದರೆ ಜನಪದವಾಗಿ ಪರಿವರ್ತನೆಗೊಂಡ ಸಮಾಜದಲ್ಲಿ ಬುಡಕಟ್ಟಿನ ಕೆಲಸವನ್ನು ಮಾಡುವವರ್‍ಯಾರು? ಇದೇ ಸಂದರ್ಭದಲ್ಲಿ ರಾಜ ಪ್ರಭುತ್ವ ರೂಪುಗೊಂಡಿದೆ. ಈ ರಾಜ ಪ್ರಭುತ್ವ ತನ್ನ ಪರಿವಾರಕ್ಕೆ, ತನ್ನ ವೈಭವಕ್ಕೆ, ಸೈನ್ಯಕ್ಕೆ ತೆರಿಗೆ, ಕಪ್ಪ ಕಾಣಿಕೆಗಳನ್ನು ಕಿತ್ತುಕೊಳ್ಳುತ್ತದೆ. ಈ ತೀರ್ಮಾನಗಳನ್ನು ಎಲ್ಲ ಜನಪದರೂ ಸೇರಿದ ಸಭೆಗಳಲ್ಲಿ ತೆಗೆದುಕೊಳ್ಳಲು ಅವಕಾಶ ನೀಡುವ ಸಂಭವವೇ ಉದ್ಭವಿಸುವುದಿಲ್ಲ. ಆದ್ದರಿಂದ ಈ ಹೊಸ ಸಮಾಜದ ಕಟ್ಟು ಕಟ್ಟಳೆಗಳು ರಾಜ ಪ್ರಭುತ್ವದ ಇಚ್ಛೆಗನುಗುಣವಾಗಿ ರೂಪಿಸಲ್ಪಡುತ್ತದೆ. ಇದೇ ವರ್ಗ ವಿಭಜನೆ ಉದ್ಭವಿಸಿದ ಹೆಗ್ಗುರುತು. ಈ ವ್ಯವಸ್ಥೆ ಎಂತಹ ಕಟ್ಟಳೆಗಳು ರೂಪುಗೊಂಡವು, ಹಾಗೆ ರೂಪುಗೊಂಡದ್ದರ ಸಾಮಾಜಿಕ ಪರಿಣಾಮಗಳೇನು? ಇದನ್ನು ಮುಂದಿನ ಸಂಚಿಕೆಯಲ್ಲಿ ಚರ್ಚಿಸೋಣ. ●

ಸಂಪಾದಕೀಯ



▌ನಿತ್ಯಾನಂದಸ್ವಾಮಿ

ಗೋವಾದಲ್ಲಿ ಬೀದಿಪಾಲಾದ ಕರ್ನಾಟಕದ ಬಡ ಕೂಲಿಕಾರರು

ಗೋವಾದ ಬೈನಾ ಕಡಲ ತೀರದಲ್ಲಿ ನೂರಾರು ಮನೆಗಳನ್ನು ಮನೋಹರ ಪರಿಕ್ಕರ್ ನೇತೃತ್ವದ ಸರ್ಕಾರ ಕೆಡವಿ ಹಾಕಿರುವುದರಿಂದ ಸಾವಿರಕ್ಕೂ ಹೆಚ್ಚು ಜನ ಬೀದಿಪಾಲಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಕರ್ನಾಟಕದಿಂದ ವಲಸೆಬಂದ ಕೂಲಿಕಾರರು. ನೆಲೆ ಕಳೆದುಕೊಂಡು ಮಳೆಯಲ್ಲಿ ನೆನೆಯುತ್ತಾ ಇದ್ದವರನ್ನು ವಿಚಾರಿಸಿದಾಗ ತಾವು 30–40 ವರ್ಷಗಳಿಂದ ಇಲ್ಲಿ ವಾಸಿಸುತ್ತಿದ್ದೇವೆ. ಆದರೆ ಜುಲೈ10 ರ ರಾತ್ರಿ 10 ಗಂಟೆಗೆ ಜಿಲ್ಲಾಡಳಿತ ಅಧಿಕಾರಿಗಳು ಬಂದು ನೀವು ಇರುವ ಪ್ರದೇಶ ಸಿಆರ್‌ಝಡ್ (ಕರಾವಳಿ ಮೀಸಲು ವಲಯ) ವ್ಯಾಪ್ತಿಗೆ ಸೇರುತ್ತದೆ. ಕಡಲ್ಕೊರೆತ, ಸುನಾಮಿ ಬರುವ ಸಂಭವ ಇರುವುದರಿಂದ ನೀವು ಜಾಗ ಖಾಲಿ ಮಾಡಬೇಕು ಎಂದರು. ಮರುದಿನ ಬೆಳಿಗ್ಗೆ ನಾವು ಮನೆಗಳಲ್ಲಿರುವ ವಸ್ತುಗಳನ್ನು ಹೊರಗೆ ತೆಗೆದುಕೊಳ್ಳುವ ಮುನ್ನವೇ, ಜೆಸಿಬಿ ಮೂಲಕ ನಮ್ಮ ಮನೆಗಳನ್ನೆಲ್ಲಾ ಧ್ವಂಸ ಮಾಡಿದ್ದಾರೆ ಎಂದು ಅವರು ತಮ್ಮ ಅಳಲು ತೋಡಿಕೊಂಡರು.

ಗೋವಾ ಸರ್ಕಾರದ ಈ ಕ್ರಮ ಆ ಬಡಕೂಲಿಕಾರರ ಪಾಲಿಗೆ ಸುನಾಮಿಗಿಂತ ಭಿನ್ನವೇನೂ ಆಗಿರಲಿಲ್ಲ. ಸರ್ಕಾರದ ಉದ್ದೇಶ ಎಷ್ಟೇ ಸುಸಂಬದ್ದವಾಗಿದ್ದರೂ ಅಷ್ಟೊಂದು ಅವಸರದಲ್ಲಿ ಅವರ ಜೋಪಡಿಗಳನ್ನು ಕಿತ್ತುಹಾಕಿ ಅವರನ್ನು ಒಕ್ಕಲೆಬ್ಬಿಸುವ ಅಗತ್ಯವಿರಲಿಲ್ಲ. 2004 ರಲ್ಲಿ ಇದೇ ರೀತಿಯ ಕಾರ್ಯಾಚರಣೆಯಲ್ಲಿ ಅದೇ ಬೈನಾ ಕಡಲ ತೀರದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ವಲಸೆ ಕೂಲಿಕಾರರನ್ನು ಇದೇ ಪರಿಕ್ಕರ್ ಒಕ್ಕಲೆಬ್ಬಿಸಿದ್ದರು. ಅಂದು ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸಿಕೊಡುವಂತೆ ಕಳೆದ ವರ್ಷ ಮುಂಬೈ ಹೈಕೋರ್ಟ್ ನೀಡಿದ್ದ ಆದೇಶಗಳನ್ನು ಗೋವಾ ಸರ್ಕಾರ ಉಪೇಕ್ಷಿಸುತ್ತಾ ಬಂದಿದೆಯಲ್ಲದೆ ಈಗ ಮತ್ತೆ ಸುಮಾರು ಒಂದು ಸಾವಿರ ಬಡ ಕೂಲಿಕಾರರನ್ನು ನಿರಾಶ್ರಿತರನ್ನಾಗಿ ಮಾಡಿದೆ. ಇವರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಲು ಗೋವಾ ಸರ್ಕಾರ ಮುಂದಾಗಲೇಬೇಕು. ಕರ್ನಾಟಕ ಸರ್ಕಾರವು ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಕರ್ನಾಟಕ ಸರ್ಕಾರ ವಲಸೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ವಲಸೆ ತಡೆಯಲು ಪರಿಣಾಮಕಾರಿ ಹಾಗೂ ಶಾಶ್ವತ ಸ್ವರೂಪದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಉತ್ತರ ಕರ್ನಾಟಕದ ಬರ ಪೀಡಿತ ಪ್ರದೇಶಗಳಿಂದ ಪ್ರತಿ ವರ್ಷ ಕೂಲಿಕಾರರು ಮತ್ತು ಬಡರೈತರು ಗೋವಾ ಮಹಾರಾಷ್ಟ್ರಗಳಿಗೆ ವಲಸೆ ಹೋಗುವುದು ಎಲ್ಲರಿಗೂ ತಿಳಿದಿರುವ ವಿಷಯ. ಹೀಗೆ ವಲಸೆ ಹೋದವರು ಅನೇಕ ತರಹದ ಕಷ್ಟಗಳಿಗೆ ಒಳಗಾಗುತ್ತಿರುತ್ತಾರೆ. ವಲಸೆ ಹೋದ ಬಹಳಷ್ಟು ಮಂದಿ ಇತ್ತಿಚಿನ ವರ್ಷಗಳಲ್ಲಿ ಹೊರ ರಾಜ್ಯಗಳಲ್ಲಿಯೇ ಉಳಿದು ಬಿಡುತ್ತಾರೆ. ಅಂಥವರನ್ನು ಆ ರಾಜ್ಯಗಳ ಜನಗಳು, ಸರ್ಕಾರಗಳು ನಿಕೃಷ್ಟವಾಗಿ ಕಾಣುತ್ತಾರೆ. ವಲಸೆ ತಡೆಯುವುದು ಯಾವುದೇ ಒಂದು ರಾಜ್ಯ ಸರ್ಕಾರದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಬೇಕಾಗಿದೆ. ಇಲ್ಲಿಯೇ ದುಡಿಯುವ ಕೈಗಳಿಗೆ ಕೈತುಂಬ ಕೆಲಸ ಹೊಟ್ಟೆಬಟ್ಟೆಗಾಗುವಷ್ಟು ಕೂಲಿಸಿಗುವಂತ್ತಿದ್ದರೆ ಅವರ‍್ಯಾಕೆ ವಲಸೆ ಹೋಗುತ್ತಾರೆ? ಬರಪೀಡಿತ ಪ್ರದೇಶಗಳ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ತ್ವರಿತಗತಿಯಿಂದ ಪೂರ್ಣಗೊಳಿಸಿದರೆ ಜನ ವಲಸೆ ಹೋಗುವುದನ್ನು ನಿಯಂತ್ರಿಸಬಹುದು. ಅದೇ ರೀತಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರೆ ವಲಸೆ ಸಮಸ್ಯೆ ಸಾಕಷ್ಟು ನಿಯಂತ್ರಣಕ್ಕೆ ಬರುವ ಸಾಧ್ಯತೆ ಇದೆ. ನಮ್ಮ ರಾಜ್ಯದ ಕೃಷಿ ಕೂಲಿಕಾರರು ಬಡರೈತರು ರಾಜ್ಯದಲ್ಲೇ ಗೌರವದಿಂದ ಬಾಳಲು ಸಾಧ್ಯವಾಗುತ್ತದೆ. ಸಿದ್ದರಾಮಯ್ಯ ಸರ್ಕಾರಕ್ಕೆ ಬಡವರ ಬಗ್ಗೆ ನಿಜವಾದ ಕಾಳಜಿಯಿದೆ ಎನ್ನುವುದಾದರೆ ಅದು ವಲಸೆಯನ್ನು ತಪ್ಪಿಸಲು ಶಾಶ್ವತ ಕ್ರಮಗಳನ್ನು ಯೋಜಿಸಬೇಕು.




ಪ್ಯಾಲಿಸ್ಟೇನ್ : ನಾಗರಿಕರ ಹತ್ಯೆ ಖಂಡಿಸಿ ಡಿವೈಎಫ್‌ಐ ಪ್ರತಿಭಟನೆ

ಪ್ಯಾಲಿಸ್ಟೇನ್ ನಾಗರೀಕರ ಮೇಲೆ ಇಸ್ರೇಲ್ ದೇಶವು ಆಸ್ಪತ್ರೆ–ಶಾಲೆ–ಮನೆ ಎನ್ನದೇ ನಡೆಸುತ್ತಿರುವ ಅಮಾನುಷ ಬಾಂಬ್ ದಾಳಿಯ ಕ್ರೌರ್ಯವನ್ನು ಖಂಡಿಸಿ ಹಾಗೂ ಪ್ಯಾಲಿಸ್ಟೇನ್ ನಾಗರಿಕರಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಸಂಘಟನೆಗಳ ವತಿಯಿಂದ ಜೂನ್ 17 ರಂದು ಪ್ರತಿಭಟನಾ ಸಭೆ ಆಯೋಜಿಸಲಾಗಿತ್ತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ರಾಜ್ಯಾ ಧ್ಯಕ್ಷ ಮುನೀರ್ ಕಾಟಿಪಳ್ಳ, ಸಾಮ್ರಾಜ್ಯಶಾಹಿ ಕ್ರೂರಿ ರಾಷ್ಟ್ರವಾದ ಇಸ್ರೇಲ್ ಪ್ಯಾಲೆಸ್ಟೇನ್ ಮೇಲೆ ನಿರಂತರ ದಾಳಿ ನಡೆಸಿ ಅಲ್ಲಿಯ ಅಮಾಯಕ ಮಹಿಳೆಯರ ಮತ್ತು ಮಕ್ಕಳ ಮಾರಣ ಹೋಮ ನಡೆಸುತ್ತಿದೆ. ಯುದ್ಧ ನಿಯಮಗಳನ್ನೇ ಗಾಳಿಗೆ ತೂರಿ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಭಾರತ ವಿರೋಧಿಸಬೇಕು. ಭಾರತದಲ್ಲಿನ ಇಸ್ರೇಲ್ ರಾಯಭಾರಿಯನ್ನು ಕರೆಸಿ ಎಚ್ಚರಿಕೆ ನೀಡಬೇಕು. ಈ ದೇಶದ ಆಲಿಪ್ತ ನೀತಿಯ ಪರಂಪರೆಯನ್ನು ಮುಂದುವರೆಸಬೇಕು ಎಂದು ಆಗ್ರಹಿಸಿದರು.

1940ರ ದಶಕದಲ್ಲಿ ಪ್ಯಾಲಿಸ್ಟೇನ್ ದೇಶದ ನೆಲವನ್ನು ಆಕ್ರಮಿಸಿಕೊಂಡು ಇಸ್ರೇಲ್ ದೇಶ ರೂಪಿಸುವ ಸಿದ್ಧತೆಗಳಾಗುತ್ತಿದ್ದಾಗ, ಅದನ್ನು ವಿರೋಧಿಸಿದ್ದ ಮಹಾತ್ಮಗಾಂಧಿ, ಇದು ಏಷ್ಯಾಖಂಡದ ಎದೆಗೆ ಅಂಟಿದ ಮುಳ್ಳು ಎಂದು ಎಚ್ಚರಿಸಿದ್ದರು. ಹಿಂದೆ ಕೇಂದ್ರದಲ್ಲಿ ಆಡಳಿತ ನಡೆಸಿದ ಎಲ್ಲ ಸರಕಾರಗಳು ಪ್ಯಾಲಿಸ್ಟೇನ್‌ನನ್ನು ಬೆಂಬಲಿಸಿದ್ದವು. ಈಗ ನರೇಂದ್ರ ಮೋದಿ ಪ್ಯಾಲಿಸ್ಟೇನ್ ಜನರ ಹೋರಾಟವನ್ನು ಬೆಂಬಲಿಸಲು ಹಿಂದೇಟು ಹಾಕುತ್ತಿದ್ದಾರೆ. ಸಂಸತ್ತಿನಲ್ಲಿ ಖಂಡನಾ ನಿರ್ಣಯ ಕೈಗೊಂಡರೆ ಏನಾಗುತ್ತದೆ ಎಂದು ಪ್ರಶ್ನಿಸುವ ನರೇಂದ್ರ ಮೋದಿ ಭಾರತದ ಶಕ್ತಿಯ ಅರಿವು ಇಲ್ಲದವರಂತೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಪ್ರತಿಭಟನೆಯಲ್ಲಿ ಮಂಗಳೂರು ಪಾಲಿಕೆ ಕಾರ್ಪೊರೇಟರ್ ದಯಾನಂದ ಶೆಟ್ಟಿ, ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ನಿತಿನ್ ಕುತ್ತಾರ್, ಡಿವೈಎಫ್‌ಐ ಮುಖಂಡರುಗಳಾದ ಜೀವನ್‌ರಾಜ್ ಕುತ್ತಾರ್, ಬಿ.ಕೆ.ಇಮ್ತಿಯಾಜ್, ಸಂತೋಷ್‌ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು ಮತ್ತಿತರರು ಉಪಸ್ಥಿತರಿದ್ದರು.



ಗೋವಾದ ಬೈನಾ ಕಡಲ ತೀರದಲ್ಲಿ ನೂರಾರು ಮನೆಗಳನ್ನು ಮನೋಹರ ಪರಿಕ್ಕರ್ ನೇತೃತ್ವದ ಸರ್ಕಾರ ಕೆಡವಿ ಹಾಕಿರುವುದರಿಂದ ಸಾವಿರಕ್ಕೂ ಹೆಚ್ಚು ಜನ ಬೀದಿಪಾಲಾಗಿದ್ದಾರೆ.



ಪಡುಬಿದ್ರಿ : ಒಕ್ಕಲೆಬ್ಬಿಸಿದ ಕೊರಗ ಕುಟುಂಬಗಳಿಗೆ ಮನೆ ನಿರ್ಮಿಸಿ ಕೊಡಲು ಆಗ್ರಹ

ಉಡುಪಿ ಜಿಲ್ಲೆಯ ಪಡುಬಿದ್ರಿ ಸಮೀಪ ಸುಜ್ಲಾನ್ ಕಂಪೆನಿ ತನ್ನ ಬೃಹತ್ ಸ್ಥಾವರ ಸ್ಥಾಪಿಸಲಿಕ್ಕಾಗಿ, 17 ಕೊರಗ ಕುಟುಂಬಗಳನ್ನು ಒಕ್ಕಲೆಬ್ಬಿಸಿ ನಿರ್ಗತಿಕರನ್ನಾಗಿ ಮಾಡಿದೆ. ಅತ್ಯಂತ ಹಿಂದುಳಿದರು ಮತ್ತು ಕಡುಬಡವರೂ ಆದ ಕೊರಗ ಸಮುದಾಯಕ್ಕೆ ಕೂಡಲೇ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಿ ಪಡುಬಿದ್ರಿ ಪ್ರದೇಶದ ನಾಗರಿಕರು ಭೂಮಿ ಹಕ್ಕಿಗಾಗಿ ಹಕ್ಕೊತ್ತಾಯ ಸಮಿತಿ ರಚಿಸಿಕೊಂಡು ಜುಲಾಯಿ 22 ರಂದು ಪಡುಬಿದ್ರಿ ಪಂಚಾಯತ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ಪ್ರತಿಭಟನೆಯಲ್ಲಿ ತಮಗೆ ಮಾರ್ಗದರ್ಶನ ನೀಡಿ ಭಾಗವಹಿಸಬೇಕೆಂದು ಡಿವೈಎಫ್ಐ ಹಾಗೂ ಡಿಐಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಅವರನ್ನು ಹಕ್ಕೊತ್ತಾಯ ಸಮಿತಿಯವರು ಆಹ್ವಾನಿಸಿದ ಮೇರೆಗೆ ಮುನೀರ್ ಕಾಟಿಪಳ್ಳ ಹಾಗೂ ಡಿವೈಎಫ್ಐ ಈ ಹೋರಾಟದಲ್ಲಿ ಭಾಗವಹಿಸಿದರು. ನಿರ್ವಸಿತರಾಗಿರುವ 17 ಕೊರಗ ಕುಟುಂಬಗಳಿಗೆ ತಕ್ಷಣ ಹಕ್ಕುಪತ್ರ ಸಹಿತ ಮನೆ ನಿರ್ಮಿಸಿಕೊಡಬೇಕೆಂದು ಸರಕಾರಕ್ಕೆ ಗ್ರಾಮ ಪಂಚಾಯತಿ ಮೂಲಕ ಮನವಿ ಸಲ್ಲಿಸಲಾಯಿತು.

ಸುಜ್ಲಾನ್ ಕಂಪೆನಿಗೆ ಬೆಂಗಾವಲಾಗಿರುವ ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಸಂಸದೆ ಶೋಭಾ ಕರಂದ್ಲಾಜೆ ಹಾಗೂ ಹಾಲಿ ಕಾಪು ಕ್ಷೇತ್ರದ ಶಾಸಕ ಹಾಗೂ ಸಚಿವ ವಿನಯ್ ಕುಮಾರ್ ಸೊರಕೆ ವಿರುದ್ಧ ಮುನೀರ್ ಕಾಟಿಪಳ್ಳ ತಮ್ಮ ಮಾತಿನಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ, ಇಲ್ಲಿನ ಕೊರಗರಿಗೆ ಶೀಘ್ರವಾಗಿ ಮನೆ ನಿರ್ಮಿಸಿ ಕೊಡದಿದ್ದಲ್ಲಿ ರಾಜ್ಯಾದ್ಯಂತ ಹೋರಾಟ ವಿಸ್ತರಿಸಲಾಗುವುದು ಎಂದು ಎಚ್ಚರಿಸಿದರು.

ದಲಿತ ಹಕ್ಕುಗಳ ಸಮಿತಿಯ ಮಂಗಳೂರು ಸಂಚಾಲಕ ಲಿಂಗಪ್ಪ ನಂತೂರು, ಆದಿವಾಸಿ ಸಂಘಟನೆಯ ಮಂಗಳೂರು ಸಂಚಾಲಕರಾದ ಜಯಕುಮಾರ್ ಅಲ್ಲದೆ ಡಿಎಸ್ಎಸ್ ಸಂಘಟನೆಯ ಮುಖಂಡರೂ ಈ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದರು.

ಪಡೀಲು ರೈಲ್ವೆ ಕೆಳ ಸೇತುವೆ ನಿರ್ಮಾಣಕ್ಕೆ ಒತ್ತಾಯ :




ಪಡೀಲು ರೈಲ್ವೆ ಕೆಳ ಸೇತುವೆ ನಿರ್ಮಾಣಕ್ಕೆ ಒತ್ತಾಯ

ಮಂಗಳೂರು ಜಂಕ್ಷನ್ ರೈಲ್ವೆ ನಿಲ್ದಾಣದ ಅವ್ಯವಸ್ಥೆಗಳನ್ನು ಸರಿಪಡಿಸುವಂತೆ ಹಾಗೂ ಪಡೀಲು–ಬಜಾಲು ಮಧ್ಯೆ ರಸ್ತೆ ಕೆಳಸೇತುವೆ ನಿರ್ಮಿಸುವಂತೆ ಆಗ್ರಹಿಸಿ ಬಜಾಲು, ಕಂಕನಾಡಿ, ಪಕ್ಕಲಡ್ಕ, ಜಲ್ಲಿಗುಡ್ಡೆ ಡಿವೈಎಫ್ಐ ಘಟಕಗಳು ಸಂಯುಕ್ತವಾಗಿ ಜುಲಾಯಿ 21 ರಂದು ಮಂಗಳೂರು ಜಂಕ್ಷನ್ ರೈಲ್ವೆ ನಿಲ್ದಾಣದ ಎದುರು ಪ್ರತಿಭಟನೆ ನಡೆಸಿದವು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಡಿವೈಎಫ್ಐ ನಗರ ಸಮಿತಿ ಅ ಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್ ಮಾತನಾಡಿದರು.

ಪ್ರತಿಭಟನೆಗೂ ಮೊದಲು ಡಿವೈಎಫ್ಐ ಕಾರ್ಯಕರ್ತರು ಪಡೀಲು ರೈಲ್ವೆ ಗೇಟ್ ಬಳಿಯಿಂದ ಮಂಗಳೂರು ಜಂಕ್ಷನ್ ರೈಲ್ವೆ ನಿಲ್ದಾಣದ ವರೆಗೆ ಮೆರವಣಿಗೆ ನಡೆಸಿದರು. ಪ್ರತಿಭಟನೆಯಲ್ಲಿ ಪ್ರದೇಶದ ಮುಖಂಡರಾದ ಸುರೇಶ್ ಬಜಾಲ್, ಅಶೋಕ್ ಸಾಲ್ಯಾನ್, ಮಾಜಿ ಪಾಲಿಕೆ ಸದಸ್ಯೆ ಜಯಂತಿ ಬಿ.ಶೆಟ್ಟಿ, ನವೀನ್ ನಾಯಕ್ ಮತ್ತಿತರರು ಭಾಗವಹಿಸಿದ್ದರು.



ವರದಿ : ವಾ. ಉಚ್ಚಿಲ್

ಉಡುಪಿ : ಬಾಕಿ ತುಟ್ಟಿಭತ್ತೆಗಾಗಿ 'ಸಂಯುಕ್ತ ಪ್ರತಿಭಟನೆ':

ಸಾವಿರ ಬೀಡಿಗೆ ರೂ.21.15ರಷ್ಟು ತುಟ್ಟಿಭತ್ತೆಯನ್ನು ಸರಕಾರ ಘೋಷಿಸಿದ್ದು, ಕಳೆದ ಎಪ್ರಿಲ್ 1 ರಿಂದಲೇ ಅದು ಜ್ಯಾರಿಯಾಗಬೇಕಿತ್ತು. ಬೀಡಿ ಮಾಲಕರು ಏರಿ–ಕೆಯಾದ ತುಟ್ಟಿಭತ್ತೆಯನ್ನು ನೀಡುತ್ತಿಲ್ಲ. ಈಗ ಕಾರ್ಮಿಕರಿಗೆ ಸಿಗುತ್ತಿರುವುದು ಸಾವಿರ ಬೀಡಿಗಳಿಗೆ ರೂ.116 ಮಾತ್ರ. ಸರಕಾರ ನೀಡಿದ ಆದೇಶದಂತೆ ಎಪ್ರಿಲ್ 1ರಿಂದಲೇ ಏರಿದ ತುಟ್ಟಿಭತ್ತೆ ಬೀಡಿ ಕಾರ್ಮಿಕರಿಗೆ ಪಾವತಿಸಬೇಕು ಎಂದು ಆಗ್ರಹಿಸಿ ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಒಕ್ಕೂಟ (ಸಿಐಟಿಯು) ಮತ್ತು ಉಡುಪಿ ತಾಲೂಕು ಬೀಡಿ ಲೇಬರ್ ಯೂನಿಯನ್ (ಎಐಟಿಯುಸಿ) ಜಂಟಿ ನೇತೃತ್ವದಲ್ಲಿ ಜುಲಾಯಿ 17 ರಂದು ಬೀಡಿ ಕಾರ್ಮಿಕರು ಉಡುಪಿಯ ಭಾರತ್ ಬೀಡಿ ವರ್ಕ್ಸ್ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಒಕ್ಕೂಟದ ಜಿಲ್ಲಾ ಅಧ್ಯಕ್ಷ ಮಹಾಬಲ ವಡೇರಹೋಬಳಿ, ಎಐಟಿಯುಸಿ ಒಕ್ಕೂಟದ ಸೀತಾರಾಮ್ ಬೇ–ರಿಂಜೆ ಮಾತನಾಡಿದರು. ಸಿಐಟಿಯು ಒಕ್ಕೂಟದ ತಾಲೂಕು ಅ ಧ್ಯಕ್ಷ ಕೆ.ಲಕ್ಷ್ಮಣ್, ಕಾರ್ಯದರ್ಶಿ ಶಶಿಕಲಾ ಗಿರೀಶ್ ಸಿಐಟಿಯು ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಪಿ.ವಿಶ್ವನಾಥ ರೈ, ಎಐಟಿಯುಸಿ ಮುಖಂಡರಾದ ಕೆ.ವಿ.ಭಟ್ ಮತ್ತಿತರರು ಪಾಲ್ಗೊಂಡಿದ್ದರು.

ಕಾರ್ಕಳದಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ:

ಹೆಚ್ಚಿದ ತುಟ್ಟಿಭತ್ತೆ ಎಪ್ರಿಲ್ 1ರಿಂದ ಬಾಕಿ ಇರುವುದನ್ನೂ ಒಳಗೊಂಡು ಬೀಡಿ ಕಾರ್ಮಿಕರಿಗೆ ನೀಡಬೇಕೆಂದು ಆಗ್ರಹಿಸಿ ಸಿಐಟಿಯು ಸಂಯೋಜಿತ ಬೀಡಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಜುಲಾಯಿ 23 ರಂದು ಬೀಡಿ ಕಾರ್ಮಿಕರು ಕಾರ್ಕಳದಲ್ಲಿನ ಭಾರತ್ ಬೀಡಿ ಬ್ರಾಂಚ್‌ನ ಎದುರು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಸಮಿತಿ ಸದಸ್ಯ ಬಿ.ಎಂ.ಭಟ್, ಸಂಘದ ಅಧ್ಯಕ್ಷ ಲಕ್ಷ್ಮಣ್ ಮತ್ತಿತರರು ಭಾಗವಹಿಸಿದ್ದರು. ●



ಕುಂದಾಪುರ: ರತ್ನಾ ಕೊಠಾರಿ ಕೊಲೆ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಸಿಪಿಐ(ಎಂ) ಪ್ರತಿಭಟನೆ

ಶಿರೂರು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ರತ್ನಾ ಕೊಠಾರಿ ಕೊಲೆ ಪ್ರಕರಣದ ಆರೋಪಿಗಳನ್ನು ಬಂಧಿಸಬೇಕೆಂದು ಕುಂದಾಪುರ ಶಾಸ್ತ್ರಿ ಸರ್ಕಲಿನ ಬಳಿ ಸಿಪಿಐ(ಎಂ) ವತಿಯಿಂದ ಜೂನ್ 24, 2014ರಂದು ಪ್ರತಿಭಟನೆ ನಡೆಯಿತು. ರಾಜ್ಯವ್ಯಾಪಿ ಚಳುವಳಿಯ ಭಾಗವಾಗಿ ನಡೆದ ಈ ಪ್ರತಿಭಟನೆಯಲ್ಲಿ ಮತ ಪ್ರದರ್ಶನಕಾರರನ್ನುದ್ದೇಶಿಸಿ ಪಕ್ಷದ ತಾಲೂಕು ಕಾರ್ಯದರ್ಶಿ ಮಹಾಬಲ ವಡೇರ ಹೋಬಳಿ, ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್ ಮಾತನಾಡಿದರು. ಶಿರೂರಿನ ವಿದ್ಯಾರ್ಥಿನಿ ರತ್ನಾ ಕೊಠಾರಿ ಸಾವಿನ ಬಗ್ಗೆ ಸಮಗ್ರ ತನಿಖೆ ನಡೆಸಿ ನ್ಯಾಯ ಒದಗಿಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಮುಖಂಡರು ಸರಕಾರವನ್ನು ಒತ್ತಾಯಿಸಿದರು. ಆರೋಪಿಗಳನ್ನು ಈವರೆಗೂ ಬಂಧಿಸಲು ಸಾಧ್ಯವಾಗದುದಕ್ಕೆ ಆತಂಕ ವ್ಯಕ್ತಪಡಿಸಿದ ಅವರು ಈ ಹಿಂದೆ ಧರ್ಮಸ್ಥಳದ ಸೌಜನ್ಯ ಪ್ರಕರಣವು ಇದೇ ರೀತಿಯದ್ದಾಗಿದ್ದು, ಹೀಗೆ ವಿದ್ಯಾರ್ಥಿನಿಯರ ಮೇಲೆ ನಿರಂತರವಾಗಿ ಅತ್ಯಾಚಾರಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಇಂತಹ ಕೃತ್ಯಗಳು ನಡೆಯದಂತೆ ಪೋಲಿಸ್ ಇಲಾಖೆ ಸೂಕ್ತ ಭದ್ರತೆಯನ್ನು ಒದಗಿಸುವ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು. ಜಿಲ್ಲಾ ಸಮಿತಿಯ ಸದಸ್ಯ ಎಚ್.ನರಸಿಂಹ, ವೆಂಕಟೇಶ ಕೋಣಿ ಮಾತನಾಡಿದರು.



ರತ್ನ ಕೊಠಾರಿ ಕೊಲೆ ಖಂಡಿಸಿ ತೆಕ್ಕಟ್ಟೆಯಲ್ಲಿ ಎಸ್ಎಫ್ಐ, ಡಿವೈಎಫ್ಐಗಳ ಜಂಟಿ ಪ್ರತಿಭಟನೆ

ಉಜಿರೆ: ಅಲ್ಪಸಂಖ್ಯಾತ ಯುವ ಜೋಡಿ ಮೇಲೆ ಹಲ್ಲೆ ಸಂಘ ಪರಿವಾರದ 'ಅನೈತಿಕ ಪೋಲೀಸ್ ಗಿರಿ'



ವಿವಾಹ ನಿಶ್ಚಿತಾರ್ಥವಾದ ಕಾಲೇಜು ವಿದ್ಯಾರ್ಥಿನಿಯೋರ್ವಳು ತನ್ನ ಭಾವಿ ಪತಿಯೊಂದಿಗೆ ಉಜಿರೆ ಬಸ್‌ನಿಲ್ದಾಣದಲ್ಲಿ ನಿಂತಿದ್ದಾಗ ಹಿಂದೂ ಸಂಘಟನೆಗಳ ಕಾರ್ಯಕರ್ತರ ಗುಂಪೊಂದು ಅವರ ಮೇಲೆ ಮಾರಾಣಾಂತಿಕ ಹಲ್ಲೆ ನಡೆಸಿ ಗೂಂಡಾಗಿರಿ ಪ್ರದರ್ಶಿಸಿದ ಘಟನೆ ಉಜಿರೆಯಲ್ಲಿ ಜುಲೈ 16, 2014 ರಂದು ನಡೆದಿದೆ.

ಬುಧವಾರ ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಕಾರ್ಕಳ ಮೂಲದ ಮೂಡಬಿದ್ರೆಯ ಖಾಸಗಿ ಕಾಲೇಜಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿನಿ ವಿವಾಹ ನಿಶ್ಚಿತಾರ್ಥವಾದ ಮೂಡುಗೆರೆ ಮೂಲದ ತನ್ನ ಭಾವಿ ಪತಿ ಮಹಮ್ಮದ್ ಸಾಬೀರ್‌ನೊಂದಿಗೆ ಉಜಿರೆ ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ಏಕಾಏಕಿಯಾಗಿ ಸಂಘ ಪರಿವಾರದ 50 ಜನರ ಗುಂಪು ಇವರ ಮೇಲೆ ಎರಗಿದೆ. 'ಏ ಬ್ಯಾರಿ ಹಿಂದೂ ಹುಡುಗಿಯನ್ನು ಅಪಹರಿಸುತ್ತಿದ್ದೀಯಾ?' ಎಂದು ಹೇಳಿ ಆತನ ಮೇಲೆ ನೇರವಾಗಿ ಹಲ್ಲೆ ನಡೆಸಿದ್ದಾರೆ. ಯುವತಿ ಈತ ತನ್ನ ಭಾವೀ ಪತಿ ನಾನು ಮುಸ್ಲಿಂ ಯುವತಿ ಎಂದು ಹೇಳಿ ತನ್ನ ಕಾಲೇಜು ಗುರುತಿನ ಚೀಟಿಯನ್ನು ತೋರಿಸಿದರೂ ಲೆಕ್ಕಿಸದ ಗುಂಪು ಇವರ ಮೇಲೆ ಅತ್ಯಂತ ಅಮಾನವೀಯವಾಗಿ ಹಲ್ಲೆ ನಡೆಸಿದ್ದಲ್ಲದೆ ಲೈಂಗಿಕ ಕಿರುಕುಳವನ್ನು ನೀಡಿದ್ದಾರೆ.

ಈ ಘಟನೆ ನಡೆಯುತ್ತಿದ್ದಂತೆಯೇ ಮಾಹಿತಿ ಪಡೆದ ಬೆಳ್ತಂಗಡಿ ಪೊಲೀಸರ ತಂಡ ತಕ್ಷಣ ಸ್ಥಳಕ್ಕಾಗಮಿಸಿ ಹಲ್ಲೆಗೊಳಗಾದ ಯುವಕ ಯುವತಿಯರನ್ನು ಗುಂಪಿನಿಂದ ಪಾರು ಮಾಡಿದ್ದಾರೆ. ಮುಸ್ಲಿಂ ಯುವಕ ಯುವತಿಯರ ಮೇಲೆ ನಡೆದ ಹಲ್ಲೆಯ ವಿಚಾರ ಬಹಿರಂಗಗೊಳ್ಳುತ್ತಿದ್ದಂತೆ ನೂರಾರು ಸಂಖ್ಯೆಯಲ್ಲಿ ಜನ ಜಮಾಯಿಸಿ ಉಜಿರೆಯಲ್ಲಿ ಬಿಗುವಿನ ವಾತಾವರಣ ನಿರ್ಮಾಣಗೊಂಡಿತ್ತು. ಹೆಚ್ಚಿನ ಪೊಲೀಸರನ್ನು ನಿಯೋಜಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಘಟನಾ ಸ್ಥಳಕ್ಕೆ ಬಂಟ್ವಾಳ ಡಿ.ವೈ.ಎಸ್ಪಿ. ರಶ್ಮಿ ಪರಡ್ಡಿ, ಬೆಳ್ತಂಗಡಿ ಸರ್ಕಲ್ ಇನ್ಸ್‌ಪೆಕ್ಟರ್ ಲಿಂಗಪ್ಪ ಪೂಜಾರಿ, ಎಸ್. ಐ. ಪ್ರಕಾಶ್ ದೇವಾಡಿಗ ಸ್ಥಳದಲ್ಲಿಯೇ ಮೊಕ್ಕಾಂ ಹೂಡಿ ಪರಿಸ್ಥಿತಿ ನಿಭಾಯಿಸಿದರು. ಬೆಳ್ತಂಗಡಿ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಕೊಲೆಯತ್ನ, ಮಾನಭಂಗ, ಅಕ್ರಮಕೂಟ ಮೊದಲಾದ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಈಗಾಗಲೇ ಪೊಲೀಸರಿಗೆ ಘಟನೆಯ ವೀಡಿಯೋ ತುಣುಕುಗಳು ದೊರೆತಿದ್ದು ಆರೋಪಿಗಳ ಬಂಧನಕ್ಕೆ ವ್ಯಾಪಕ ಬಲೆ ಬೀಸಿದ್ದಾರೆ. ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.



ಯುವ ಜೋಡಿಯ ಮೇಲಿನ ಹಲ್ಲೆ ಮತ್ತು '(ಅ)ನೈತಿಕ ಪೋಲೀಸ್‌ಗಿರಿ' ಖಂಡಿಸಿ ಡಿವೈಎಫ್ಐ ಪ್ರತಿಭಟನೆ

ಸಾಮಾಜಿಕ ಜಾಲ ತಾಣದ ದುರುಪಯೋಗ:

ಸಂಘ ಪರಿವಾರ ಸೇರಿದಂತೆ ನೈತಿಕ ಪೊಲೀಸ್ ಗಿರಿಯ ಹೆಸರಿನಲ್ಲಿ ಅನೈತಿಕವಾಗಿ ಗೂಂಡಾಗಿರಿಯಲ್ಲಿ ತೊಡಗುವ ಗುಂಪು ತಮ್ಮ ಕ್ರಿಮಿನಲ್ ಕೆಲಸವನ್ನು ಮೊಬೈಲ್ ಮೂಲಕ ಚಿತ್ರೀಕರಿಸಿ ಸಾಮಾಜಿಕ ಜಾಲ ತಾಣದಲ್ಲಿ ಭಿತ್ತರಿಸುವ ಮೂಲಕ ವಿಕೃತ ಆನಂದವನ್ನು ಅನುಭವಿಸುತ್ತಿರುವುದು ಜಿಲ್ಲೆಯಾದ್ಯಂತ ಕಂಡುಬರುತ್ತಿದೆ. ಏಳೆಂಟು ವರ್ಷಗಳ ಹಿಂದೆ ಸಂಘ ಪರಿವಾರದ ಈ ರೀತಿಯ ಗೂಂಡಾಗಿರಿಯಲ್ಲಿ ಮಾನಸಿಕವಾಗಿ ನೊಂದ ಪಡುಬಿದ್ರಿಯ ಯುವತಿಯೋರ್ವಳು ಆತ್ಮಹತ್ಯೆಗೆ ಶರಣಾಗಿದ್ದರೂ ನೈತಿಕ ಪೊಲೀಸ್ ಗಿರಿ ಇನ್ನೂ ನಿಂತಿಲ್ಲ. ಇದರಲ್ಲಿ ಪೊಲೀಸರ ನಿರ್ಲಕ್ಷವೂ ಅಡಗಿದೆ ಎನ್ನುವುದು ಸತ್ಯ. ಇತ್ತೀಚೆಗಂತೂ ಜಿಲ್ಲೆಯಲ್ಲಿ ನೈತಿಕ ಪೊಲೀಸ್‌ಗಿರಿಯ ಹೆಸರಿನಲ್ಲಿ ಅಲ್ಲಲ್ಲಿ ಈ ರೀತಿಯ ಗೂಂಡಾಗಿರಿ ನಡೆದು ಅದರ ಚಿತ್ರೀಕರಣವು ಸಾಮಾಜಿಕ ಜಾಲ ತಾಣದಲ್ಲಿ ಹರಡುತ್ತಿರುವುದು ಮಾಮೂಲಾಗಿದೆ. ಇತ್ತೀಚಿನ ಉಜಿರೆ ಘಟನೆಯಲ್ಲಿ ಕೂಡಾ ಯುವತಿ–ಯುವಕನ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸಿದ್ದಲ್ಲದೆ ಇವರ ಫೋಟೊಗಳನ್ನು, ವೀಡಿಯೋಗಳನ್ನು ಮೊಬೈಲ್‌ಗಳಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲ ತಾಣಗಳಲ್ಲಿಯೂ ಬಿತ್ತರಿಸಿರುವುದಾಗಿಯೂ ತಿಳಿದುಬಂದಿದೆ. ಈ ಹಿಂದೆಯೂ ಉಜಿರೆಯಲ್ಲಿ ತಂದೆ ಮಗಳ ಮೇಲೆ, ಅಣ್ಣ ತಂಗಿಯ ಮೇಲೆ ಇದೇ ರೀತಿ ನೈತಿಕ ಪೊಲೀಸ್‌ಗಿರಿ ನಡೆದಿತ್ತು. ನೈತಿಕ ಪೊಲೀಸ್ ಗಿರಿಗೆ ಇನ್ನೂ ಕಡಿವಾಣ ಬೀಳದಿರುವುದು ಉಜಿರೆ ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಮಹಿಳಾ ರಕ್ಷಕರಿಂದ ಯುವತಿಯ ಮಾನಭಂಗಕ್ಕೆ ಯತ್ನ!

ಮಹಿಳೆಯರನ್ನು ಮಾತೆ, ದೇವತೆ ಎಂದು ಹೇಳಿ ಅವರ ರಕ್ಷಣೆಯ ಗುತ್ತಿಗೆಯನ್ನು ವಹಿಸಿಕೊಂಡಂತೆ ವರ್ತಿಸುತ್ತಿರುವ ಸಂಘ ಪರಿವಾರವು 'ಹೇಳುವುದು ಶಾಸ್ತ್ರ ಇಕ್ಕುವುದು ಗಾಳ' ಎಂಬ ಗಾದೆ ಮಾತಿನಂತೆ ಉಜಿರೆ ಘಟನೆಯಲ್ಲಿ ವರ್ತಿಸಿದೆ. ಉಜಿರೆಯಲ್ಲಿ ಕಾಲೇಜು ವಿದ್ಯಾರ್ಥಿನಿ ತನ್ನ ಬಾವಿ ಪತಿಯೊಂದಿಗೆ ಇದ್ದಾಗ ಸಂಘ ಪರಿವಾರ ಅವರ ಮೇಲೆ ನೈತಿಕ ಪೊಲೀಸ್ ಗಿರಿಯ ಹೆಸರಿನಲ್ಲಿ ಹಲ್ಲೆ ನಡೆಸುವ ನೆಪದಲ್ಲಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿ ಆಕೆ ತಾವು ಪೂಜಿಸುವ ಮಾತೆ, ದೇವತೆ ಎಂಬುದನ್ನೇ ಮರೆತು ತೀರಾ ವಿಕೃತವಾಗಿ ವರ್ತಿಸಿದ್ದಾರೆ. ಸಾರ್ವಜನಿಕವಾಗಿ ಆಕೆಯ ಮೈಮೇಲೆ ಕೈ ಹಾಕಿ ಆಕೆಯ ಬಟ್ಟೆಯನ್ನು ಎಳೆದಾಡಿ ಮಾನಭಂಗಕ್ಕೆ ಯತ್ನಿಸಿರುವುದು ಸಂಘ ಪರಿವಾರದ ವಿಕೃತ ಮನೋಭಾವಕ್ಕೆ ಸಾಕ್ಷಿಯಾಗಿದೆ.

'ಪ್ರಜಾಪ್ರಭುತ್ವ ವೇದಿಕೆ'ಯ ಕೃತ್ಯ?

ಸೌಜನ್ಯ ಅತ್ಯಾಚಾರ ಕೊಲೆ ಪ್ರಕರಣದ ಬಗ್ಗೆ ಹೋರಾಟ ನಡೆಸಲು ಸ್ಥಾಪಿತವಾದ ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿ ನೇತೃತ್ವದ ಪ್ರಜಾಪ್ರಭುತ್ವ ವೇದಿಕೆ ಈ ಘಟನೆಯ ಹಿಂದೆ ಇದೆ ಎನ್ನುವುದು ಘಟನೆಯ ಬಗ್ಗೆ ದೊರೆತ ವೀಡಿಯೋ ತುಣುಕುಗಳಿಂದ ಬಹಿರಂಗಗೊಂಡಿದೆ. ವೇದಿಕೆಯ ತಾಲೂಕು ಅಧ್ಯಕ್ಷ ರವಿ ಪೂಜಾರಿ ಬರೆಮೇಲು ಈ ನೈತಿಕ ಪೊಲೀಸ್ ಗಿರಿಯ ನೇತೃತ್ವ ವಹಿಸಿದ್ದರೆಂದು ತಿಳಿದು ಬಂದಿದೆ. ವಿಡಿಯೋ ತುಣುಕುಗಳ ಮೂಲಕ ಘಟನಾ ಸ್ಥಳದಲ್ಲಿ ನೆರೆದಿದ್ದವರ ಪೈಕಿ ಹೆಚ್ಚಿನವರು ಪ್ರಜಾಪ್ರಭುತ್ವ ವೇದಿಕೆಯ ಜಿಲ್ಲಾಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿಯವರ ಬೆಂಬಲಿಗರೆಂದು ಹೇಳಲಾಗುತ್ತಿದೆ. ಅಂದು ಉಜಿರೆ ಕಾಲೇಜು ವಿದ್ಯಾರ್ಥಿನಿಯ ಅತ್ಯಾಚಾರ, ಕೊಲೆ ಪ್ರಕರಣದ ವಿರುದ್ಧ ಹೋರಾಟಕ್ಕೆ ನೇತೃತ್ವ ನೀಡಿದ್ದ ಪ್ರಜಾಪ್ರಭುತ್ವ ವೇದಿಕೆ ನಿನ್ನೆ ಉಜಿರೆಯಲ್ಲಿ ವಿದ್ಯಾರ್ಥಿನಿಯ ಮಾನಭಂಗಕ್ಕೆ ಯತ್ನಿಸಿ ಮತ್ತು ಆಕೆಯ ಭಾವಿ ಪತಿಯ ಕೊಲೆಗೆ ಯತ್ನಿಸಿ ನೈತಿಕ ಪೊಲೀಸ್‌ಗಿರಿ ನಡೆಸುವ ಮೂಲಕ ತನ್ನ ನಿಜವಾದ ಬಣ್ಣವನ್ನು ಬಯಲು ಮಾಡಿದೆ ಎಂದು ಉಜಿರೆಯಲ್ಲಿ ನಾಗರಿಕರು ಮಾತನಾಡುತ್ತಿದ್ದಾರೆ. ■

'ಪಾಸ್' ಹೊಂದಿರುವ ವಿದ್ಯಾರ್ಥಿಗಳಿಗೆ ತಾರತಮ್ಯ ತಪ್ಪಿಸಲು ಒತ್ತಾಯ

ಹೆಚ್ಚುವರಿ ಬಸ್ ಬಿಡಲು ಆಗ್ರಹ

ರಿಯಾಯಿತಿ ದರದ ಪಾಸ್ ಹೊಂದಿರುವ ಕುಂದಾಪುರ ತಾಲೂಕಿನ ಗ್ರಾಮಾಂತರ ವಿದ್ಯಾರ್ಥಿಗಳಿಗೆ ತಾರತಮ್ಯ ಮಾಡುತ್ತಿರುವುದನ್ನು ತಪ್ಪಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಶನ್‌ನ ಒಂದು ನಿಯೋಗ ಜುಲೈ 24, 2014 ರಂದು ಕುಂದಾಪುರ ಕೆಎಸ್‌ಆರ್‌ಟಿಸಿ ಡಿಪೋ ವಿಭಾಗೀಯ ವ್ಯವಸ್ಥಾಪಕರನ್ನು ಭೇಟಿ ಮಾಡಿತು.

ಕುಂದಾಪುರದ ಶಾಲಾ ಕಾಲೇಜುಗಳಿಗೆ ಹೋಗಲು ಮತ್ತು ಬರಲು ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಹೆಚ್ಚು ಅವಲಂಬಿಸಿರುವ ಗ್ರಾಮಾಂತರ ವಿದ್ಯಾರ್ಥಿಗಳನ್ನು ರಿಯಾಯಿತಿ ದರದ ಪ್ರಯಾಣಿಕರು ಎಂಬ ಕಾರಣಕ್ಕೆ ಕಡೆಗಣಿಸಲಾಗುತ್ತಿದೆ. ಬೇರೆ ಪ್ರಯಾಣಿಕರು ಹತ್ತುವವರೆಗೆ ವಿದ್ಯಾರ್ಥಿಗಳಿಗೆ ಬಸ್ ಹತ್ತಲು ಪ್ರವೇಶ ನಿರಾಕರಿಸಲಾಗುತ್ತಿದ್ದು ಅವರನ್ನು ಬಸ್ಸಿನ ಹೊರಗೆ ಕಾಯಿಸಲಾಗುತ್ತಿದೆ. ಡಿಪೋ ವಿಧಿಸಿದ ಖೋಟಾವನ್ನು ತಲುಪಬೇಕು ಎಂಬುದು ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕರ ಸಬೂಬು. ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳ ಈ ಅನುಚಿತ ವರ್ತನೆಯಿಂದ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಅಲ್ಲದೇ ಈಗ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆಯೂ ಕಡಿಮೆಯಿದ್ದು ವಿದ್ಯಾರ್ಥಿಗಳು ನೂಕುನುಗ್ಗಲಿಗೆ ಒಳಗಾಗಬೇಕಾಗಿದೆ. ಹೀಗಾಗಿ ವಿದ್ಯಾರ್ಥಿಗಳ ಪ್ರಯಾಣಕ್ಕೆ ಅನುಕೂಲವಾಗುವಂತೆ ಶಾಲಾ ಕಾಲೇಜಿನ ಪ್ರಾರಂಭ ಹಾಗೂ ಬಿಡುವ ಸಮಯದಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಬಸ್‌ಗಳನ್ನು ಪ್ರಾರಂಭಿಸಲು ಕೆಎಸ್‌ಆರ್‌ಟಿಸಿ ವಿಭಾಗೀಯ ವ್ಯವಸ್ಥಾಪಕರನ್ನು ಒತ್ತಾಯಿಸಲಾಗಿದೆ.

ಜುಲೈ 21ರ ಸಂಜೆ ಕುಂದಾಪುರದ ಶಾಸ್ತ್ರೀ ಸರ್ಕಲ್‌ನಲ್ಲಿ ವಿದ್ಯಾರ್ಥಿಗಳಿಗೆ ತಾರತಮ್ಯ ಆಗುತ್ತಿರುವಾಗ ಎಸ್‌ಎಫ್‌ಐ ಕಾರ್ಯಕರ್ತರು ಮಧ್ಯಪ್ರವೇಶಿಸಿದ್ದರು. ಆಗ ವಿಭಾಗೀಯ ಕಛೇರಿಯಿಂದ ಆ ತಕ್ಷಣವೇ 4 ಸಿಬ್ಬಂದಿಗಳನ್ನು ಶಾಸ್ತ್ರಿ ಸರ್ಕಲ್‌ಗೆ ಕಳುಹಿಸಲಾಗಿತ್ತು. ಸರಕಾರಿ ಎಕ್ಸ್‌ಪ್ರೆಸ್ ಬಸ್ಸುಗಳಲ್ಲೂ ಕೂಡಾ ಸ್ಥಳೀಯ ವಿದ್ಯಾರ್ಥಿಗಳ ಪ್ರಯಾಣಕ್ಕೆ ಅವಕಾಶ ಕಲ್ಪಿಸಿಕೊಡಲಾಯಿತು. ವಿದ್ಯಾರ್ಥಿಗಳು ಮನೆಗಳಿಗೆ ತಲುಪಲು ಸರಕಾರಿ ಎಕ್ಸ್‌ಪ್ರೆಸ್ ಬಸ್ಸುಗಳ ಸೇವೆಯನ್ನು ಕೂಡಾ ಬಳಸಿಕೊಳ್ಳಬಹುದು ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ಅಧಿಕಾರಿ ಎಸ್‌ಎಫ್‌ಐನ ನಿಯೋಗಕ್ಕೆ ತಿಳಿಸಿದ್ದಾರೆ.

ನಿಯೋಗದಲ್ಲಿ ಎಸ್‌ಎಫ್‌ಐನ ತಾಲೂಕು ಅಧ್ಯಕ್ಷ ಗಣೇಶ್‌ದಾಸ್, ಕಾರ್ಯದರ್ಶಿ ಶ್ರೀಕಾಂತ್ ಹೆಮ್ಮಾಡಿ, ಅಫ್ರೀನ್, ಹರ್ಷ, ನಿತೀಶ್, ಅಕ್ಷಯ್, ಆಲ್ಡ್ರೀನ್ ಹಾಗೂ ಡಿವೈಎಫ್‌ಐನ ಸುರೇಶ್ ಕಲ್ಲಾಗರ, ಪ್ರಭಾಕರ್ ನೇರಳಕಟ್ಟೆ, ಗಣೇಶ್ ಕಲ್ಲಾಗರ್ ಉಪಸ್ಥಿತರಿದ್ದರು. ■



ಸ್ವತಃ ತಮ್ಮ ಅತ್ಯುನ್ನತ ಮುಖಂಡರೂ, ದೇಶದ ಪ್ರಧಾನ ಮಂತ್ರಿಗಳೂ ಆದ ನರೇಂದ್ರ ಮೋದಿಯವರೇ ಸಹಿ ಹಾಕಿರುವ, ಅನುಮೋದಿಸಿರುವ ಬ್ರಿಕ್ಸ್ ಶೃಂಗ ಸಭೆಯ ಜಂಟಿ ಘೋಷಣೆಯ ಒಕ್ಕಣಿಕೆಯನ್ನೇ ಉಳ್ಳ ಒಂದು ಒಮ್ಮತದ ನಿರ್ಣಯ ಮಂಡಿಸಲು ಕೂಡ ಒಪ್ಪದಿರುವುದು ಹಲವರಿಗೆ ಬಹಳ ವಿಚಿತ್ರವಾಗಿ ಕಂಡು ಬಂದಿದೆ. ಇಸ್ರೇಲ್ ಅನುಸರಿಸುತ್ತಿರುವ ಝಿಯೊನಿಸ್ಟ್ ಯೋಜನೆಯೊಂದಿಗೆ ಆರೆಸ್ಸೆಸ್/ಬಿಜೆಪಿ ಹೊಂದಿರುವ ಸೈದ್ಧಾಂತಿಕ ಮತ್ತು ರಾಜಕೀಯ ನಂಟನ್ನು ನೆನಪಿಸಿಕೊಂಡಾಗ ಮಾತ್ರವೇ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಇದನ್ನು ಮರೆಮಾಚಲು ಆರೆಸ್ಸೆಸ್/ಬಿಜೆಪಿ ಟಿಪ್ಪಣಿಗಾರರು ಹುಸಿತರ್ಕಗಳನ್ನು ಕೊಡುತ್ತಿದ್ದಾರೆ.



ಇಸ್ರೇಲಿ ಝಿಯೋನಿಸಂ ಮತ್ತು ಬಿಜೆಪಿ ಹಿಂದುತ್ವದ ಸೈದ್ಧಾಂತಿಕ ನಂಟು

ಸೀತಾರಾಮ್ ಯೆಚೂರಿ

ಪ್ಯಾಲೆಸ್ತೈನ್‌ನ ಗಾಝಾ ಪಟ್ಟಿಯಲ್ಲಿ ಅಸಹಾಯಕ ನಾಗರಿಕರ ಮೇಲೆ ಇಸ್ರೇಲಿ ದಾಳಿಗಳ ಬಗ್ಗೆ ಸಂಸತ್ತಿನಲ್ಲಿ ಆರಂಭದಲ್ಲಿ ಚರ್ಚೆಯನ್ನು ತಪ್ಪಿಸಲು ಬಿಜೆಪಿಯ ಹಟವಾರಿತನ ಕಾರಣ ಎಂದು ಭಾವಿಸಲಾಗಿತ್ತು. ಆದರೆ ವಾಸ್ತವವಾಗಿ ಅದು ಝಿಯೊನಿಸ್ಟ್ ಯೋಜನೆಯೊಂದಿಗೆ ಬಿಜೆಪಿ ಹೊಂದಿರುವ ನಂಟನ್ನು ಮರೆಮಾಚಲು ಮಾಡಿದ ಪ್ರಯತ್ನ ಎಂಬುದು ಈಗ ಸಂಸದೀಯ ಚರ್ಚೆಗಳಲ್ಲಿ ಸಾಬೀತಾಗಿದೆ.

ಸಂಸದೀಯ ಚರ್ಚೆಗಳಲ್ಲಿ ಬಿಜೆಪಿಯೊಂದನ್ನು ಬಿಟ್ಟು, ಸುಮಾರಾಗಿ ಇತರ ಎಲ್ಲ ಪಕ್ಷಗಳು ಸಂಸತ್ತು ಈ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಬೇಕು, ಅದರಲ್ಲಿ ಇತ್ತೀಚಿನ ಸಮಯದ ಒಂದು ಅತ್ಯಂತ ಅಮಾನವೀಯ ಮಿಲಿಟರಿ ದಾಳಿಗಳಲ್ಲಿ ನಾಗರಿಕರ ಸಾವನ್ನು ಖಂಡಿಸಬೇಕು ಎಂದು ಆಗ್ರಹಿಸಿದವು. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಸಾವುಗಳ ಸಂಖ್ಯೆ ಹೆಚ್ಚುತ್ತಲೇ ಇದೆ, 700ನ್ನು ತಲುಪಿದೆ. ಇದರಲ್ಲಿ 77ಶೇ. ನಾಗರಿಕರು, ಅವರಲ್ಲಿ ಮೂರನೇ ಒಂದರಷ್ಟು ಮಹಿಳೆಯರು ಮತ್ತು ಮಕ್ಕಳು. ಈ ಇಸ್ರೇಲೀ ಆಕ್ರಮಣ ಎಲ್ಲ ಅಂತರ್ರಾಷ್ಟ್ರೀಯ ಮಾನವೀಯ ಕಾನೂನುಗಳ ಮತ್ತು ಮಿಲಿಟರಿ ವೈಷಮ್ಯಗಳ ಎದುರಲ್ಲಿ ನಾಗರಿಕರ ರಕ್ಷಣೆಗೆ ಸಂಬಂಧಪಟ್ಟ ಎಲ್ಲ ಅಂತರ್ರಾಷ್ಟ್ರೀಯ ಅಧಿನಿರ್ಣಯಗಳ ಉಲ್ಲಂಘನೆ ಎಂಬುದನ್ನು ವಿಶ್ವಸಂಸ್ಥೆ ಮತ್ತು ಇಟೆಲಿ, ಜರ್ಮನಿಯಂತಹ ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳು ಮತ್ತೆ-ಮತ್ತೆ ಹೇಳಿವೆ.

ಅಟಲ ಬಿಹಾರಿ ವಾಜಪೇಯಿ ಪ್ರಧಾನ ಮಂತ್ರಿಯಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರಕ್ಕೆ ನೇತೃತ್ವ ನೀಡಿದ್ದಾಗ ಸಂಸತ್ತು ಇರಾಕಿನಲ್ಲಿ ಅಮೆರಿಕಾದ ಮಿಲಿಟರಿ ಆಕ್ರಮಣದ ವಿರುದ್ಧ ಒಂದು ಒಮ್ಮತದ ನಿರ್ಣಯವನ್ನು ಅಂಗೀಕರಿಸಿತ್ತು ಎಂಬುದನ್ನು ಎನ್‌ಡಿಎ ಪಕ್ಷಗಳನ್ನು ಬಿಟ್ಟು ಬೇರೆಲ್ಲ ಪಕ್ಷಗಳ ಸಂಸತ್ ಸದಸ್ಯರು ನೆನಪಿಸಿದರು. ಹಾಗೇ ಕನಿಷ್ಟ ಅಂತಹ ಒಂದು ಮಾನವೀಯ ಆಧಾರದ ನಿರ್ಣಯವನ್ನು ಅಂಗೀಕರಿಸಿ ಗಾಝಾ ಪಟ್ಟಿಯಲ್ಲಿ ವ್ಯಾಪಕ ಪ್ರಮಾಣದಲ್ಲಿ ನಾಗರಿಕರ ಸಾವು-ನೋವುಗಳು ಮತ್ತು ಆಸ್ತಿಪಾಸ್ತಿಗಳ ನಾಶವನ್ನು ಖಂಡಿಸಬೇಕು ಎಂದು ಆಗ್ರಹಿಸಿದರು. ನರೇಂದ್ರ ಮೋದಿ ನೇತೃತ್ವದ ಸರಕಾರ ಈ ಸೂಚನೆಯನ್ನು ನಿರಾಕರಿಸಿದ್ದರಿಂದ ರಾಜ್ಯಸಭೆಯಲ್ಲಿ ಸಮಸ್ತ ವಿರೋಧ ಪಕ್ಷಗಳು ಸಭಾತ್ಯಾಗ ಮಾಡಿದವು. ಸಮಾಲೋಚನೆಗಳಿಗೆಂದು ಒಂದು ಕರಡು ನಿರ್ಣಯವನ್ನು ತಯಾರಿಸಲಾಗಿತ್ತು. ಆದರೆ ಅದನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ತಿರಸ್ಕರಿಸಿತು.


ಈ ಹಂತದಲ್ಲಿ ಸಿಪಿಐ(ಎಂ) ಇನ್ನೊಂದು ಸೂಚನೆಯನ್ನು ಮುಂದಿಟ್ಟಿತು. ಭಾರತದ ಪ್ರಧಾನ ಮಂತ್ರಿಗಳು ಇತ್ತೀಚೆಗೆ ಬ್ರೆಝಿಲ್‌ನಲ್ಲಿ ಮುಕ್ತಾಯಗೊಂಡ ಬ್ರಿಕ್ಸ್ ಶೃಂಗ ಸಭೆಯ ಜಂಟಿ ಘೋಷಣೆಗೆ ಸಹಿ ಹಾಕಿದ್ದಾರೆ. ಅದನ್ನು ಅನುಮೋದಿಸಿದ್ದಾರೆ. ಅದರಲ್ಲಿ ಈ ಕುರಿತು ಇರುವ ಪರಿಚ್ಛೇದವನ್ನು ಯಥಾವತ್ತಾಗಿ ತೆಗೆದು-ಕೊಂಡು ಅದನ್ನು ಸಂಸತ್ತಿನ ನಿರ್ಣಯವಾಗಿ ಅಂಗೀಕರಿಸಬಹುದು ಎಂಬುದು ಆ ಸೂಚನೆ. ವಿಚಿತ್ರವೆಂದರೆ ತನ್ನದೇ ಮುಖಂಡರು ಭಾರತದ ಪ್ರಧಾನ ಮಂತ್ರಿಯಾಗಿ ಸಮ್ಮತಿಪೂರ್ವಕವಾಗಿ ಸಹಿ ಹಾಕಿದ್ದನ್ನು ಕೂಡ ಸ್ವೀಕರಿಸಲು ಬಿಜೆಪಿ ನಿರಾಕರಿಸಿದೆ.

ವಿಚಿತ್ರ ನಿರಾಕರಣೆ

ಬ್ರಿಕ್ಸ್ ಘೋಷಣೆಯನ್ನು ಸರಿಯಾಗಿ ಓದಿದರೆ ಈ ನಿರಾಕರಣೆ ಇನ್ನೂ ವಿಚಿತ್ರವಾಗಿ ಕಾಣುತ್ತದೆ. ಘೋಷಣೆಯ ಪರಿಚ್ಛೇದ 38 ಹೀಗೆ ಹೇಳುತ್ತದೆ: "ಅರಬ್-ಇಸ್ರೇಲಿ ಸಂಘರ್ಷಕ್ಕೆ ಸಾರ್ವತ್ರಿಕವಾಗಿ ಮಾನ್ಯತೆ ಪಡೆದ ಅಂತರ್ರಾಷ್ಟ್ರೀಯ ಕಾನೂನು ಚೌಕಟ್ಟಿನ ಆಧಾರದಲ್ಲಿ ಒಂದು ಸಮಗ್ರ, ನ್ಯಾಯಪೂರ್ಣ ಮತ್ತು ಬಹುಕಾಲ ಉಳಿಯುವ ಇತ್ಯರ್ಥಕ್ಕೆ ಕೊಡುಗೆ ನೀಡಲು ನಾವು ಬದ್ಧ ಎಂಬುದನ್ನು ಪುನರುಚ್ಚರಿಸುತ್ತೇವೆ. ಈ ಚೌಕಟ್ಟಿನಲ್ಲಿ ಸಂಬಂಧಿತ ವಿಶ್ವಸಂಸ್ಥೆಯ ನಿರ್ಣಯಗಳು, ಮ್ಯಾಡ್ರಿಡ್ ಸೂತ್ರಗಳು ಮತ್ತು ಅರಬ್ ಶಾಂತಿ ಮುತುವರ್ಜಿ ಕೂಡ ಸೇರಿವೆ. ಇಸ್ರೇಲಿ-ಪ್ಯಾಲೆಸ್ತೀನೀ ಸಂಘರ್ಷದ ಪರಿಹಾರ ಮಧ್ಯಪೂರ್ವ ಪ್ರದೇಶದಲ್ಲಿ ಒಂದು ಬಹುಕಾಲ ಉಳಿಯಬಲ್ಲ ಶಾಂತಿ ಸ್ಥಾಪನೆಯ ಒಂದು ಮೂಲಭೂತ ಭಾಗವಾಗಿದೆ. ಎಂದು ನಾವು ನಂಬಿದ್ದೇವೆ. ಮಾತುಕತೆಗಳನ್ನು ಪುನರಾರಂಭಿಸಿ ಆ ಮೂಲಕ ಅದು ಪ್ರಾದೇಶಿಕ ಸಾತತ್ಯದ ಮತ್ತು ಆರ್ಥಿಕವಾಗಿ ಸಮರ್ಥವಾದ, ಜೂನ್ 4, 1967ರ ರೇಖೆಗಳ ಆಧಾರದಲ್ಲಿ ಅಂತರ್ರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಗಡಿಗಳೊಳಗೆ, ಪೂರ್ವ ಜೆರುಸಲೇಂ ಅನ್ನು ರಾಜಧಾನಿಯಾಗಿ ಹೊಂದಿರುವ, ಇಸ್ರೇಲಿನ ಪಕ್ಕದಲ್ಲಿ ಶಾಂತಿಯೊಂದಿಗಿರುವ ಪ್ಯಾಲೆಸ್ತೈನ್ ಪ್ರಭುತ್ವ ಇರುವ ಒಂದು ಎರಡು-ಪ್ರಭುತ್ವದ ಪರಿಹಾರಕ್ಕೆ ದಾರಿ ಮಾಡಿ ಕೊಡಬೇಕು. ನಾವು, ಆಕ್ರಮಿತ ಪ್ಯಾಲೆಸ್ತೈನ್ ಪ್ರದೇಶಗಳಲ್ಲಿ ಇಸ್ರೇಲ್ ಸರಕಾರ ಸತತವಾಗಿ ಜನವಸತಿಗಳನ್ನು ನಿರ್ಮಿಸುವುದನ್ನು ಮತ್ತು ವಿಸ್ತರಿಸುವುದನ್ನು ವಿರೋಧಿಸುತ್ತೇವೆ. ಇದು ಅಂತರ್ರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುತ್ತದೆ, ಶಾಂತಿ ಪ್ರಯತ್ನಗಳನ್ನು ಗಂಭೀರವಾಗಿ ಬುಡಮೇಲು ಮಾಡುತ್ತದೆ ಎರಡು-ಪ್ರಭುತ್ವಗಳ ಕಾರ್ಯಸಾಧ್ಯತೆಗೆ ಬೆದರಿಕೆ ಒಡ್ಡುತ್ತದೆ. ಒಂದು ರಾಷ್ಟ್ರೀಯ ಐಕ್ಯತೆ-ಯ ಸರಕಾರದ ಸ್ಥಾಪನೆಯೂ ಸೇರಿದಂತೆ ಪ್ಯಾಲೆಸ್ತೈನ್ ಒಳಗಿನ ಐಕ್ಯತೆಯನ್ನು ಸಾಧಿಸುವ ಇತ್ತೀಚಿನ ಪ್ರಯತ್ನಗಳನ್ನು ಮತ್ತು ಒಂದು ಪ್ರಜಾಸತ್ತಾತ್ಮಕ ಮತ್ತು ಉಳಿಯಬಲ್ಲ ಪ್ಯಾಲೆಸ್ತೈನ್ ಪ್ರಭುತ್ವವನ್ನು ಕ್ರೋಡೀಕರಿಸುವ ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವತ್ತ ಕೈಗೊಳ್ಳುವ ಕ್ರಮಗಳನ್ನು ನಾವು ಸ್ವಾಗತಿಸುತ್ತೇವೆ. ಹಾಗೂ ಪ್ಯಾಲೆಸ್ತೈನ್ ವಹಿಸಿಕೊಂಡ ಬಾಧ್ಯತೆಗಳಿಗೆ ಈ ಪಕ್ಷಗಳು ಪೂರ್ಣವಾಗಿ ಬದ್ಧವಾಗಿರಬೇಕು ಎಂದು ಕರೆ ನೀಡುತ್ತೇವೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಇಸ್ರೇಲಿ-ಪ್ಯಾಲೆಸ್ತೈನ್ ಸಂಘರ್ಷಗಳಿಗೆ ಸಂಬಂಧಪಟ್ಟಂತೆ ವಿಶ್ವಸಂಸ್ಥೆಯ ಸನ್ನದಿನ ಅಡಿಯಲ್ಲಿ ತನ್ನ ಕಾರ್ಯಾಧಿಕಾರಗಳನ್ನು ಪೂರ್ಣವಾಗಿ ಚಲಾಯಿಸಬೇಕು ಎಂದು ಕರೆ ನೀಡುತ್ತೇವೆ. ನಾವು, ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2014ನ್ನು ಪ್ಯಾಲೆಸ್ತೈನ್ ಜನತೆಯೊಂದಿಗೆ ಅಂತರ್ರಾಷ್ಟ್ರೀಯ ಸೌಹಾರ್ದದ ವರ್ಷ ಎಂದು ಘೋಷಿಸುವ ನಿರ್ಣಯ ಕೈಗೊಂಡಿದ್ದನ್ನು ತೃಪ್ತಿಯಿಂದ ನೆನಪಿಸಿಕೊಳ್ಳುತ್ತೇವೆ, ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾಮಗಾರಿ ಸಂಸ್ಥೆ (ಯುಎನ್‌ಆರ್‌ಡಬ್ಲ್ಯುಎ) ಪ್ಯಾಲೆಸ್ತೀನೀ ನಿರಾಶ್ರಿತರಿಗೆ ನೆರವು ಮತ್ತು ರಕ್ಷಣೆ ಒದಗಿಸುವಲ್ಲಿ ಮಾಡುತ್ತಿರುವ ಪ್ರಯತ್ನಗಳನ್ನು ಸ್ವಾಗತಿಸುತ್ತೇವೆ ಹಾಗೂ ಈ ಸಂಸ್ಥೆಯ ಚಟುವಟಿಕೆಗಳನ್ನು ಮುಂದೆಯೂ ಬೆಂಬಲಿಸುವಂತೆ ಅಂತರ್ರಾಷ್ಟ್ರೀಯ ಸಮುದಾಯವನ್ನು ಪ್ರೋತ್ಸಾಹಿಸುತ್ತೇವೆ".

ಬಿಜೆಪಿ/ಎನ್‌ಡಿಎ ಭಾರತದ ಸಂಸತ್ತು ಈ ಮೇಲೆ ಕೊಟ್ಟ ಪಠ್ಯವನ್ನೇ ಉಳ್ಳ ಒಂದು ಒಮ್ಮತದ ನಿರ್ಣಯವನ್ನು ಅಂಗೀಕರಿಸಲು ಅವಕಾಶವನ್ನೇ ನಿರಾಕರಿಸುವ ಮೂಲಕ ಈ ಮೇಲಿನ ಘೋಷಣೆಗೆ ಪ್ರಧಾನ ಮಂತ್ರಿಗಳ ಮಂಜೂರಾತಿಯನ್ನೇ ತಾವು

→



ಓ, ಇಬ್ಬರೂ ಗೆಳೆಯರು –ಬೇಟೆ ನಾಯಿಯೂ, ಮೊಲದ ಮರಿಯೂ!
ದಿ ಹಿಂದೂನಲ್ಲಿ ಸುರೇಂದ್ರನ್ ವ್ಯಂಗ್ಯ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪ್ಯಾಲೆಸ್ತೀನಿ ಧ್ಯೇಯಸಾಧನೆಗೆ ಭಾರತದ ಸೌಹಾರ್ದದ ದೀರ್ಘಕಾಲದ ಪರಂಪರೆಯನ್ನು ನಿರಾಕರಿಸುತ್ತ ಬಿಜೆಪಿ ಟಿಪ್ಪಣಿಗಾರರು ತಮ್ಮ ಎಂಪಿಗಳಿಗೆ ಸಂಸತ್ತಿನಲ್ಲಿ ಚರ್ಚೆಯ ಮೊದಲು ನೀಡಿದ ಸಲಹೆಗಳಲ್ಲಿ ಇದೇ ಸೈದ್ಧಾಂತಿಕ ನಂಟನ್ನು ಹೀಗೆ ಪ್ರದರ್ಶಿಸಿದ್ದಾರೆ: "ಇಸ್ರೇಲ್ ಭಾರತದ ಒಂದು ಮಿತ್ರ ದೇಶ, ನಮ್ಮ ಆಯಕಟ್ಟಿನ ಹಿತಗಳ ಬಗ್ಗೆ ಸಮಸ್ತ ಒಐಸಿ(ಇಸ್ಲಾಮೀ ದೇಶಗಳ ಸಂಘಟನೆ)ಗಿಂತ ಹೆಚ್ಚು ಗಮನ ನೀಡುವ ದೇಶ. ನಮ್ಮಲ್ಲಿ ಕೆಲವರು ಇಸ್ರೇಲ್ ಪರ ನಮ್ಮ ಪಕ್ಷಪಾತವನ್ನು ಪ್ರದರ್ಶಿಸಬೇಕಾದ ಸಮಯವಿದು. ಮತ್ತು ಈ ಸಂಸದೀಯ ಚರ್ಚೆ ನಮ್ಮ ನಿಜವಾದ ಮಿತ್ರರ ಪರವಾಗಿ ನಿಲ್ಲಲು ಬೇರೆ ಯಾವುದೇ ಸಂದರ್ಭದಂತೆ ಒಂದು ಒಳ್ಳೆಯ ಸಂದರ್ಭ."

→

ಒಪ್ಪುವುದಿಲ್ಲ ಎನ್ನುವ ರೀತಿಯಲ್ಲಿ ವರ್ತಿಸಿತು.

ಇಂತಹ ಒಂದು ನಿರ್ಣಯದ ಮೂಲಕ ಪ್ಯಾಲೆಸ್ತೀನಿಗಳ ಧ್ಯೇಯಸಾಧನೆಗೆ ಭಾರತದ ಬಹುಕಾಲದ ಸೌಹಾರ್ದ ಮುಂದುವರೆದಿದೆ ಎಂಬುದನ್ನು ಜಗತ್ತಿಗೆ ತಿಳಿಸಬಹುದಾಗಿತ್ತು ಮತ್ತು ಸುಮಾರು ಏಳು ದಶಕಗಳ ಒಂದು ದೈತ್ಯ ಸಾಮ್ರಾಜ್ಯಶಾಹಿ ಪಿತೂರಿಯಿಂದಾಗಿ ಸ್ವಂತ ನಾಡೊಂದನ್ನು ಹೊಂದುವ ಮೂಲಭೂತ ಹಕ್ಕಿನಿಂದ ವಂಚಿತರಾಗಿರುವ ಪ್ಯಾಲೆಸ್ತೀನಿಯನ್ನರಿಗೆ ಭಾರತ ಸಂಪೂರ್ಣ ಬೆಂಬಲವನ್ನು ತೋರಿಸಬಹುದಾಗಿತ್ತು.

ಇಸ್ರೇಲಿ ದಮನದೊಂದಿಗೆ ನಂಟು

ವಾಸ್ತವವಾಗಿ, ಭಾರತದ ಸಂಸತ್ತಿನಲ್ಲಿ ಹೀಗಾಗಲು ಅವಕಾಶವನ್ನು ಬಿಜೆಪಿ ನಿರಾಕರಿಸಿರುವುದು ಇಸ್ರೇಲ್ ಅನುಸರಿಸುತ್ತಿರುವ ಝಿಯೊನಿಸ್ಟ್ ಯೋಜನೆಯೊಂದಿಗೆ ಆರೆಸ್ಸೆಸ್/ಬಿಜೆಪಿ ಹೊಂದಿರುವ ಸೈದ್ಧಾಂತಿಕ ಮತ್ತು ರಾಜಕೀಯ ನಂಟನ್ನು ದೃಢಪಡಿಸಿದೆ. ಒಂದು ರೀತಿಯಲ್ಲಿ ಇಸ್ರೇಲ್ ನಿರಂತರವಾಗಿ ಅನುಸರಿಸುತ್ತಿರುವ ಈ ಯೋಜನೆ ಭಾರತದ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಗಣತಂತ್ರವನ್ನು ರೂಪಾಂತರಿಸುವ ಆರೆಸ್ಸೆಸ್ ಪ್ರಯತ್ನಗಳನ್ನು ಅನುಮೋದಿಸುವಂತದ್ದು.

ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ವಾದರಿಯ 'ಹಿಂದೂರಾಷ್ಟ್ರ'ದ ಆರೆಸ್ಸೆಸ್‌ನ ಸೈದ್ಧಾಂತಿಕ ಯೋಜನೆ ಮತ್ತು ಕಣ್ಣೋಟವನ್ನು ಮೈನಡುಗಿಸುವ ರೀತಿಯಲ್ಲಿ ವ್ಯಕ್ತಗೊಳಿಸುತ್ತ ಆರೆಸ್ಸೆಸ್ ಗುರೂಜಿ ಗೋಲ್ವಾಲ್ಕರ್ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಭಾರತದಲ್ಲಿಯೂ ಇದೇ ರೀತಿಯಲ್ಲಿ ಎಲ್ಲ ಧಾರ್ಮಿಕ ಅಲ್ಪಸಂಖ್ಯಾತರು ಇಲ್ಲಿ ಬದುಕಬೇಕೆಂದಿದ್ದರೆ "ಎರಡನೇ ದರ್ಜೆಯ ನಾಗರಿಕರಾಗಿ" ತಮ್ಮನ್ನು "ಹಿಂದೂ ಜೀವನ ಶೈಲಿಗೆ" ಅಧೀನ ಪಡಿಸಿಕೊಂಡೇ ಬದುಕಬೇಕಾದ ಒಂದು ದೇಶದ ಬಗ್ಗೆ ಬರೆದಿದ್ದರು. ಇದು ಸ್ವತಂತ್ರ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪಕ್ಕೆ ತದ್ವಿರುದ್ಧವಾದದ್ದು.

ಪ್ಯಾಲೆಸ್ಟೈನ್‌ನೊಂದಿಗೆ ಸೌಹಾರ್ದ ಎಂದರೆ ಅದು ಭಾರತದಲ್ಲಿ ಮುಸ್ಲಿಮರ ತುಷ್ಟೀಕರಣವಾಗುತ್ತದೆ ಎಂಬ ಬಿಜೆಪಿ ತರ್ಕವಂತೂ ಇನ್ನೂ ನಿಕೃಷ್ಟ. 'ಹಿಂದೂ ವೋಟ್ ಬ್ಯಾಂಕ್'ನ್ನು ಕ್ರೋಡೀಕರಿಸುವ ಅತ್ಯಂತ ಹೀನ ವೋಟ್‌ಬ್ಯಾಂಕ್ ರಾಜಕೀಯವನ್ನು ನಡೆಸುವವರೇ ಸ್ವಂತ ನಾಡಿಗಾಗಿ ಪ್ಯಾಲೆಸ್ತೇನಿಯನ್ನರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡುವವರದ್ದು 'ತುಷ್ಟೀಕರಣ' ಎಂದು ಆಪಾದಿಸುತ್ತಿದ್ದಾರೆ.

ಈ ಗುರಿ ಸಾಧನೆಯಲ್ಲಿ ಹಿಟ್ಲರನ ವಿಧಿ-ವಿಧಾನಗಳನ್ನು ಗೋಲ್ವಾಲ್ಕರ್ ಬಹಳ ಪ್ರಶಂಸಿಸುತ್ತಾರೆ. "ಜರ್ಮನಿಕ್ ಬುಡಕಟ್ಟುಗಳು ಸಮಸ್ತ ಯುರೋಪನ್ನು ಅಧೀನ ಪಡಿಸಿಕೊಳ್ಳುವಂತೆ ಪ್ರೇರೇಪಿಸಿದ ಪ್ರಾಚೀನ ಜನಾಂಗ ಸ್ಫೂರ್ತಿ ಜರ್ಮನಿಯಲ್ಲಿ ಪುನಃ ಜಾಗೃತಗೊಂಡಿದೆ, ಇದರ ಫಲಿತಾಂಶವಾಗಿ ರಾಷ್ಟ್ರ ಗತ್ಯಂತರವಿಲ್ಲದೆ ತನ್ನ ಸುಲಿಗೆಕೋರ ಪೂರ್ವಜರು ಬಿಟ್ಟುಹೋದ ಪರಂಪರೆಗಳು ಆಗಲೇ ನಿರ್ಧರಿಸಿ ಬಿಟ್ಟಿರುವ ಆಕಾಂಕ್ಷೆಗಳನ್ನು ಅನುಸರಿಸುತ್ತಿದೆ. ನಮ್ಮಲ್ಲಿಯೂ ಹೀಗೆಯೇ ಆಗುತ್ತಿದೆ: ನಮ್ಮ ಜನಾಗ ಸ್ಫೂರ್ತಿ ಮತ್ತೊಮ್ಮೆ ಜಾಗೃತಗೊಂಡಿದೆ. ನಮ್ಮ ಜನಾಂಗ ಹುಟ್ಟಿಸಿರುವ ಆಧ್ಯಾತ್ಮಿಕ ದೈತ್ಯರು ಇಂದು ವಿಶ್ವದಲ್ಲಿ ರಾಜಗಾಂಭೀರ್ಯದಿಂದ ಮೆರೆಯುತ್ತಿರುವುದೇ ಇದಕ್ಕೆ ಸಾಕ್ಷಿ" ಎಂದಿದ್ದಾರೆ ಗೋಲ್ವಾಲ್ಕರ್ 1939ರಲ್ಲಿ ಪ್ರಕಟವಾದ "ವಿ ಆರ್ ಅವರ್ ನೇಶನ್‌ಹುಡ್ ಡಿಫೈನ್ಡ್' ನಲ್ಲಿ (ಪುಟ 39). ಫ್ಯಾಸಿಸ್ಟ್ ಜರ್ಮನಿಯ ಬಗ್ಗೆ ಇದಕ್ಕಿಂತ ನಗ್ನವಾದ ಪ್ರಶಂಸೆ ಬೇರೆ ಇರಲು ಸಾಧ್ಯವೇ?

ಇನ್ನೂ ಮುಂದುವರೆದು ಅವರು ಅದೇ ಪುಸ್ತಕದ ಪುಟ 39ರಲ್ಲಿ ಹೀಗೆ ಹೇಳುತ್ತಾರೆ: ತನ್ನ ಜನಾಂಗ ಮತ್ತು ಸಂಸ್ಕೃತಿಯ ಶುದ್ಧತೆಯನ್ನು ಉಳಿಸಿಕೊಳ್ಳಲು ಜರ್ಮನಿ ತನ್ನ ದೇಶದಲ್ಲಿ ಸೆಮಿಟಿಕ್ ಜನಾಂಗಗಳನ್ನು -ಯೆಹೂದ್ಯರನ್ನುಖಾಲಿ ಮಾಡಿ ಜಗತ್ತನ್ನೇ ದಂಗುಗೊಳಿಸಿದ್ದಾರೆ. ಜನಾಂಗ ಹೆಮ್ಮೆಯೆಂಬುದು ಇಲ್ಲಿ ತನ್ನ ಅತ್ಯುನ್ನತ ಮಟ್ಟದಲ್ಲಿ ಪ್ರಕಟಗೊಂಡಿದೆ. ಮೂಲದವರೆಗೆ ಹೋಗುವ ಭಿನ್ನತೆಗಳನ್ನು ಹೊಂದಿರುವ ಜನಾಂಗಗಳು ಮತ್ತು ಸಂಸ್ಕೃತಿಗಳು ಹೇಗೆ ಒಂದು ಐಕ್ಯ ಸಮಸ್ತವಾಗಿ ಬೆರೆತುಕೊಳ್ಳುವುದು ಖಂಡಿತಾ ಅಸಾಧ್ಯ ಎಂಬುದನ್ನು ಕೂಡ ಇದು ತೋರಿಸಿಕೊಟ್ಟಿದೆ. ಇದು ಹಿಂದುಸ್ತಾನದಲ್ಲಿರುವ ನಾವು ಕಲಿಯಬೇಕಾದ ಮತ್ತು ಪ್ರಯೋಜನ ಪಡೆಯಬೇಕಾದ ಒಂದು ಒಳ್ಳೆಯ ಪಾಟ".

ಇಂದಿನ ಸಂದರ್ಭದಲ್ಲಿ ಇಸ್ರೇಲಿನ ಝಿಯೊನಿಸ್ಟ್ ಯೋಜನೆಯನ್ನು ಕೂಡ ಆರೆಸ್ಸೆಸ್ ಇಂತಹುದೇ ಪ್ರಶಂಸೆಯಿಂದ ಕಾಣುತ್ತದೆ.

ಹುಸಿ ತರ್ಕಗಳು

ಇಂತಹ ಸೈದ್ಧಾಂತಿಕ ನಂಟನ್ನು ಮರೆಮಾಚುವ ಪ್ರಯತ್ನದಲ್ಲಿ ಆರೆಸ್ಸೆಸ್/ಬಿಜೆಪಿ ಟಿಪ್ಪಣಿಗಾರರು, ಇಸ್ರೇಲಿನ ಪ್ರಸಕ್ತ ದಾಳಿ ಕೂಡ, ಹಿಂದಿನ ಇಂತಹ ಎಲ್ಲ ದಾಳಿಗಳಂತೆ ಅದರ ಮೇಲೆ ನಡೆದಿರುವ ಪ್ರಚೋದನಕಾರಿ " ಭಯೋತ್ಪಾದಕ ದಾಳಿ"ಗಳಿಗೆ ವ್ಯಕ್ತಪಡಿಸಿರುವ ಸ್ಪಂದನೆ ಎಂಬ ಹುಸಿ ತರ್ಕವನ್ನು ಮುಂದಿಡುತ್ತಿದ್ದಾರೆ. ಈ ಸಂಘರ್ಷದ ಸಮಸ್ಯೆಯ ಮೂಲ ಪ್ಯಾಲೆಸ್ತೀನೀ ಭೂಮಿಯನ್ನು ಇಸ್ರೇಲ್ ಕಾನೂನುಬಾಹಿರವಾಗಿ ಆಕ್ರಮಿಸಿ ಕೊಂಡಿರುವುದರಲ್ಲಿಯೇ ಅಡಗಿದೆ.

ನಾವು ಈ ಹಿಂದೆಯೂ ಹಲವು ಬಾರಿ ಹೇಳಿದ್ದೇವೆ, ಈಗಲೂ ಹೇಳುತ್ತಿದ್ದೇವೆ-ಇಸ್ರೇಲ್ ಕಾನೂನಬಾಹಿರವಾಗಿ ಆಕ್ರಮಿಸಿ ಕೊಂಡಿರುವುದನ್ನು ತೆರವು ಮಾಡಿದ ಮೇಲೂ ಇಸ್ರೇಲಿನ ಮೇಲೆ ಯಾವುದೇ ರೀತಿಯಲ್ಲಿ ಯಾವುದೇ ಭಯೋತ್ಪಾದಕ ದಾಳಿ ನಡೆದರೆ ಅದನ್ನು ಖಂಡಿಸಲು ಇಡೀ ಜಗತ್ತನ್ನು ಅಣಿನರೆಸುವಲ್ಲಿ ಹಾಗೂ ಅಂತರ್ರಾಷ್ಟ್ರೀಯ ಸಂಸ್ಥೆಗಳ ಮೂಲಕ ಇಂತಹ ಭಯೋತ್ಪಾದನೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡುವಲ್ಲಿ ನಾವು ಮೊದಲಿಗರಾಗಿರುತ್ತೇವೆ. ಆದರೆ ಪ್ಯಾಲೆಸ್ತೀನೀ ಭೂಮಿಗಳನ್ನು ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡು ಅಲ್ಲಿ 'ಜನವಸತಿ'ಗಳನ್ನು ಬಲವಂತವಾಗಿ ನಿರ್ಮಿಸುವುದನ್ನು ಮುಂದುವರೆಸುತ್ತಿರುವ ವರೆಗೆ(ಬ್ರಿಕ್ಸ್ ಘೋಷಣೆಯಲ್ಲಿ ಹೇಳಿರುವಂತೆ) ಇಸ್ರೇಲ್ ಎಲ್ಲ ಆಕ್ರಮಣಕಾರಿ ಪ್ರಚೋದನೆಗಳ ಉಗಮ ಸ್ಥಾನವಾಗಿಯೇ ಇರುತ್ತದೆ. ವಿಶ್ವಸಂಸ್ಥೆ ಮತ್ತು ಅಂತರ್ರಾಷ್ಟ್ರೀಯ ಸಮುದಾಯಗಳು ಈ ಹಲವು ವರ್ಷಗಳಲ್ಲಿ ಕೈಗೊಂಡ ನಿರ್ಣಯಗಳನ್ನೆಲ್ಲ ಇಸ್ರೇಲ್ ತಿರಸ್ಕರಿಸುತ್ತಲೇ ಬಂದಿದೆ.

ಆದಾಗ್ಯೂ, ಪ್ಯಾಲೆಸ್ತೀನಿ ಧ್ಯೇಯಸಾಧನೆಗೆ ಭಾರತದ ಸೌಹಾರ್ದದ ದೀರ್ಘಕಾಲದ ಪರಂಪರೆಯನ್ನು ನಿರಾಕರಿಸುತ್ತ ಬಿಜೆಪಿ ಟಿಪ್ಪಣಿಗಾರರು ತಮ್ಮ ಎಂಪಿಗಳಿಗೆ ಸಂಸತ್ತಿನಲ್ಲಿ ಚರ್ಚೆಯ ಮೊದಲು ನೀಡಿದ ಸಲಹೆಗಳಲ್ಲಿ ಇದೇ ಸೈದ್ಧಾಂತಿಕ ನಂಟನ್ನು ಹೀಗೆ ಪ್ರದರ್ಶಿಸಿದ್ದಾರೆ: "ಇಸ್ರೇಲ್ ಭಾರತದ ಒಂದು ಮಿತ್ರ ದೇಶ, ನಮ್ಮ ಆಯಕಟ್ಟಿನ ಹಿತಗಳ ಬಗ್ಗೆ ಸಮಸ್ತ ಒಐಸಿ(ಇಸ್ಲಾಮೀ ದೇಶಗಳ ಸಂಘಟನೆ)ಗಿಂತ ಹೆಚ್ಚು ಗಮನ ನೀಡುವ ದೇಶ. ನಮ್ಮಲ್ಲಿ ಕೆಲವರು ಇಸ್ರೇಲ್ ಪರ ನಮ್ಮ ಪಕ್ಷಪಾತವನ್ನು ಪ್ರದರ್ಶಿಸಬೇಕಾದ ಸಮಯವಿದು. ಮತ್ತು ಈ ಸಂಸದೀಯ ಚರ್ಚೆ ನಮ್ಮ ನಿಜವಾದ ಮಿತ್ರರ ಪರವಾಗಿ ನಿಲ್ಲಲು ಬೇರೆ ಯಾವುದೇ ಸಂದರ್ಭದಂತೆ ಒಂದು ಒಳ್ಳೆಯ ಸಂದರ್ಭ."

ಪ್ಯಾಲೆಸ್ಟೈನ್‌ನೊಂದಿಗೆ ಸೌಹಾರ್ದ ಎಂದರೆ ಅದು ಭಾರತದಲ್ಲಿ ಮುಸ್ಲಿಮರ ತುಷ್ಟೀಕರಣವಾಗುತ್ತದೆ ಎಂಬ ಬಿಜೆಪಿ ತರ್ಕವಂತೂ ಇನ್ನೂ ನಿಕೃಷ್ಟ. 'ಹಿಂದೂ ವೋಟ್ ಬ್ಯಾಂಕ್'ನ್ನು ಕ್ರೋಡೀಕರಿಸುವ ಅತ್ಯಂತ ಹೀನ ವೋಟ್‌ಬ್ಯಾಂಕ್ ರಾಜಕೀಯವನ್ನು ನಡೆಸುವವರೇ ಸ್ವಂತ ನಾಡಿಗಾಗಿ ಪ್ಯಾಲೆಸ್ತೇನಿಯನ್ನರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡುವವರದ್ದು 'ತುಷ್ಟೀಕರಣ' ಎಂದು ಆಪಾದಿಸುತ್ತಿದ್ದಾರೆ. ಬಿಜೆಪಿಯ ಜಸ್ವಂತ್ ಸಿಂಗ್, ಎಲ್ಲಾ ಬಿಟ್ಟು ಜೆರುಸಲೇಂನಲ್ಲಿಯೇ, ಭಾರತ ಬಹಳ ಕಾಲ ಇಸ್ರೇಲಿಗೆ ರಾಜತಾಂತ್ರಿಕ ಮಾನ್ಯತೆ ನೀಡದೇ ಇದ್ದುದು ಕೇವಲ ಭಾರತೀಯ ಮುಸ್ಲಿಮರನ್ನು "ತುಷ್ಟೀಕರಿಸಲು" ಎಂದಿದ್ದರು.

ಜೂನ್ 13ರಂದು "ಆಪರೇಶನ್ ಶುವು ಅಚಿವ್" ಎಂಬ ಸಂಕೇತನಾಮದೊಂದಿಗೆ ಆರಂಭಿಸಿದ, ಅದಕ್ಕೆ ಪೂರಕವಾಗಿ ಜುಲೈ 7ರಿಂದ ಆರಂಭಿಸಿದ "ಆಪರೇಶನ್ ಪ್ರೊಟೆಕ್ಟಿವ್ ಎಡ್ಜ್" ಜೊತೆಗೆ ನಡೆಸಿರುವ ಪ್ರಸಕ್ತ ಇಸ್ರೇಲೀ ದಾಳಿ ಮುಂದುವರೆಯುತ್ತಿದೆ. ಅದಕ್ಕೆ ತುತ್ತಾಗಿರುವ ಗಾಝಾ ಪಟ್ಟಿಯ ಅದೃಷ್ಟಹೀನ ಜನಗಳು ಆ ಸ್ಥಳ ಬಿಟ್ಟು ಹೋಗುವಂತೆಯೂ ಇಲ್ಲ, ಏಕೆಂದರೆ ಅದರ ಎಲ್ಲ ಗಡಿಗಳೂ ಸೀಲ್ ಆಗಿವೆ. ಮಾನವೀಯತೆ ಮತ್ತು ಸಹಜ ನ್ಯಾಯದ ಹಿತದೃಷ್ಟಿಯಿಂದ, ಜಗತ್ತಿನ ಎಲ್ಲ ಶಾಂತಿಪ್ರಿಯ ಜನಗಳು, ಮತ್ತು ನಾವು, ಭಾರತೀಯರು, ನಿಸ್ಸಹಾಯಕ, ಮುಗ್ಧ ಪ್ಯಾಲೆಸ್ತೀನ್ ಜನತೆಯ ಮೇಲೆ ನಡೆದಿರುವ ಈ ಇನ್ನೊಂದು ಆಕ್ರಮಣದ ಯುದ್ಧವನ್ನು ನಿಲ್ಲಿಸಲು ಒಟ್ಟಾಗಿ ಎದ್ದು ನಿಲ್ಲಬೇಕಾಗಿದೆ. ಇಸ್ರೇಲಿನ ರಕ್ಷಣಾ ಸಾಧನಗಳನ್ನು ಖರೀದಿಸುವುದನ್ನು ಭಾರತ ತಕ್ಷಣವೇ ನಿಲ್ಲಿಸುವಂತೆ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಮೇಲೆ ಭಾರತದ ಜನತೆ ಒತ್ತಡ ಹಾಕಬೇಕಾಗಿದೆ. ಇಸ್ರೇಲಿ ಶಸ್ತ್ರಾಸ್ತ್ರಗಳ ಅತಿ ದೊಡ್ಡ ಖರೀದಿದಾರ ದೇಶವಾಗಿರುವ ಭಾರತ ಈ ಮೂಲಕ ಗಾಝಾದ ಮೇಲೆ ಇಸ್ರೇಲಿನ ಆಕ್ರಮಣಕ್ಕೆ ಹಣಕಾಸು ಒದಗಿಸುವುದು ನಿಲ್ಲುವಂತಾಗಬೇಕು. ಇಸ್ರೇಲ್ ಇಂತಹ ಖರೀದಿಗಳ ಲಾಭಗಳ ಮೂಲಕ ಇಂತಹ ದಾಳಿಗಳನ್ನು ನಡೆಸಲು ಶಕ್ತವಾಗಿದೆ. ●



ಗಾಝಾ? ವಿದೇಶಾಂಗ ಧೋರಣೆ ಎಂಬುದರಲ್ಲಿ ಎಂಜೆಲಾ ಮರ್ಕೆಲ್‌ಗೆ ಹ್ಯಾಪಿ ಬರ್ತ್‌ಡೇ ಹೇಳುವುದು ಬಿಟ್ಟು ಇನ್ನೂ ಬಹಳಷ್ಟಿದೆ ಎನ್ನುತ್ತೀರಾ?
-ಟೈಂಸ್ ಆಫ್ ಇಂಡಿಯಾದಲ್ಲಿ ನೈನನ್

ಮಕ್ಕಳು ಮತ್ತು ಮಹಿಳೆಯರ ಮೇಲಿನ ಹಿಂಸೆ ದೌರ್ಜನ್ಯಗಳಿಗೆ ಯಾರು ಹೊಣೆ?



ಸೂಕ್ಷ್ಮ ಮನಸ್ಥಿತಿಯ ಜನರು ದಿನಪತ್ರಿಕೆಯ ಮೇಲೆ ಕಣ್ಣಾಡಿಸಲು, ಟಿವಿಗಳಲ್ಲಿ ನ್ಯೂಸ್ ಚಾನೆಲ್‌ಗಳ ಬಟನ್ ಒತ್ತಲು ಬೆಚ್ಚಿಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮುಗ್ಧ ಹೆಣ್ಣುಶಿಶುಗಳ ಮೇಲೆ ಅತ್ಯಾಚಾರ, ವಿದ್ಯಾರ್ಥಿನಿಯರ ಮೇಲೆ ಅತ್ಯಾಚಾರ–ಕೊಲೆ, ಗೃಹಣಿಯರ ಮೇಲೆ ಲೈಂಗಿಕ ದೌರ್ಜನ್ಯ–ಮಾನಭಂಗ, ಉದ್ಯೋಗಸ್ಥ ಮಹಿಳೆಯರ ಅಪಹರಣ–ಅತ್ಯಾಚಾರ, ದಲಿತ ಹೆಣ್ಣು ಮಕ್ಕಳು, ಮಹಿಳೆಯರ ಮೇಲೆ ಅತ್ಯಾಚಾರ, ಬರ್ಬರ ಹತ್ಯೆ.. ಇಂಥವೇ ಸುದ್ದಿಗಳು ಕಣ್ಣು ಮತ್ತು ಹೃದಯವನ್ನು ಇರಿಯುತ್ತಿವೆ. ತೀವ್ರಗೊಂಡಂತೆ ಕಾಣುತ್ತಿರುವ ಈ ಪ್ರವೃತ್ತಿಗಳ ಮೂಲ ಕಾರಣಗಳೇನಿರಬಹುದು ಎಂದು ಚಿಂತಿಸುವ ಒಂದು ಲೇಖನ. ಜೊತೆಗೆ ರಾಜ್ಯವ್ಯಾಪಿ ಜನಪರ ಸಂಘಟನೆಗಳು ಈ ಹೀನ ಪ್ರವೃತ್ತಿಯ ವಿರುದ್ಧ ನಡೆಸಿರುವ ಪ್ರತಿಭಟನೆಗಳ ಒಂದು ಸಂಕ್ಷಿಪ್ತ ವರದಿ ನಿಮಗಾಗಿ.

ಎನ್. ಪ್ರಭಾ, ಬೆಳವಂಗಲ

ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಕಚೇರಿ, ಪೊಲೀಸ್ ಠಾಣೆ ಇವೆಲ್ಲ ಬಿಡಿ. ಮನೆಯೂ ಸುರಕ್ಷಿತವಲ್ಲ ಹೆಣ್ಣು ಮಕ್ಕಳಿಗೆ ಎನ್ನುವ ಪರಿಸ್ಥಿತಿ ಇಂದಿನದಾಗಿದೆ. ಯಾರನ್ನ ಹೊಣೆ ಮಾಡುವುದು ಈ ಬೆಳವಣಿಗೆಗೆ. . . . ಮೊನ್ನೆ ಟಿ.ವಿ. ಚರ್ಚೆಯೊಂದರಲ್ಲಿ ಭಾಗವಹಿಸಿದ್ದ ಹಿರಿಯ ಕಾಂಗ್ರೆಸ್ ನಾಯಕಿಯೊಬ್ಬರು ಬಹಳ ಗಟ್ಟಿಯಾಗಿ ಒಂದು ಮಾತನ್ನ ಹೇಳುತ್ತಿದ್ದರು. ಅದೇನೆಂದರೆ, "ಎಲ್ಲವನ್ನ ಸರಿಪಡಿಸಲು ಯಾವುದೇ ಸರ್ಕಾರದಿಂದಲೂ ಸಾಧ್ಯವಿಲ್ಲ. ಅವುಗಳೇನು ದೇವರುಗಳಲ್ಲ, ಸರ್ಕಾರಗಳು ಬರುತ್ತವೆ ಹೋಗುತ್ತವೆ. ಆದಷ್ಟನ್ನ ಅವುಗಳು ಮಾಡಬಹುದೇ ಹೊರತು ದಿನನಿತ್ಯ ಸಂಭವಿಸುವ ಈ ಅವಘಡಗಳಿಗೆ ಜನರಲ್ಲಿ ನಾಗರಿಕ ಪ್ರಜ್ಞೆ ಬೆಳೆಯಬೇಕಷ್ಟೆ" ಎನ್ನುತ್ತಾ "ಈ ನಿಟ್ಟಿನಲ್ಲಿ ಮಹಿಳೆಯರ ಪಾಲು ಬಹಳ ದೊಡ್ಡದಿದೆ." ಎಂದರು. ಮುಂದುವರೆದ ಅವರು, "ತಮ್ಮ ಮಕ್ಕಳ ನಡೆ–ನುಡಿಗಳನ್ನು ತಾಯಂದಿರು ಗಮನಿಸುತ್ತಿರಬೇಕು, ಉತ್ತಮ ನಾಗರಿಕ ಪ್ರಜ್ಞೆ ನೆಡಬೇಕು,, ಪತ್ನಿಯರು ತಮ್ಮ ಪತಿಯರ ಚಲನವಲನಗಳನ್ನು ಗಮನಿಸುತ್ತಿರಬೇಕು, ನಡತೆ ತಪ್ಪಿದ್ದಲ್ಲಿ ಸರಿದಾರಿಗೆ ತರಲು ಪ್ರಯತ್ನಿಸಬೇಕು." ಎಂದು ಸಲಹೆ ಮಾಡಿದರು. ರಾಜಕಾರಣಿಗಳನ್ನೂ ಒಳಗೊಂಡು ಬಹಳಷ್ಟು ಜನ ಇದೇ ವಾದವನ್ನ ಸಾವಕಾಶವಾಗಿ ಮಂಡಿಸುವುದನ್ನ ಕಂಡಿದ್ದೇವೆ.

ಜಗತ್ತಾಗಲಿ ನಮ್ಮ ಸಮಾಜವೇ ಆಗಲಿ ವ್ಯಕ್ತಿ ಕೇಂದ್ರಿತ ಆಲೋಚನಾ ನೆಲೆಗಳು ಅಥವಾ ನಡೆಗಳ ಮೇಲೆ ಚಲಿಸುತ್ತಾ ಬಂದಿದೆಯೆ ಇಲ್ಲಾ ಶಕ್ತಿ ಕೇಂದ್ರಿತ ನಿಲುವುಗಳ ಮೇಲೆಯೆ? ಎಂಬುವುದನ್ನು ಅಗತ್ಯವಾಗಿ ಆಲೋಚಿಸಬೇಕಲ್ಲವೆ?

ಒಂದಾನೊಂದು ಕಾಲದಲ್ಲಿ ಮಹಿಳೆ ಗುಂಪಿನ ನಾಯಕಿಯಾಗಿ ತನ್ನ ಸಮೂಹವನ್ನ ಮುನ್ನಡೆಸುತ್ತಿದ್ದಳು. ಬೇಟೆಯ ನಾಯಕತ್ವ ವಹಿಸಿ ತನ್ನ ಗುಂಪಿನ ಸದಸ್ಯರ ಹೊಟ್ಟೆಗೆ ದಾರಿ ಮಾಡುತ್ತಿದ್ದಳು. ಅವಳನ್ನ ಹಿಂಬಾಲಿಸಿ ಆ ಗುಂಪು ಹೊಟ್ಟೆ ಹೊರೆಯುತ್ತಿತ್ತು. ಮುಂದುವರೆದ ಕಾಲಘಟ್ಟವೊಂದರಲ್ಲಿ ಜಮೀನುದಾರರ ಗುಲಾಮರಂತೆ ಬದುಕಿ ಸತ್ತರು. ಪಾಳೆಯಗಾರರು ಈ ಸಮಾಜದ ಮೂಗುದಾರ ಹಿಡಿದಿದ್ದರು. ಕಾಲಾನಂತರ ಬಂಡವಾಳಿಗರು, ಈ ನಡುವೆ ಭಾರತದಲ್ಲಿ ಸಾಮ್ರಾಜ್ಯಶಾಹಿಗಳು ವ್ಯವಸ್ಥೆಯ ಚುಕ್ಕಾಣಿ ಹಿಡಿದರು. ಇದೀಗ ಪ್ರಜೆಗಳ ಹೆಸರಿನಲ್ಲಿ ನಡೆಯುತ್ತಿರುವ ಸರ್ಕಾರಗಳು ನಮ್ಮ ವ್ಯವಸ್ಥೆಯ ಜುಟ್ಟನ್ನ ಹಿಡಿದಿವೆ. ಪ್ರಾಚೀನ ಕಾಲದ ಕಿರಾತಾವಸ್ಥೆಯನ್ನ ಹೊರತುಪಡಿಸಿ ಎಂದಾದರೂ ಮಹಿಳೆಯರು 'ನಾಗರಿಕ' ಎನ್ನುವ ಹಣೆಪಟ್ಟಿ ಧರಿಸಿದ ಸಮಾಜಕ್ಕೆ ನಾಯಕತ್ವ, ಮಾರ್ಗದರ್ಶನ, ನೀತಿ ನಿರೂಪಣೆ ಮಾಡಲು ಅವಕಾಶ ನೀಡಿರುವ ಉದಾಹರಣೆ ನಮ್ಮ ಮುಂದಿದೆಯೆ? ಹೀಗಿರುವಾಗ ಇಂದು ದುರ್ನಾತ ಬೀರುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ವಾತಾವರಣಕ್ಕೆ ಮಹಿಳೆಯರು ಸುಗಂಧ ಸಿಂಪಡಿಸಿ ಸುವಾಸಿತ ವಾತಾವರಣ ನಿರ್ಮಾಣ ಮಾಡಲು ಶಕ್ತರೆ? ಇಷ್ಟಕ್ಕೂ ಮಹಿಳೆಯರು ತಮ್ಮ ಗಂಡಂದಿರಿಗೆ ತಾವು ಹೆತ್ತ ಹೆಣ್ಣುಗಳ ಮೇಲೆಯೇ ಲೈಂಗಿಕ ದೌರ್ಜನ್ಯ ಎಸಗುವ ಕೃತ್ಯಗಳಿಗೆ ಕುಮ್ಮಕ್ಕು ನೀಡಿರುವರೆ? ತಂದೆ, ಗಂಡ, ಮಗನ ನಿಯಂತ್ರಣದಲ್ಲಿ ಮಹಿಳೆಯೇ? ಮಹಿಳೆಯ ನಿಯಂತ್ರಣದಲ್ಲಿ ಪುರುಷನೇ. .. .? ಎನ್ನುವ ಚಾರಿತ್ರಿಕ ಪ್ರಶ್ನೆಗೆ ಇಂದು ಹೊಸದಾಗಿ ಉತ್ತರ ಹುಡುಕಾಡಬೇಕಾದ ಪ್ರಮೇಯವಿದೆಯೇ? ವ್ಯವಸ್ಥೆಯ ಜುಟ್ಟನ್ನ ಯಾವತ್ತೂ ಹಿಡಿದ ಸೂತ್ರದಾರರು (ಶಕ್ತಿಕೇಂದ್ರ) ಆ ಸಮಾಜದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ನೀತಿಗಳನ್ನ ನಿರೂಪಿಸುತ್ತಾ ಬಂದಿದ್ದಾರೆಯೇ ಹೊರತು ವ್ಯಕ್ತಿಗಳು ತಮ್ಮಾಯ್ಕೆಯಂತೆ ಬದುಕುವ ಸರ್ವಸ್ವತಂತ್ರ ಘಟಕಗಳಾಗಿ ಎಂದಾದರೂ ಸ್ವೀಕಾರವಾಗಿದ್ದಾರೆಯೇ? ಇವತ್ತಿನ ಮಹಿಳೆಯರ ಪರಿಸ್ಥಿತಿ ಹಿಂದಿಗಿಂತಲೂ ಕಳಪೆಯಾಗುತ್ತಾ ಹೋಗುತ್ತಿದೆ ಎಂದರೆ ಅದಕ್ಕೆ ಇವತ್ತಿನ ಸರ್ಕಾರಗಳು ಅನುಸರಿಸುತ್ತಾ ಬಂದಿರುವ ನೀತಿಗಳು ಕಾರಣವಾಗಿವೆಯೇ ಎಂಬುದನ್ನು ಗುರುತಿಸಬೇಕೇ ವಿನಃ ಮಹಿಳೆಯರು ತಮ್ಮ ಮನೆಗಳಲ್ಲಿ ಬೆಳಸದೇ ಹೋಗಿರುವ 'ನಾಗರಿಕ ಪ್ರಜ್ಞೆ' ಕಾರಣವಾಗಿರಬಹುದು ಎಂದು ಉತ್ತರ ಹುಡುಕುತ್ತಾ ಹೋಗುವುದು ಎಷ್ಟು ಸರಿ? ಲಾಂಗು–ಮಚ್ಚುಗಳೇ ನಾಯಕ ನಾಯಕಿಯರಾಗಿರುವ ನೂರಾರು ಸಿನಿಮಾಗಳನ್ನು ನಿರ್ಮಿಸಲು ಇಂದು ಬಂಡವಾಳ ಹೂಡುತ್ತಿರುವವರು ಯಾರು? ಹಿಂಸೆ.., ಕ್ರೌರ್ಯ.., ಹೆಣ್ಣುಮಕ್ಕಳ ಅರೆ ನಗ್ನ ಪ್ರದರ್ಶನ,, ಸಾಧ್ಯವಾದರೆ ಮುಕ್ತ ಪ್ರದರ್ಶನ, ಹೆಣ್ಣುಮಕ್ಕಳನ್ನ ಕೇವಲ ಕಾಮದ ಬೊಂಬೆಗಳನ್ನಾಗಿ ಬಿಂಬಿಸುವಂತಹ ಸಿನಿಮಾಗಳಿಗೆ ಹಣ ಹೂಡುತ್ತಿರುವವರಲ್ಲಿ ಎಷ್ಟು ಮಹಿಳೆಯರಿದ್ದಾರೆ? ಮುಕ್ತ ಸಾಮಾಜಿಕ ಜಾಲತಾಣಗಳು, ಅವುಗಳ ಮೂಲಕ ಮುಕ್ತವಾಗಿ ಹರಿಯುತ್ತಿರುವ ವಿಕೃತ ಕಾಮಲೀಲೆಗಳು, ಪ್ರಸಾರ ನಿಯಂತ್ರಣವಿಲ್ಲದೆ ಹಿರಿಯರು.., ಕಿರಿಯರು ಎಲ್ಲರ ಮೊಬೈಲ್‌ಗಳಲ್ಲೂ ಲಭ್ಯವಾಗುತ್ತಿರುವ ಜಗತ್ತಿನ ಮೂಲೆಮೂಲೆಯ ಅಶ್ಲೀಲ ಲೈಂಗಿಕ ಸೈಟುಗಳು ಮುಂತಾದವುಗಳನ್ನೆಲ್ಲಾ ಗಂಡನಿಂದ, ಮಕ್ಕಳಿಂದ ದೂರವಿಡಲು ಹೆಂಡತಿಗಾಗಲಿ, ತಾಯಿಗಾಗಲಿ ಹೇಗೆ ಸಾಧ್ಯ? ಸಾಹಿತ್ಯ, ಸಂಸ್ಕೃತಿ, ಸಾಧನ–ಸಲಕರಣೆಗಳು, ನಮ್ಮ ಜನರಿಗೆ ಬೇಕಾದವು, ಬೇಡವಾದವು ಎಲ್ಲವನ್ನ ಮುಕ್ತವಾಗಿ ಬರಮಾಡಿಕೊಂಡಿರುವ ಸರ್ಕಾರಗಳಿಗೆ ಮನೆಯೊಳಗೂ ಹೊರಗೂ ಸಂಭವಿಸುತ್ತಿರುವ ಅನಾಹುತಗಳ ಕುರಿತು ತಿಳಿಯಪಡಿಸಿ ಪ್ರಸಕ್ತ ಸರ್ಕಾರಗಳಲ್ಲಿ ನಾಗರಿಕ ಪ್ರಜ್ಞೆ ಮೂಡಿಸಲು ಯಾವ ಮಹಿಳೆಯರಿಂದ ಸಾಧ್ಯ? ಜನತಂತ್ರ ವ್ಯವಸ್ಥೆಯ ಉನ್ನತ ಸ್ಥಳ ವಿಧಾನಸಭೆಯಲ್ಲಿಯೇ ಪೋಲಿ ಚಿತ್ರಗಳನ್ನು ವೀಕ್ಷಿಸುವ ಜನನಾಯಕರನ್ನು ಯಾವ ಮಹಿಳೆಯರು ನಿಯಂತ್ರಿಸಬಲ್ಲರು.? ಅವರಲ್ಲಿಯೂ ನಾಗರಿಕ ಪ್ರಜ್ಞೆ ಎತ್ತರಿಸಲೇಬೇಕೆಂದರೆ ಪ್ರಜ್ಞೆ ಮೂಡಿಸುವವರು ಅವರಿಗಿಂತ ಮೇಲಿನವರೇ ಆಗಿರಬೇಕಲ್ಲವೆ. . . ಅವರು ಯಾರು? ಎಲ್ಲಿ ಹುಡುಕುವುದು ಅವರನ್ನು? ಯಾಕೆಂದರೆ, ತಾಯಿ, ಪತ್ನಿ, ಸೋದ–ರಿಯರಿಗೂ ಸೇರಿ ಇವರು ನಾಯಕರಲ್ಲವೆ? "ನಮ್ಮ ಪಕ್ಷದ ಕಾರ್ಯಕರ್ತರನ್ನು ಬಿಟ್ಟು ಸಿಪಿಐ(ಎಂ) ಪಕ್ಷದಲ್ಲಿರುವ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿಸುತ್ತೇವೆ." ಎಂದ ತೃಣಮೂಲ ಕಾಂಗ್ರೆಸ್‌ನ ಪಾರ್ಲಿಮೆಂಟ್ ಸದಸ್ಯನಿಗೆ ಪಾಠ ಕಲಿಸುವ ಹೊಣೆಯನ್ನು ಆತನ ತಾಯಿ–ಹೆಂಡತಿಗೊಪ್ಪಿಸಿ ಕೈತೊಳೆದುಕೊಂಡು ಬಿಡುವುದೆ?



ಇಷ್ಟಕ್ಕೂ ಎಷ್ಟು ಮಂದಿ ಮಹಿಳೆಯರಿಗೆ ತಮ್ಮ ಮಕ್ಕಳ ಕೈಲಿರುವ ಮೊಬೈಲುಗಳಿಗೆ ಸದ್ದಿಲ್ಲದೆ ದಾಂಗುಡಿಯಿಟ್ಟಿರುವ ಲೈಂಗಿಕ ಸೈಟುಗಳ ಕುರಿತು, ಅತ್ಯಾಧುನಿಕ ಮೊಬೈಲ್ ಫೋನ್‌ಗಳಲ್ಲಿ ಲಭ್ಯವಾಗುವ ಎಲ್ಲಾ ಮಾಹಿತಿಗಳು, ಸಂಪರ್ಕಗಳು, ಸೌಲಭ್ಯಗಳ ಬಗ್ಗೆ ತಿಳಿದಿದೆ? ಇಂದು ಹೆಚ್ಚು ಕಡಿಮೆ ಎಲ್ಲರ ಕೈಯಲ್ಲಿ ಮೊಬೈಲ್‌ಗಳಿವೆ. ಯುವಜನರ ಕೈಯ್ಯಲ್ಲಂತೂ ಕೇಳುವುದೇ ಬೇಡ. ಆದರೆ, ಪ್ರತಿಯೊಬ್ಬ ತಾಯಿಗೆ ಮೊಬೈಲ್ ಒಳಗೆ ಏನೆಲ್ಲ ಇದೆ ಎಂಬುದು ತಿಳಿಯುವುದಾದರು ಹೇಗೆ? ಬೆಳಗಾದರೆ ಜ್ಯೋತಿಷ್ಯ ಹೇಳುವ ಟಿ.ವಿ.ಚಾನಲ್‌ಗಳು ಕಡೆಯ ಪಕ್ಷ ಇಂತಹ ತಾಂತ್ರಿಕ ಮಾಹಿತಿಗಳನ್ನಾದರೂ ಎಲ್ಲರ ಗಮನಕ್ಕೆ ತರಬಹುದಲ್ಲ? ನಾಗರಿಕ ಪ್ರಜ್ಞೆಯನ್ನ ಮೂಡಿಸುವ ಈ ಜವಾಬ್ದಾರಿ ಮಾಧ್ಯಮಗಳಿಗಿರಬಾರದೆ?

ಒಂದು ಕಡೆ 'ನಾಗರಿಕ' ಸರ್ಕಾರಗಳು ಕೋತಿಗೆ ಹೆಂಡ ಕುಡಿಸುವಂತೆ ಯುವಜನರಿಗಾಗಿ ನೂತನ ಸಾಂಸ್ಕೃತಿಕ ವಾತಾವರಣವನ್ನ ಸೃಷ್ಟಿಸುತ್ತಿವೆ. ಕಾರ್ಪೊರೇಟ್ ಜೀವನಶೈಲಿಗಳು, ಮಾಲ್ ಸಂಸ್ಕೃತಿ, ಹೊಡೆದಾಟ–ಬಡಿದಾಟ, ಲಾಂಗು–ಮಚ್ಚುಗಳ ವೈಭವೀಕರಣದ ಸಿನಿಮಾಗಳು, ಹೆಣ್ಣುಗಳಿರುವುದೇ ಅನುಭೋಗಿಸಲು ಎನ್ನುವ ಸಿನಿಮಾ–ಮಾಧ್ಯಮದ ಸಂದೇಶಗಳು, ಎಷ್ಟು ಹೆಣ್ಣುಗಳನ್ನ ನಿನ್ನ ಹಿಂದೆ ಬಿದ್ದುಬರುವಂತೆ ಮಾಡಿಕೊಳ್ಳುವೆಯೋ ಅಷ್ಟರ ಮಟ್ಟಿಗೆ ನೀನೊಬ್ಬ ಪ್ರಭಾವಿ ಗಂಡಸು ಎಂದು ಬಿಂಬಿಸುವ ಜಾಹೀರಾತುಗಳು. ಯುವಜನರ ತಲೆಗೆ ತುರುಕುತ್ತಿರುವ ವಿಪರೀತವಾದ ಗ್ರಾಹಕ ಪ್ರವೃತ್ತಿಗಳು. ಹೆಣ್ಣುಮಕ್ಕಳನ್ನೂ 'ಗ್ರಾಹಕ ವಿಭಾಗ'ಕ್ಕೇ ದೂಡುತ್ತಿರುವ ಆಧುನಿಕ ಆಲೋಚನಾ ಲಹರಿಗಳು(ಹಿಂದೆ ಮಕ್ಕಳನ್ನ ಹೆರುವ ಯಂತ್ರವಾಗಿದ್ದಳು), ಬಡವರು–ಶ್ರೀಮಂತರ ನಡುವೆ ಹೆಚ್ಚಿಸುತ್ತಿರುವ ಅಸಹನೀಯ ಅಂತರಗಳು, ಒಂದೇ ಎರಡೇ ಇವುಗಳ ಪಟ್ಟಿ. . . ಇಂತಹ ಲಜ್ಜೆಗೇಡಿ ಸಾಂಸ್ಕೃತಿಕ ವಾತಾವರಣವನ್ನು ಸಮಾಜದಲ್ಲಿ ಸೃಷ್ಟಿ ಮಾಡಲು ಆಳುವ ಸರ್ಕಾರಗಳಿಗೆ ಅವಕಾಶ ಕೊಟ್ಟು ಹೆಣ್ಣುಮಕ್ಕಳನ್ನ ಸುರಕ್ಷಿತವಾಗಿಡಲು ಹೆಂಗಸರೇ ಮುಂದಾಗಬೇಕು, ಜವಾಬ್ದಾರಿ ಹೊರಬೇಕು ಎಂದುಬಿಟ್ಟರೆ, ಇದೇ ವಾದಕ್ಕೆ ಇಡಿಯಾಗಿ ಸಮಾಜ ಜೋತುಬಿದ್ದರೆ ಹೆಣ್ಣುಮಕ್ಕಳನ್ನ ರಕ್ಷಿಸುವವರು ಯಾರು?

ಬಲಿಪಶುಗಳನ್ನೇ ಹೊಣೆಯಾಗಿಸುವುದು !!

'ವಿಕ್ಟಿಮ್ ಬ್ಲೇಮಿಂಗ್' ಎನ್ನುವ ಮಾತೊಂದಿದೆ. ಬಲಿಪಶುಗಳನ್ನೇ ಹೊಣೆಗಾರರನ್ನಾಗಿಸಿ ಅಸಲಿ ಕಾರಣ, ಸತ್ಯಾಂಶಗಳನ್ನು ಮರೆಮಾಚುವ ತಂತ್ರಗಾರಿಕೆಯಿದು. ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆದಾಗಲೆಲ್ಲ ಅವರ ಕಡೆಯೇ ಬೊಟ್ಟು ಮಾಡಿ ಆಕೆ ವೇಷ–ಭೂಷಣ ಸರಿಯಿರಲಿಲ್ಲ, ಆಕೆ ಹೊರಹೋದ ಹೊತ್ತು ಸರಿಯಾದುದಲ್ಲ, ಅವಳೊಬ್ಬಳೇ ಇದ್ದದ್ದು ಸೂಕ್ತವಲ್ಲ, ಅವಳ ಜೊತೆಗಿದ್ದವರು ಯೋಗ್ಯರಲ್ಲ, ಅವಳ ನಡತೆಯೇ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಗಳ ವಿರುದ್ಧ ರಾಜ್ಯದೆಲ್ಲೆಡೆ ಪ್ರತಿಭಟನೆ


ಬಸವನಗುಡಿ, ಬೆಂಗಳೂರು


ಮಲ್ಲೇಶ್ವರಂ, ಬೆಂಗಳೂರು



ಮಂಗಳೂರು



ಬಾಗೇಪಲ್ಲಿ


ಗುಲ್ಬರ್ಗಾ

ಲೈಂಗಿಕ ದೌರ್ಜನ್ಯ ಅತ್ಯಾಚಾರಗಳ ವಿರುದ್ಧ ಬೀದಿಗಿಳಿದ ವಿದ್ಯಾರ್ಥಿಗಳು ಮತ್ತು ಜನತೆ

ಪುಟ್ಟ ಹೆಣ್ಣು ಮಕ್ಕಳನ್ನು ಬಿಡದೆ ಹೆಣ್ಣಿನ ಮೇಲೆ ನಡೆಯುತ್ತಿರುವ ಅಮಾನುಷ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಕ್ರೌರ್ಯವನ್ನು ವಿರೋಧಿಸಿ ವಿದ್ಯಾರ್ಥಿನಿಯರಿಗೆ, ಮಹಿಳೆಯರಿಗೆ ಹೆಣ್ಣು ಮಕ್ಕಳಿಗೆ ಸೂಕ್ಕತ ಸೂಕ್ತ ರಕ್ಷಣೆಗಾಗಿ ಅಪರಾಧಿಗಳ ವಿರುದ್ಧ ಕಠಿಣ ಕ್ರಮಗಳಿಗೆ ಒತ್ತಾಯಿಸಿ ರಾಜ್ಯಾದ್ಯಂತ ನಾನಾ ಸಂಘಟನೆಗಳು ಚಳುವಳಿ ನಡೆಸಿವೆ. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಜುಲೈ 23 ರಂದು ರಾಜ್ಯವ್ಯಾಪಿ ಕರೆನೀಡಿದ್ದ 'ತರಗತಿ ಬಹಿಷ್ಕಾರ' ಹೋರಾಟಕ್ಕೂ ವಿದ್ಯಾರ್ಥಿಗಳಿಂದ ವ್ಯಾಪಕ ಬೆಂಬಲ ದೊರೆತಿದೆ. ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯಿಂದ ಬೆಂಗಳೂರಿನ ಗಾಂಧಿ ಬಜಾರ್‌ನ ಆಶ್ರಮ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ನೂರಾರು ವಿದ್ಯಾರ್ಥಿನಿಯರು, ಜೊತೆಗೆ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸಹ ಈ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನ ಮಲ್ಲೇಶ್ವರಂದಲ್ಲಿ ನಡೆದ ಎಸ್‌ಎಫ್‌ಐ ನ ಪ್ರತಿಭಟನೆಗೆ ಎಂಐಎಫ್‌ಎಸ್‌ಇ ವಿಭಾಗದ ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಆಗಮಿಸಿ 'ನಮ್ಮ ಅಕ್ಕ, ತಂಗಿಯರಿಗೆ ಸೂಕ್ತ ರಕ್ಷಣೆ ನೀಡಿ' ಎಂದು ಸರ್ಕಾರವನ್ನು ಆಗ್ರಹಿಸಿ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ನೀಡಿದರು. ಮಲ್ಲೇಶ್ವರಂ ವೃತ್ತದಲ್ಲಿ ಬಾರಿ ಸಂಖ್ಯೆಯಲ್ಲಿ ಸೇರಿದ್ದ ವಿದ್ಯಾರ್ಥಿನಿಯರು ಸರಕಾರದ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮಾನವ ಸರಪಳಿ ರಚಿಸಿದ್ದರಿಂದ 45 ನಿಮಿಷಕ್ಕೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ಬೆಂಗಳೂರು ನಗರಾಧ್ಯಕ್ಷೆ ಶೃತಿ ನೆಲಮಾಕನಹಳ್ಳಿ, ವೆಂಕಟೇಶ್, ಶ್ರೀನಿವಾಸ್, ಹರಿಪ್ರಸಾದ್, ಪ್ರಸಾದ್ ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. "ರಾಜ್ಯದಲ್ಲಿ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ, ಹಿಂಸಾಚಾರಗಳು ಅವ್ಯಾಹತವಾಗಿ ನಡೆಯುತ್ತಿದೆ. ಬೆಂಗಳೂರಿನಲ್ಲಿ ಅತ್ಯಾಚಾರ ಪ್ರಕರಣಗಳು ತೀವ್ರಗತಿಯಲ್ಲಿ ಹೆಚ್ಚುತ್ತಿವೆ. ರಾಜ್ಯದಾದ್ಯಂತ ಪ್ರತಿ ದಿನ ಒಂದಲ್ಲ ಒಂದು ರೀತಿಯ ಅತ್ಯಾಚಾರದ ಘಟನೆಗಳು ವರದಿಯಾಗುತ್ತಲೇ ಇವೆ. ಬುದ್ಧಿಮಾಂದ್ಯ

ಪುಟ 10 ಕ್ಕೆ



ಹಾಸನ



ಹೊಸಪೇಟೆ

ಲೈಂಗಿಕ ದೌರ್ಜನ್ಯ.....

ಪುಟ 09 ರಿಂದ

ಮಗುವಿನ ಮೇಲೆ ಕೂಡ ಅತ್ಯಾಚಾರಗಳು ನಡೆಯುತ್ತಿವೆ. ವಿಬ್ಗಯಾರ್ ಶಾಲೆಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಮಾಡಿದ ಆರೋಪಿಯನ್ನು ಬಂಧಿಸಲು 20 ದಿನ ತೆಗೆದು–ಕೊಂಡದ್ದು ರಾಜ್ಯ ಪೊಲೀಸ್ ಇಲಾಖೆ ಮತ್ತು ರಾಜ್ಯ ಸರ್ಕಾರದ ವೈಫಲ್ಯವೇ ಆಗಿದೆ. ಪ್ರಕರಣದಲ್ಲಿ ಆರೋಪಿ ಎಷ್ಟು ಅಪರಾಧಿಯೋ ಅಷ್ಟೇ ಆಡಳಿತ ಮಂಡಳಿಯೂ ಕೂಡ ಅಪರಾಧಿಯಾಗಿದ್ದು ಸರ್ಕಾರ ಆಡಳಿತ ಮಂಡಳಿಯ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು." ಎಂದು ಗುರುರಾಜ್ ದೇಸಾಯಿ ಆಗ್ರಹಿಸಿದರು.

ಬೆಂಗಳೂರು ಎಸ್‌ಎಫ್‌ಐ ನಗರಾಧ್ಯಕ್ಷೆ ಶೃತಿ ನೆಲಮಾಕನಹಳ್ಳಿ ಮಾತನಾಡಿ ಕೋಲಾರದಲ್ಲಿ ನಾಲ್ಕು ಅತ್ಯಾಚಾರಗಳು, ಉಡುಪಿ ಜಿಲ್ಲೆಯ ಬೈಂದೂರಿನ ಶಿರೂರು ಗ್ರಾಮದ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ, ಬೀದರ್, ಬೆಳಗಾಂ, ಮೈಸೂರು, ಕೊಪ್ಪಳ, ದೇವದುರ್ಗ ರಾಯಚೂರು, ಹಾವೇರಿ... ಹೀಗೆ ಎಲ್ಲ ದಿಕ್ಕುಗಳಿಂದ ಸರಣಿ ಅತ್ಯಾಚಾರಗಳು ವರದಿಯಾಗುತ್ತಿವೆ. ರಾಜ್ಯ ಸರ್ಕಾರದ ವಿಳಂಬ ಮತ್ತು ಸಡಿಲ ಧೋರಣೆಯಿಂದ ಪ್ರಕರಣಗಳು ತೀವ್ರತೆ ಕಳೆದುಕೊಳ್ಳುತ್ತಿವೆ. ಇದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಮತ್ತು ದೌರ್ಜನ್ಯಗಳ ನಿಯಂತ್ರಣಕ್ಕೆ ಶೀಘ್ರ ಕ್ರಮಗಳಿಗಾಗಿ ಒತ್ತಾಯಿಸುತ್ತದೆ ಎಂದರು.

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳನ್ನು ರಚಿಸಬೇಕು. ತ್ವರಿತಗತಿಯ ನ್ಯಾಯಾಲಯಗಳನ್ನು ಪೂರ್ಣ ಸೌಲಭ್ಯಗಳ ಜೊತೆ ತಕ್ಷಣ ರಚಿಸಿ ನಿಗದಿತ ಅವಧಿಯ ಒಳಗೆ ವಿಚಾರಣೆ, ತನಿಖೆ ಮುಗಿಸಿ ತೀರ್ಪು ನೀಡಬೇಕು. ಅತ್ಯಾಚಾರಕ್ಕೆ ಒಳಗಾದವರ ಸಂಪೂರ್ಣ ವೈದ್ಯಕೀಯ ವೆಚ್ಚ/ ಪುನರ್ವಸತಿಯ ಜವಾಬ್ದಾರಿ ಸರ್ಕಾರವೇ ಭರಿಸಬೇಕು. ವಿದ್ಯಾರ್ಥಿನಿಯರು/ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳು ಮತ್ತು ಅತ್ಯಾಚಾರ ಕಾಯ್ದೆ ಜಾರಿಮಾಡಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ದೌರ್ಜನ್ಯಗಳ ತಡೆಗೆ ನ್ಯಾಯಮೂರ್ತಿ ವರ್ಮಾ ಕಮಿಟಿಯ ಶಿಫಾರಸ್ಸುಗಳನ್ನು ಜಾರಿ ಮಾಡಬೇಕು. ಮಾಧ್ಯಮಗಳು ಸುದ್ದಿ ಪ್ರಸಾರ, ಮಾಹಿತಿ ಚಿತ್ತರಗಳ ಸಂದರ್ಭದಲ್ಲಿ ಸ್ವಯಂ ನಿಯಂತ್ರಣಗಳನ್ನು ಅಳವಡಿಸಿಕೊಳ್ಳಬೇಕು. ಅಪರಾಧ, ಹಿಂಸೆಗಳ ವೈಭವೀಕರಣ ನಿಲ್ಲಿಸಬೇಕು. ಶಿಕ್ಷಣದಲ್ಲಿ ಲಿಂಗಸಂವೇದನಾಶೀಲ ಪಠ್ಯಗಳನ್ನು ಅಳವಡಿಸಬೇಕು. ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ನೌಕರರಿಗೆ ನಿರಂತರ ಮತ್ತು ಕಡ್ಡಾಯ ಲಿಂಗಸಂವೇದನಾ ತರಬೇತಿಗಳನ್ನು, ಸಭೆಗಳನ್ನು ನಡೆಸಬೇಕು. ಶಿಕ್ಷಣವನ್ನು ಉದ್ಯಮವಾಗಿಸಿ ವಿದ್ಯಾರ್ಥಿಗಳಿಗೆ ಕನಿಷ್ಟ ಸುರಕ್ಷೆಯನ್ನೂ ಒದಗಿಸದ ಶಿಕ್ಷಣ ಸಂಸ್ಥೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಬೇಕು. ದೌರ್ಜನ್ಯಗಳ ನಿಯಂತ್ರಣ–ಕ್ಕೆ ಅಗತ್ಯವಿರುವ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುವ ಸಲುವಾಗಿ ಪ್ರತಿ ತಿಂಗಳೂ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ, ಪರಿಶೀಲನೆ ನಡೆಯುವಂತಾಗಬೇಕು. ಈ ಸಭೆಗಳಿಗೆ ವಿದ್ಯಾರ್ಥಿ / ಮಹಿಳಾ ಸಂಘಟನೆಗಳನ್ನು ಆಹ್ವಾನಿಸಬೇಕು ಎಂದು ಆಗ್ರಹಿಸಿಲಾಯಿತು.

ಪ್ರತಿಭಟನೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ವೆಂಕಟೇಶ್, ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಶ್ರೀನಿವಾಸ್, ಜಿಲ್ಲಾ ಉಪಾಧ್ಯಕ್ಷರಾದ ಹರಿಪ್ರಸಾದ್, ಚಂದನಾ, ಮೇಘಾ, ಗಾಯತ್ರಿ.ಪಿ, ಭಾರ್ಗವಿ, ಪ್ರಿಯಾಂಕಾ, ಯಶಸ್ವಿನಿ, ಡಿವೈಎಫ್‌ಐನ ಪ್ರಸಾದ್ ಸೇರಿದಂತೆ ಸಾವಿರಾರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ವಿದ್ಯಾರ್ಥಿನಿಯರ ಮೇಲಿನ ಅತ್ಯಾಚಾರ ಖಂಡಿಸಿ ಎಸ್‌ಎಫ್‌ಐ ವಿದ್ಯಾರ್ಥಿನಿಯರ ಉಪಸಮಿತಿಯಿಂದ ಹಾಸನದಲ್ಲಿ ತೀವ್ರ ಪ್ರತಿಭಟನೆ ನಡೆಸಲಾಯಿತು. ನೂರಾರು ವಿದ್ಯಾರ್ಥಿನಿಯರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


ತುಮಕೂರು


ಹಾವೇರಿ


ದಾಂಡೇಲಿ


ರಾಯಚೂರು


ಮದ್ದೂರು, ಮಂಡ್ಯ

ಉಡುಪಿ ಜಿಲ್ಲೆಯ ಕಂದಾಪುರದಲ್ಲಿ ಪ್ರತಿಭಟನೆ ನಡೆಯಿತು. ವಿದ್ಯಾರ್ಥಿನಿಯರು ಸ್ವಯಂಪ್ರೇರಿತರಾಗಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮಂಗಳೂರಲ್ಲಿ ಸಹ ನೂರಾರು ವಿದ್ಯಾರ್ಥಿನಿಯರು ಸೇರಿ ಪ್ರತಿಭಟನೆ ನಡೆಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ 'ತರಗತಿ ಬಹಿಷ್ಕಾರ' ಯಶಸ್ವಿಯಾಗಿ ನಡೆದಿದ್ದು, ಪ್ರತಿಭಟನಾ ಮೆವಣಿಗೆಯಲ್ಲಿ ನೂರಾರು ವಿದ್ಯಾರ್ಥಿನಿಯರು ಸ್ವಯಂಪ್ರೇರಿತರಾಗಿ ಭಾಗವಹಿಸಿದ್ದರು. 'ತರಗತಿ ಬಹಿಷ್ಕಾರ ಹೋರಾಟ ರಾಯಚೂರಿನಲ್ಲಿ ಯಶಸ್ವಿಯಾಗಿ ನಡೆಯಿತು. ವಿದ್ಯಾರ್ಥಿನಿಯರು ಸ್ವಯಂಪ್ರೇರಿತರಾಗಿ ನೂರಾರು ಭಾಗವಹಿಸಿದ್ದರು.

ಹೊಸಪೇಟೆಯಲ್ಲಿ ಎಸ್‌ಎಫ್‌ಐ ನೇತೃತ್ವದಲ್ಲಿ ಮೂರು ಭಾರಿ ಪ್ರತಿಭಟನೆ ನಡೆಸಲಾಗಿದೆ. ಜುಲೈ 21, 22 ಮತ್ತು 23, 2014ರಂದು ಪ್ರತಿಭಟನೆ ಮಾಡಲಾಯಿತು. ಹೆಣ್ಣು ಮಕ್ಕಳಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಮತ್ತು ಲೈಂಗಿಕ ದೌರ್ಜನ್ಯ ತಡೆಯಲು ಪ್ರತಿ ಶಾಲಾ/ಕಾಲೇಜು ಸುತ್ತಮುತ್ತಲೂ ಪೋಲಿಸ್ ಗಸ್ತು ತಿರುಗಬೇಕೆಂದು ಈ ಪ್ರತಿಭಟನೆಗಳಲ್ಲಿ ಆಗ್ರಹಿಸಲಾಯಿತು. ತುಮಕೂರಿನಲ್ಲಿ ಸಹ ಯಶಸ್ವಿ ತರಗತಿ ಬಹಿಷ್ಕಾರ ಪ್ರತಿಭಟನೆ ನಡೆದಿದೆ.

ಜಂಟಿ ಪ್ರತಿಭಟನೆ

ಜುಲೈ 22, 2014 ರಂದು ಬೆಂಗಳೂರು ನಗರದ ಬೊಮ್ಮನಹಳ್ಳಿಯ ವೃತ್ತದಲ್ಲಿ, ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ನಡೆದ ಜಂಟಿ ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಮುಖಂಡರು ಸದಸ್ಯರು ಮತ್ತು ಸಿಐಟಿಯು ಸಂಯೋಜಿತ ಕಟ್ಟಡ ಕಾರ್ಮಿಕರ ಸಂಘ, ಆಟೋಚಾಲಕರ ಸಂಘ ಮತ್ತು ಗಾರ್ಮೆಂಟ್ ಕಾರ್ಮಿಕರ ಸಂಘ, ಭಗತ್ ಸಿಂಗ್ ಮಕ್ಕಳ ಕೂಟ ಈ ಸಂಘಗಳ ಕಾರ್ಯಕರ್ತರು ಬಾಗವಹಿಸಿದ್ದರು.

ಮಂಡ್ಯ ಜಿಲ್ಲೆಯ ಮದ್ದೂರು ಹಾಗೂ ಕೆ.ಎಂ. ದೊಡ್ಡಿಗಳಲ್ಲಿ ಎಸ್‌ಎಫ್‌ಐ ಮತ್ತು ಜೆಎಂಎಸ್‌ಗಳು ಜಂಟಿಯಾಗಿ ಬೃಹತ್ ಪ್ರತಿಭಟನೆ ಸಂಘಟಿಸಿವೆ. ಜುಲೈ 21 ರಂದು ನಡೆದ ಈ ಚಳುವಳಿಯಲ್ಲಿ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಎಸ್‌ಎಫ್‌ಐ, ಡಿವೈಎಫ್‌ವೈ, ಜೆಎಂಎಸ್, ಸಿಐಟಿಯುಗಳು ಜಂಟಿಯಾಗಿ ಪ್ರತಿಭಟನೆ ನಡೆಸಿವೆ. ■

ಮೂರು ಹಂತಗಳ ಪಂಚಾಯತ್ ಚುನಾವಣೆ:

-- ಒಟ್ಟಾರೆ ಸು. ಶೇ. 90 ರಷ್ಟು ಮತದಾನ --

- ಶೇ.99 ಜಿಲ್ಲಾ ಪಂಚಾಯತ್ ಸ್ಥಾನಗಳಲ್ಲಿ ಸಿಪಿಐ(ಎಂ) ವಿಜಯ !!
- ಶೇ.98.3 ಪಂಚಾಯತ್ ಸಮಿತಿಗಳಲ್ಲಿ ಸ್ಥಾನಗಳಲ್ಲಿ ಗೆಲುವು
- ಶೇ.95 ಕ್ಕೂ ಗ್ರಾಮ ಪಂಚಾಯತ್ ಸ್ಥಾನಗಳಲ್ಲಿ ಎಡರಂಗ ಅಧಿಕಾರಕ್ಕೆ

ತ್ರಿಪುರ : ಎಡರಂಗದ ವಿಜಯ ದುಂದುಭಿ

ತ್ರಿಪುರ ರಾಜ್ಯದಲ್ಲಿ ಶೇ. 90 ರಷ್ಟು ಮತದಾನದೊಂದಿಗೆ ಜುಲೈ 15, 2014 ರಂದು ನಡೆದಿದ್ದ ಮೂರು ಹಂತಗಳ ಪಂಚಾಯತ್ ಚುನಾವಣೆಯಲ್ಲಿ ಎಡರಂಗ ಅಭೂತಪೂರ್ವ ವಿಜಯದೊಂದಿಗೆ ಮತ್ತೊಮ್ಮೆ ಜನರ ಮನಸ್ಸನ್ನು ಗೆಲ್ಲುವಲ್ಲಿ ಸಂಪೂರ್ಣ ಯಶಸ್ವಿಯಾಗಿದೆ ಮಾತ್ರವಲ್ಲ ಅದ್ಭುತ ಎನ್ನಬಹುದಾದ ಹೊಸ ದಾಖಲೆ ಬರೆದಿದೆ.

ತ್ರಿಪುರ ರಾಜ್ಯದ 8 ಜಿಲ್ಲಾ ಪಂಚಾಯತ್‌ನ 116 ಸ್ಥಾನಗಳು, ಬ್ಲಾಕ್ ಮಟ್ಟದ (ಕರ್ನಾಟಕದಲ್ಲಿ ತಾಲ್ಲೂಕು ಪಂಚಾಯಿತಿಗಳಿದ್ದಂತೆ) 35 ಪಂಚಾಯತ್ ಸಮಿತಿಗಳ 419 ಸ್ಥಾನಗಳು ಮತ್ತು 591 ಗ್ರಾಮ ಪಂಚಾಯತಿಗಳ 6,111 ಸ್ಥಾನಗಳಿಗೆ ಚುನಾವಣೆ ನಡೆಯಬೇಕಿತ್ತು.

ಅವಿರೋಧ ಆಯ್ಕೆ

ಒಟ್ಟು ಸ್ಥಾನಗಳ ಪೈಕಿ ವಿರೋಧ ಪಕ್ಷಗಳ ಅಭ್ಯರ್ಥಿಗಳೇ ಇಲ್ಲದ್ದರಿಂದ ಸಿಪಿಐ(ಎಂ) ನೇತೃತ್ವದ ಎಡರಂಗದ ಅಭ್ಯರ್ಥಿಗಳು 2 ಜಿಲ್ಲಾ ಪಂಚಾಯತ್ ಸ್ಥಾನಗಳು, 38 ಬ್ಲಾಕ್ ಮಟ್ಟದ ಪಂಚಾಯತ್ ಸಮಿತಿ ಸ್ಥಾನಗಳು ಮತ್ತು 980 ಗ್ರಾಮ ಪಂಚಾಯತ್ ಸ್ಥಾನಗಳಲ್ಲಿ ಅವಿರೋಧವಾಗಿ ಆಯ್ಕೆಯಾದರು. ಅಭ್ಯರ್ಥಿಗಳ ನಿಧನದಿಂದಾಗಿ 2 ಜಿಲ್ಲಾ ಪಂಚಾಯತ್ ಸ್ಥಾನಗಳ ಚುನಾವಣೆಯನ್ನು ಮುಂದೂಡಲಾಗಿತ್ತು. ಅಂತಿಮವಾಗಿ 114 ಜಿಲ್ಲಾ ಪಂಚಾಯತ್ ಸ್ಥಾನಗಳಿಗೆ, 381 ಪಂಚಾಯತ್ ಸಮಿತಿಗಳ ಸ್ಥಾನಗಳಿಗೆ ಮತ್ತು 5,129 ಗ್ರಾಮ ಪಂಚಾಯತ್ ಸ್ಥಾನಗಳಿಗೆ ಚುನಾವಣೆ ನಡೆಯಿತು. ಜೊತೆಗೆ 3 ನಗರ ಸಂಸ್ಥೆಗಳ ವ್ಯಾಪ್ತಿಯಲ್ಲಿ ತೆರವಾಗಿದ್ದ 4 ಸ್ಥಾನಗಳಿಗೂ ಇದೇ ಸಮಯದಲ್ಲಿ ಚುನಾವಣೆ ನಡೆಯಿತು.

ಚುನಾವಣಾ ಫಲಿತಾಂಶಗಳು ಬರುತ್ತಿದ್ದಂತೆ ಎಡರಂಗ ಸಂಪೂರ್ಣವಾಗಿ ತನ್ನ ಪ್ರಾಬಲ್ಯವನ್ನು ಮೆರೆಯುತ್ತಿರುವುದು ಸ್ಪಷ್ಟವಾಯಿತು. ಅಂತಿಮವಾಗಿ ಫಲಿತಾಂಶ ಹೊರಬಿದ್ದ ಮೇಲೆ 591 ಗ್ರಾಮ ಪಂಚಾಯತ್‌ಗಳ ಪೈಕಿ ಸಿಪಿಐ(ಎಂ) ನೇತೃತ್ವದ ಎಡರಂಗ 563ಕ್ಕೂ ಹೆಚ್ಚು ಗ್ರಾಮ ಪಂಚಾಯತ್‌ಗಳಲ್ಲಿ ಸಂಪೂರ್ಣ ಬಹುಮತ ಗಳಿಸಿರುವುದು ಖಚಿತವಾಗಿತು. (ಇದು ಶೇ. 95 ಪಾಲು ಪಂಚಾಯತ್‌ಗಳಲ್ಲಿ ಸಾಧಿಸಿದ ಗೆಲುವು) ಕಾಂಗ್ರೆಸ್ 19 ಗ್ರಾಮ ಪಂಚಾಯತ್‌ಗಳಲ್ಲಿ ಮಾತ್ರ ಗೆಲುವು ಸಾಧಿಸಿದೆ. ಬಿಜೆಪಿ 5 ಗ್ರಾಮ ಪಂಚಾಯತ್‌ನಲ್ಲಿ, ತೃಣಮೂಲ ಕಾಂಗ್ರೆಸ್ 3 ಗ್ರಾಮಪಂಚಾಯತ್‌ಗಳಲ್ಲಿ ಮಾತ್ರ ಗೆಲುವು ಸಾಧಿಸಲು ಸಾಧ್ಯವಾಗಿದೆ. ಒಂದು ಪಂಚಾಯತ್‌ನಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ದೊರಕಿಲ್ಲ.

ಕಳೆದ ಬಾರಿ ಕಾಂಗ್ರೆಸ್ ಪಕ್ಷವು ಗೆದ್ದಿದ್ದ ಗ್ರಾಮ ಪಂಚಾಯತ್‌ಗಳಲ್ಲಿ 74 ಪಂಚಾಯತ್‌ಗಳನ್ನು ಈ ಬಾರಿ ಎಡರಂಗ ಕಿತ್ತುಕೊಂಡಿದೆ. 22 ಬ್ಲಾಕ್‌ಗಳಲ್ಲಿ ವಿರೋಧ ಪಕ್ಷಗಳು ಯಾವುದೇ ಗ್ರಾಮಪಂಚಾಯತ್ ಸ್ಥಾನವನ್ನು ಗೆಲ್ಲುವಲ್ಲಿ ವಿಫಲವಾಗಿವೆ. ಎಲ್ಲ 35 ಗ್ರಾಮ ಪಂಚಾಯತ್ ಸಮಿತಿಗಳಲ್ಲೂ ಎಡರಂಗ ಬಹುಮತ ಗಳಿಸಿದೆ.

ಒಟ್ಟು 419 ಪಂಚಾಯತ್ ಸಮಿತಿಗಳ ಪೈಕಿ ಎಡರಂಗವು 412 ಸ್ಥಾನಗಳನ್ನು ಗೆದ್ದಿದೆ. ಅಂದರೆ ಶೇ. 98.3 ಸ್ಥಾನಗಳಲ್ಲಿ ಗೆಲುವು. 7 ಸ್ಥಾನಗಳಲ್ಲಿ ಮಾತ್ರ ಕಾಂಗ್ರೆಸ್ ಗೆಲುವು ಸಾಧಿಸಿದೆ. ಬೇರೆ ಯಾವ ಪಕ್ಷಕ್ಕೂ ಯಾವ ಸ್ಥಾನವೂ ಸಿಕ್ಕಿಲ್ಲ.

ಜಿಲ್ಲಾ ಪರಿಷತ್(ಜೆಡ್‌ಪಿ)

8 ಜಿಲ್ಲಾ ಪಂಚಾಯತ್‌ಗಳ 116 ಸ್ಥಾನಗಳ ಪೈಕಿ ಸಿಪಿಐ(ಎಂ) ಅಭ್ಯರ್ಥಿಗಳು 115 ರಲ್ಲಿ ಗೆಲುವು ದಾಖಲಿಸಿದ್ದಾರೆ. ಅಂದರೆ ಶೇ. 99 ರಷ್ಟು ಸ್ಥಾನಗಳಲ್ಲಿ ಗೆಲುವು !!.

ಫಲಿತಾಂಶಗಳು ಹೊರ ಬೀಳುತ್ತಿದ್ದಂತೆ ಎಡರಂಗದ ಕಾರ್ಯಕರ್ತರು ಇಂತಹ ಅಭೂತ ಪೂರ್ವ ಬೆಂಬಲವನ್ನು ನೀಡಿದ ತ್ರಿಪುರದ ಜನರನ್ನು ಅಭಿನಂದಿಸಿ ಮೆರವಣಿಗೆಗಳನ್ನು ನಡೆಸಿದರು.

ಊಹಾಪೋಹಗಳಲ್ಲ–
ಪಕ್ಷದ ಚಿನ್ಹೆಗಳೇ ಉಂಟಲ್ಲ !!!

ಇಲ್ಲಿ ಎರಡು ಪ್ರಮುಖ ಅಂಶಗಳನ್ನು ಗಮನಿಸಬೇಕಾಗಿದೆ. ಪಂಚಾಯತ್ ಚುನಾವಣೆಗಳಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಹಂತದ ಚುನಾವಣೆಗಳು ಪಕ್ಷಗಳು ಮತ್ತು ಅವುಗಳ ಚಿನ್ಹೆಗಳ ಆಧಾರದಲ್ಲಿ ನಡೆಯುತ್ತವೆ. ಆದರೆ ತಳಹಂತದ ಅಂದರೆ ಗ್ರಾಮ ಪಂಚಾಯತ್ ಹಂತದ ಚುನಾವಣೆಗಳು ದೇಶದಲ್ಲಿ ಎಲ್ಲ ರಾಜ್ಯಗಳಲ್ಲೂ ಒಂದೇ ರೀತಿ ನಡೆಯುವುದಿಲ್ಲ. ಉದಾಹರಣೆಗೆ ಕರ್ನಾಟಕದಲ್ಲಿ ಗ್ರಾಮ ಪಂಚಾಯತ್ ಚುನಾವಣೆಗಳು ರಾಜಕೀಯ ಪಕ್ಷಗಳ ಚಿನ್ಹೆಗಳ ಮೇಲೆ ನಡೆಯುವುದಿಲ್ಲ. ಇಲ್ಲಿ ಈ ಮೂರನೇ ಹಂತದ ಚುನಾವಣೆ 'ಪಕ್ಷಾತೀತ' ಎಂದು ಹೇಳಲಾದದ್ದು. ಹಾಗಾಗಿ ಇಲ್ಲಿಯ ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಯಾವ ರಾಜಕೀಯ ಪಕ್ಷ ಗೆಲುವು ಸಾಧಿಸಿತು ಎಂಬುದು ಸ್ಪಷ್ಟವಾಗಿ ಗೊತ್ತಾಗುವುದೇ ಇಲ್ಲ. ಇಂಥ ಸ್ಥಿತಿಯಲ್ಲಿ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ಹೆಚ್ಚು ಗ್ರಾಮ ಪಂಚಾಯತ್‌ಗಳು ನಮ್ಮವೇ ಎಂದು ಘೋಷಿಸಿಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಪ್ರಮುಖ ಪಕ್ಷಗಳು ಕೊಚ್ಚಿಕೊಳ್ಳುವ ಗೆಲುವಿನ ಸಂಖ್ಯೆಯನ್ನು ಕೂಡಿಸಿ ನೋಡಿದರೆ ಅದು ವಾಸ್ತವಾಗಿ ಇರುವ ಗ್ರಾಮ ಪಂಚಾಯತ್ ಸ್ಥಾನಗಳಿಗಿಂತ ಎಷ್ಟೋ ಜಾಸ್ತಿಯಾಗಿರುತ್ತದೆ. !!!

ಆದರೆ ತ್ರಿಪುರ ಮತ್ತು ಪಶ್ಚಿಮ ಬಂಗಾಳದ ರಾಜ್ಯಗಳಲ್ಲಿ ಈ ರೀತಿಯ ವ್ಯವಸ್ಥೆ ಇಲ್ಲ. ಬದಲಾಗಿ ಅಲ್ಲಿಯ ಗ್ರಾಮ ಪಂಚಾಯತ್‌ಗಳ ಹಂತದಲ್ಲೂ ರಾಜಕೀಯ ಪಕ್ಷಗಳು ತಮ್ಮ ಪಕ್ಷಗಳು ಮತ್ತು ಚಿನ್ಹೆಗಳ ಆಧಾರದಲ್ಲಿಯೇ ಸ್ಪರ್ಧಿಸುತ್ತವೆ. ಆದ್ದರಿಂದ ಇಲ್ಲಿ ಯಾವುದೇ ಪಕ್ಷ ತನ್ನ ಗೆಲುವಿಗೆ ಸಂಬಂಧಿಸಿ ಮನಸ್ಸಿಗೆ ಬಂದಂತೆ ಘೋಷಣೆ ಮಾಡಿಕೊಳ್ಳಲು ಸಾಧ್ಯವಿಲ್ಲ.

ನಿರಂತರವಾಗಿ ಹೆಚ್ಚುತ್ತಿರುವ ಮತದಾನ ಮತ್ತು ಎಡರಂಗದ ಜನಬೆಂಬಲ

ಎರಡನೇ ಅಂಶ, ತ್ರಿಪುರಾದಲ್ಲಿ ನಡೆದ ಇತ್ತೀಚಿನ ಎಲ್ಲ ಚುನಾವಣೆಗಳನ್ನು ಗಮನಿಸಿದರೆ ಅದು ರಾಜ್ಯ ವಿಧಾನ ಸಭೆಗೆ ನಡೆದ ಚುನಾವಣೆ ಇರಲಿ, 2 ತಿಂಗಳ ಹಿಂದೆ ನಡೆದ ಲೋಕಸಭಾ ಚುನಾವಣೆ ಇರಲಿ, ಈಗ ನಡೆದಿರುವ ಪಂಚಾಯತ್ ಚುನಾವಣೆಗಳಿರಲಿ ಒಂದು ವಿಚಾರ ಸ್ಪಷ್ಟವಾಗುತ್ತದೆ. ಚುನಾವಣೆಯಿಂದ ಚುನಾವಣೆಗೆ ಮತದಾನದ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಪಂಚಾಯತ್ ಚುನಾವಣೆಯಲ್ಲಿ ಅದು ಶೇ. 90 ರಷ್ಟಕ್ಕೆ ಏರಿದೆ. ಇದು ಮಾತ್ರವಲ್ಲದೆ ಪ್ರತಿ ಚುನಾವಣೆಗಳಲ್ಲೂ ಸಿಪಿಐ(ಎಂ) ನೇತೃತ್ವದ ಎಡರಂಗವೂ ಕೂಡ ತನ್ನ ಮತದಾರರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಇದರ ಸ್ಪಷ್ಟ ಸಂದೇಶವೇನೆಂದರೆ ಅಲ್ಲಿಯ ಎಡರಂಗದ ಸರ್ಕಾರ ಜಾರಿಗೆ ತರುತ್ತಿರುವ ಜನಪರವಾದ ನೀತಿಗಳು ಮತ್ತು ಗಣನೀಯ ಸಂಖ್ಯೆಯಲ್ಲಿರುವ ಬುಡಕಟ್ಟು ಜನರ ಅಭಿವೃದ್ದಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು ಇಂತಹ ಫಲಿತಾಂಶ ಬರಲು ಕಾರಣವಾಗಿದೆ.


ಅಗರ್ತಲ

ಎಚ್.ಆರ್. ನವೀನ್‌ಕುಮಾರ್

'ಸಂತೃಪ್ತಿ – ಉದಾಸೀನತೆ'ಗೆ ಅವಕಾಶವಿಲ್ಲ
–ಮಾಣಿಕ್ ಸರ್ಕಾರ್


ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್

ಮೂರು ಹಂತದ ಪಂಚಾಯತ್ ಚುನಾವಣೆಗಳಲ್ಲಿ ಒಟ್ಟಾರೆ ಶೇಕಡ 95 ಕ್ಕೂ ಹೆಚ್ಚು ಸ್ಥಾನಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗದ ಅಭ್ಯರ್ಥಿಗಳನ್ನು ಗೆಲ್ಲಿಸಿರುವ ತ್ರಿಪುರ ರಾಜ್ಯದ ಜನತೆಗೆ ತ್ರಿಪುರ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಮಾಣಿಕ್ ಸರ್ಕಾರ್ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಅತ್ಯಂತ ಶಾಂತಿಯುತವಾಗಿ ಚುನಾವಣೆಯನ್ನು ನಡೆಸಿದ ರಾಜ್ಯ ಚುನಾವಣಾ ಆಯೋಗ, ಅದಕ್ಕೆ ಸಹಕಾರಿಯಾಗಿ ಕೆಲಸ ಮಾಡಿದ ರಾಜ್ಯದ ಅಧಿಕಾರಿಗಳು ಮತ್ತು ಸೂಕ್ತ ಭದ್ರತೆ ನೀಡಿದ ಪೋಲಿಸ್ ಸಿಬ್ಬಂದಿಗೂ ಅವರು ಧನ್ಯವಾದ ಅರ್ಪಿಸಿದ್ದಾರೆ.

ಜನತೆ ತ್ರಿಪುರದ ಎಡರಂಗ ಸರಕಾರದ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸದ ಸಂಕೇತವಾಗಿ ಈ ಚುನಾವಣಾ ಫಲಿತಾಂಶ ಹೊರಬಂದಿದೆ.

2009ರಲ್ಲಿ ನಡೆದ ಚುನಾವಣೆಗಳಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ಶೇ 81.02 ಸ್ಥಾನಗಳಲ್ಲಿ ಮತ್ತು ಶೇ. 87.63 ರಷ್ಟು ಪಂಚಾಯತಿ ಸಮಿತಿಗಳಲ್ಲಿ ಮತ್ತು ಶೇ. 90.24 ರಷ್ಟು ಜಿಲ್ಲಾ ಪರಿಷತ್(ಜೆಡ್‌ಪಿ) ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಎಡರಂಗದ ಜನಬೆಂಬಲ ಇನ್ನಷ್ಟು ಹೆಚ್ಚಾಗಿರುವುದು ಈ ಮೂಲಕ ಸಾಬೀತಾಗಿದೆ. ಈ ಗೆಲುವು ಎಡರಂಗ ಸರ್ಕಾರಕ್ಕೆ ಜನಪರ ಕೆಲಸ ಮುಂದುವರಿಸಲು ಮತ್ತಷ್ಟು ಸ್ಫೂರ್ತಿ ನೀಡಿದ್ದು ತ್ರಿಪುರದಾದ್ಯಂತ ಜನತೆ ಗೆಲುವಿನ ಸಂಭ್ರಮಾಚರಣೆ ನಡೆಸಿದ್ದಾರೆ. ಜನರ ವಿಶ್ವಾಸದೊಂದಿಗೆ ನಮ್ಮ ಮುಂದಿರುವ ಗುರಿ ಮತ್ತು ನಮ್ಮ ಮೇಲೆ ಜನತೆ ಇಟ್ಟಿರುವ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡಲು ಎಡರಂಗ ಸರ್ಕಾರ ಖಂಡಿತ ಮುಂದಾಗುತ್ತದೆ ಎಂದಿರುವ ಮಾಣಿಕ್ ಸರ್ಕಾರ್ ಈ ಗೆಲುವು ಸಂತೃಪ್ತಿ ಮತ್ತು ಉದಾಸೀನತೆ–ಮೈಮರೆವಿಗೆ ಕಾರಣವಾಗುವುದಿಲ್ಲ ಎಂಬ ಭರವಸೆಯನ್ನೂ ವ್ಯಕ್ತಪಡಿಸಿದ್ದಾರೆ.

ಅಗತ್ಯ ವಸ್ತುಗಳ ತೀವ್ರ ಬೆಲೆ ಏರಿಕೆಗೆ ಕಾರಣವಾಗುವ ಮೋದಿ ಸರ್ಕಾರದ ಬಂಡವಾಳಿಗರ ಪರವಾದ ಬಜೆಟ್ ಇಲ್ಲಿ ಬಿಜೆಪಿ ನೆರವಿಗೆ ಬಂದಿಲ್ಲ. ಮತ್ತು ತನ್ನ ಜನ ವಿರೋಧಿ ನೀತಿಗಳು ಮತ್ತು ಭ್ರಷ್ಟಾಚಾರದಿಂದ ಜನತೆಯಿಂದ ದೂರವಾಗಿರುವ ಕಾಂಗ್ರೆಸ್ ಯಾವ ರೀತಿಯ ನಿತ್ರಾಣ ಸ್ಥಿತಿಯಲ್ಲಿದೆ ಎಂಬುದನ್ನು ಈ ಫಲಿತಾಂಶ ತೋರಿಸಿಕೊಟ್ಟಿದೆ. ನೆರೆಯ ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ನಡೆಸುತ್ತಿರುವ ದುರಾಡಳಿತವನ್ನು ಗಮನಿಸುತ್ತಿರುವ ತ್ರಿಪುರದ ಜನತೆ ತ್ರಿಪುರದಲ್ಲಿ 1978 ರಿಂದ 1988 ರವರೆಗೆ ಆಡಳಿತ ನಡೆಸಿದ ಮತ್ತು 1993 ರಿಂದ ಇಲ್ಲಿಯವರೆಗೆ ನಿರಂತರವಾಗಿ ತಾವು ಬೆಂಬಲಿಸುತ್ತ ಬಂದಿರುವ ಎಡರಂಗವನ್ನೇ ಈಗಲೂ ಬೆಂಬಲಿಸಿದ್ದಾರೆ, ಹಿಂದೆಂದೂ ಇಲ್ಲದ ಭಾರಿ ಪ್ರಮಾಣದಲ್ಲಿ. ●



ಕೃಷಿ ಕೂಲಿಕಾರರ 8ನೇ ಅಖಿಲ ಭಾರತ ಸಮ್ಮೇಳನ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 8ನೇ ಅಖಿಲ ಭಾರತ ಸಮ್ಮೇಳನ ತೆಲಂಗಾಣ ರಾಜ್ಯದ ವಾರಂಗಲ್ ನಗರದಲ್ಲಿ ಇದೇ ಜುಲೈ 30 ರಿಂದ ಅಗಸ್ಟ್ 2 ರ ವರೆಗೆ 4 ದಿನಗಳ ಕಾಲ ನಡೆಯಲಿದೆ. ಸಮ್ಮೇಳನವು ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯೊಂದಿಗೆ ಆರಂಭವಾಗಲಿದ್ದು ತ್ರಿಪುರ ರಾಜ್ಯದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಬಹಿರಂಗ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು.

ದೇಶದ ವಿವಿಧ ರಾಜ್ಯಗಳಿಂದ ಸುಮಾರು 1000 ಪ್ರತಿನಿಧಿಗಳು ಮತ್ತು ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಿ ದೇಶದಲ್ಲಿ ಕೃಷಿ ಕೂಲಿಕಾರರ ಇಂದಿನ ಸ್ಥಿತಿಗತಿಗಳ ಕುರಿತು ಚರ್ಚಿಸಲಿದ್ದಾರೆ. ಕರ್ನಾಟಕದಿಂದ 30 ಮಂದಿ ಪ್ರತಿನಿಧಿಗಳು, 5 ಜನ ವೀಕ್ಷಕರು ಮತ್ತು ಇಬ್ಬರು ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು (ಒಟ್ಟು 37 ಮಂದಿ) ಸಮ್ಮೇಳನದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವರು.

– ಚಂದ್ರಪ್ಪ ಹೊಸ್ಕೇರಾ,
ರಾಜ್ಯ ಪ್ರಧಾನ ಕಾರ್ಯದರ್ಶಿ

ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ರದ್ದುಗೊಳಿಸುವ ಮೋದಿ ಸರ್ಕಾರದ ಯೋಜನೆಗೆ ಕೂಲಿಕಾರರ ಸಂಘದ ಖಂಡನೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ರದ್ದುಗೊಳಿಸುವ ಅಥವ ದುರ್ಬಲಗೊಳಿಸುವ ಕೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಯೋಚನೆಯನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಬಲವಾಗಿ ಖಂಡಿಸಿದೆ. ಇತ್ತೀಚೆಗೆ ರಾಜಾಸ್ತಾನದ ಬಿಜೆಪಿ ಮುಖ್ಯಮಂತ್ರಿ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವವನ್ನು ಸಲ್ಲಿಸಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಗೆ ಈಗ ಇರುವ ಕಾನೂನಾತ್ಮಕ ಆಧಾರವನ್ನು ತೆಗೆದುಹಾಕಿ ಅದನ್ನೊಂದು ಯೋಜನೆಯಾಗಿ ಮಾತ್ರ ಉಳಿಸಿಕೊಳ್ಳುವ ಸೂಚನೆಯನ್ನು ನೀಡಿರುವ ಸಂಗತಿ ಪತ್ರಿಕೆಗಳಲ್ಲಿ ವರದಿಯಾಗಿದೆ.

ತನ್ನ ಚುನಾವಣಾ ಪ್ರಚಾರದಲ್ಲಿ ಉದ್ಯೋಗ ಸೃಷ್ಟಿಯ ಭರವಸೆಯನ್ನು ನೀಡಿದ್ದ ಬಿಜೆಪಿ ಈಗ ಗ್ರಾಮೀಣ ಭಾರತದಲ್ಲಿ ಉದ್ಯೋಗ ಸೃಷ್ಟಿಸಲು ಇರುವಂತಹ ಏಕೈಕ ಕಾನೂನಾತ್ಮಕ ಅವಕಾಶವನ್ನು ಕಳಚಿ ಹಾಕಲು ಹೊರಟಿದೆ. ಹಿಂದಿನ ಕಾಂಗ್ರೆಸ ನೇತೃತ್ವದ ಯುಪಿಎ ಸರ್ಕಾರವು ಸಹ ತನ್ನ ಅಧಿಕಾರಾವಧಿಯ ಕೊನೆಯ ಕೆಲವು ವರ್ಷಗಳಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ನೀಡುವ ಅನುದಾನವನ್ನು ಕಡಿತ ಮಾಡುತ್ತಾ ಬಂದು ಕಾಯ್ದೆಯನ್ನು ದುರ್ಬಲಗೊಳಿಸತೊಡಗಿತ್ತು. ಬಿಜೆಪಿ ಸರ್ಕಾರ ಕಾಂಗ್ರೆಸ್ ಧೋರಣೆಯನ್ನೇ ಮುಂದುವರೆಸಲು ಹೊರಟಿದೆ. ಬಿಜೆಪಿ ಸರ್ಕಾರ ಏನಾದರೂ ಗ್ರಾಮೀಣ ಬಡವರಿಗೆ ಆಸರೆಯಾಗಿರುವ ಈ ಯೋಜನೆಯನ್ನು ಬಂದ್ ಮಾಡಿದರೆ ಅದು ದೇಶವ್ಯಾಪಿ ಪ್ರತಿಭಟನೆಯನ್ನು ಎದುರಿಸಬೇಕಾದಿತು ಎಂದು ಕೃಷಿ ಕೂಲಿಕಾರರ ಸಂಘ ಎಚ್ಚರಿಕೆ ನೀಡಿದೆ.

ಯೋಜನೆಯನ್ನು ದುರ್ಬಲಗೊಳಿಸುವುದನ್ನು ಕೈಬಿಟ್ಟು ಅದನ್ನು ಇನ್ನಷ್ಟು ಬಲಪಡಿಸುವ ಬಗ್ಗೆ ಸರ್ಕಾರ ಯೋಚಿಸಬೇಕು. ಕೆಲಸ ಬಯಸುವವರು ವರ್ಷದಲ್ಲಿ ಎಷ್ಟು ದಿನ ಕೆಲಸಕ್ಕಾಗಿ ಅರ್ಜಿ ಸಲ್ಲಿಸುತ್ತಾರೋ ಅಷ್ಟು ದಿನ ಕೆಲಸ ಕೊಡುವಂತಾಗಬೇಕು. ಕನಿಷ್ಟ ವರ್ಷದಲ್ಲಿ 100 ದಿನಗಳ ಕೆಲಸವನ್ನಾದರೂ ಕಡ್ಡಾಯವಾಗಿ ಕೊಡಬೇಕು. ಕೆಲಸ ಒದಗಿಸಲಾಗದ ದಿನಗಳ ಬಾಬತ್ತು ನಿರುದ್ಯೋಗ ಭತ್ಯೆ ವೇತನ ಪಾವತಿ ವಿಳಂಬಕ್ಕೆ ಪರಿಹಾರ, ಬಾಕಿವೇತನ ಪಾವತಿ ಮುಂತಾದ ಎಲ್ಲ ಕಾನೂನಾತ್ಮಕ ಅಂಶಗಳನ್ನು ಕ್ರಮಬದ್ಧವಾಗಿ ಜಾರಿಮಾಡಬೇಕು. ಯಂತ್ರಗಳ ಮೂಲಕ, ಗುತ್ತಿಗೆದಾರರ ಮೂಲಕ ಕೆಲಸ ಮಾಡಿಸಿಕೊಂಡು ಅನುದಾನದ ಹಣವನ್ನು ಲಪಟಾಯಿಸುವವರ ವಿರುದ್ಧ ಕಠಿಣ ಕ್ರಮ ಜರಗಿಸಬೇಕು.

2013–14ನೇ ಸಾಲಿನಲ್ಲಿ ಶೇ. 60 ರಷ್ಟು ಕೂಲಿ ಹಣ ಕೆಲಸ ಮಾಡಿ ಮುಗಿಸಿದ 15 ದಿನಗಳೊಳಗೆ ಪಾವತಿ ಮಾಡಲಾಗಿಲ್ಲ. ಅಂ–ದರೆ ಸುಮಾರು 16,000 ಕೋಟಿ ರೂ. ಕೂಲಿ ಹಣವನ್ನು ಕೆಲಸಗಾರರಿಗೆ ಸಮಯಕ್ಕೆ ಸರಿಯಾಗಿ ಪೂರೈಕೆ ಮಾಡಿಲ್ಲ. ಇದರಿಂದಾಗಿ, ಉದ್ಯೋಗ ಖಾತ್ರಿ ಕೆಲಸವನ್ನೇ ಅವಲಂಭಿಸಿರುವ ಲಕ್ಷಾಂತರ ಕುಟುಂಬಗಳೀಗೆ ಬದುಕು ದುಸ್ತರವಾಗಿದೆ ಮತ್ತು ಸಾಲಮಾಡಿ ಜೀವನ ಸಾಗಿಸುವಂತಾಗಿದೆ. 2012–13 ರಲ್ಲಿ ಸುಮಾರು 4500 ಕೋಟಿ ರೂ. ಕೂಲಿ ಹಣ ಸಂದಾಯವಾಗದೆ ಬಾಕಿ ಉಳಿದಿತ್ತು. ಬಡ ಕೂಲಿಕಾರರು ಕಷ್ಟಪಟ್ಟು ದುಡಿದು ಗಳಿಸಿದ ಕೂಲಿ ಹಣವನ್ನು ಸಂದಾಯ ಮಾಡದೆ ಕೂಲಿಕಾರರನ್ನು ಸತಾಯಿಸುವುದು ಖಂಡನೀಯವಾಗಿದೆ.

ಹಣದ ಕೊರತೆಯ ನೆಪಮಾಡಿ ಕೂಲಿಕಾರರಿಗೆ ವಿಳಂಬ ಕೂಲಿ ಸಂದಾಯ ಪರಿಹಾರವನ್ನು ನೀಡಲು ಸರ್ಕಾರ ಇದುವರೆಗೂ ಸರಿಯಾದ ಕ್ರಮಗಳನ್ನು ಕೈಗೊಂಡಿಲ್ಲ. ಇದು ಕಾನೂನಿನ ಉಲ್ಲಂಘನೆ. ಸರ್ಕಾರ ತಾನು ರೂಪಿಸಿದ ಕಾನೂನನ್ನು ತಾನೇ ಉಲ್ಲಂಘಿಸುತ್ತಿದ್ದರೆ ಪ್ರಜೆಗಳನ್ನು ಯಾರು ಕಾಪಾಡಬೇಕು?

ಅದೇ ರೀತಿಯಲ್ಲಿ, ನಿರುದ್ಯೋಗ ಭತ್ಯೆ ನೀಡುವ ಪ್ರಶ್ನೆಯನ್ನೂ ಸರ್ಕಾರ ಕಡೆಗಣಿಸುತ್ತಾ ಬಂದಿದೆ. ನಿರುದ್ಯೋಗ ಭತ್ಯೆ ಕೊಡಬೇಕು ಎಂದು ಒಂಬಡ್ಸ್‌ಮನ್ ಆದೇಶ ನೀಡುತ್ತಾರೆ. ಆದರೆ ಆ ಆದೇಶ ಜಾರಿಯಾಗುವುದಿಲ್ಲ. ಕೆಲಸಕ್ಕಾಗಿ ಅರ್ಜಿ ಸಲ್ಲಿಸಿ 15 ದಿನಗಳವರೆಗೂ ಕೆಲಸ ನೀಡದಿದ್ದರೆ ಕಾಯ್ದೆ ಪ್ರಕಾರ ನಿರುದ್ಯೋಗ ಭತ್ಯೆ ನೀಡಬೇಕು.



2013–14 ರ ಸಾಲಿನಲ್ಲಿ ಕೂಲಿಕಾರರಿಗೆ ನಿರುದ್ಯೋಗ ಭತ್ಯೆಯಾಗಿ ಕೊಡಬೇಕಾಗಿದ್ದ ಒಟ್ಟು ಹಣ ರೂ. 2924 ಕೋಟಿ. ವರ್ಷ ಕೊನೆಗೊಳ್ಳುವವರೆಗೂ ದೇಶದಲ್ಲಿ ಎಲ್ಲಿಯೂ ಈ ಮೊತ್ತದಲ್ಲಿ ಒಂದು ರೂಪಾಯಿಯನ್ನು ಸಹ ನಿರುದ್ಯೋಗ ಭತ್ಯೆ ಯಾಗಿ ನೀಡಿಲ್ಲ. 2014–15 ರ ಈ ಅವಧಿಯಲ್ಲಿ ಕೆಲಸಗಾರರಿಗೆ ನೀಡಬೇಕಾದ ನಿರುದ್ಯೋಗ ಭತ್ಯೆ 1372 ಕೋಟಿ ರೂ. ಆಗಿದೆ.

ಕನಿಷ್ಠ ವೇತನ ಕಡ್ಡಾಯ: ಸುಪ್ರೀಂ ಕೋರ್ಟ್

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ಕೆಲಸಗಾರರಿಗೆ ನೀಡುವ ವೇತನವು ಆಯಾ ರಾಜ್ಯಗಳ ಕೃಷಿ ಕೂಲಿಕಾರರಿಗೆ ಸರ್ಕಾರ ನಿಗದಿಮಾಡಿರುವ ಕನಿಷ್ಠ ವೇತನಕ್ಕಿಂತ ಕಡಿಮೆ ವೇತನವನ್ನು ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಉದ್ಯೋಗ ಖಾತ್ರಿ ಯೋಜನೆಯಡಿ ನಿಗದಿ ಮಾಡಲಾಗುವ ವೇತನವು ರಾಜ್ಯ ಸರ್ಕಾರ ಕೃಷಿ ಕೂಲಿಕಾರರಿಗೆ ನಿಗದಿ ಮಾಡುವ ಕನಿಷ್ಠ ವೇತನಕ್ಕಿಂತ ಕಡಿಮೆ ಇರಬಾರದೆಂದು ಕರ್ನಾಟಕ ಹೈಕೋರ್ಟ್ 2011ರ ಸೆ. 23 ರಂದು ತೀರ್ಪು ನೀಡಿತ್ತು. ಅಲ್ಲದೆ, ಯೋಜನೆಯ ಅಡಿಯಲ್ಲಿ ಅದುವರೆಗೆ ಯಾರ್‍ಯಾರಿಗೆ ಕಡಿಮೆ ವೇತನ ನೀಡಲಾಗಿದೆಯೋ ಅವರಿಗೆಲ್ಲ ಬಾಕಿ ಹಣವನ್ನು ಪಾವತಿಸುವಂತೆಯೂ ಆದೇಶಿಸಿತ್ತು. ಕರ್ನಾಟಕ ಪ್ರಾಂತ ಸಂಘವು ಹೈಕೋರ್ಟ್‌ನಲ್ಲಿ ಈ ಅರ್ಜಿ ಹಾಕಿತ್ತು.

ಕರ್ನಾಟಕ ಹೈಕೋರ್ಟಿನ ಈ ತೀರ್ಪಿನ ವಿರುದ್ಧ ಕೇಂದ್ರ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಸುಪ್ರೀಂ ಕೋರ್ಟ್ ರಾಜ್ಯ ಹೈಕೋರ್ಟ್ ತೀರ್ಪನ್ನೇ ಎತ್ತಿಹಿಡಿದು ತೀರ್ಪು ನೀಡಿತು. ಕೂಲಿಕಾರರ ಪರವಾಗಿ ವಕೀಲರಾದ ವಿ.ಕೆ. ಬಿಜು ವಾದ ಮಂಡಿಸಿದ್ದರು. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಕರ್ನಾಟಕದಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರರಿಗೆ ಎಪ್ರಿಲ್ 1, 2014 ರಿಂದ ಅನ್ವಯವಾಗುವಂತೆ ದಿನವೊಂದಕ್ಕೆ ರೂ. 269–00 ವೇತನ ನೀಡಬೇಕಾಗುತ್ತದೆ. ಕರ್ನಾಟಕ ಸರ್ಕಾರವು ಕೃಷಿ ಕೂಲಿಕಾರರಿಗೆ ಕೃಷಿ ಕ್ಷೇತ್ರದ ವಿವಿಧ ಕೆಲಸಗಳಿಗಾಗಿ ದಿನವೊಂದಕ್ಕೆ ರೂ. 269 ಅನ್ನು ಕನಿಷ್ಠ ವೇತನವಾಗಿ ನಿಗದಿ ಪಡಿಸಿದೆ. ಈ ಮೊತ್ತಕ್ಕೆ ಕಡಿಮೆಯಾಗದಂತೆ ಉದ್ಯೋಗಖಾತ್ರಿ ಕೆಲಸಗಾರರಿಗೆ ವೇತನ ನೀಡಲು ಬೇಕಾಗುವ ಹೆಚ್ಚುವರಿ ಅನುದಾನವನ್ನು ಕೇಂದ್ರ ಸರ್ಕಾರ ಪೂರೈಕೆ ಮಾಡಬೇಕು. ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹಾಕಿ ಹೆಚ್ಚುವರಿ ಅನುದಾನವನ್ನು ಪಡೆಯಬೇಕು.

ಕೇಂದ್ರ ಸರ್ಕಾರ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಇನ್ನಷ್ಟು ಬಲಪಡಿಸಬೇಕು, ರಾಜ್ಯ ಸರ್ಕಾರ ಅದನ್ನು ಸಮರ್ಪಕವಾಗಿ ಭ್ರಷ್ಟಾಚಾರ ಮುಕ್ತವಾಗಿ ಜಾರಿಗೆ ತರಬೇಕು ಮತ್ತು ಸುಪ್ರೀಂ ಕೋರ್ಟ್ ಆದೇಶಕ್ಕೆ ಅನುಗುಣವಾಗಿ ಎಪ್ರಿಲ್ 1, 2014 ರಿಂದ ಅನ್ವಯವಾಗುವಂತೆ ದಿನವೊಂದರ ಕೆಲಸಕ್ಕೆ ರೂ. 269 ವೇತನ ನೀಡಬೇಕೆಂದು ಒತ್ತಾಯಿಸಲು ಹೋರಾಟಗಳನ್ನು ಹಮ್ಮಿಕೊಳ್ಳಬೇಕೆಂದು ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ತಮ್ಮ ಘಟಕಗಳಿಗೆ ಕರೆನೀಡಿವೆ.

–ಚಂದ್ರಪ್ಪ ಹೊಸ್ಕೇರಾ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಾರ್ವಜನಿಕ ಖರೀದಿ ವ್ಯವಸ್ಥೆಯನ್ನೂ ಕಳಚಿಹಾಕುವ ಹುನ್ನಾರ

ರೈತರಿಗೆ ತಮ್ಮ ಬೆಳೆ ಬೆಳೆಯಲು ತಗಲುವ ಖರ್ಚಿಗಿಂತ 50ಶೇ. ಹೆಚ್ಚ ದರದಲ್ಲಿ ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡುವ ಚುನಾವಣಾ ಆಶ್ವಾಸನೆಯನ್ನು ಮುರಿದುದರಿಂದಲೇ ತೃಪ್ತವಾಗದ ಮೋದಿ ಸರಕಾರ ಈಗ ಸಾರ್ವಜನಿಕ ಖರೀದಿ ವ್ಯವಸ್ಥೆಯನ್ನು ಕ್ರಮೇಣ ಮುಗಿಸಿ ಬಿಡುವ ಕ್ರಮಕ್ಕೆ ಕೈಹಾಕಿದಂತೆ ಕಾಣುತ್ತದೆ.

ಬಳಕೆದಾರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಮಂತ್ರಾಲಯು ಕೇಂದ್ರ ದಾಸ್ತಾನಿಗೆ ಖರೀದಿಯ ಧೋರಣೆಯಲ್ಲಿ ಬದಲಾವಣೆ ಮಾಡಲಾಗಿದೆ ಎಂದು ರಾಜ್ಯಗಳಿಗೆ ಒಂದು ಪತ್ರವನ್ನು ಈಗ ಕಳಿಸಿದೆ. ಈ ಪತ್ರದಲ್ಲಿರುವ ಒಕ್ಕಣಿಕೆ ನೋಡಿದರೆ ಈಗಿರುವ ದುರ್ಬಲ ಖರೀದಿ ವ್ಯವಸ್ಥೆಯನ್ನು ಉತ್ತಮ ಪಡಿಸುವ ಬದಲು ಅದನ್ನು ಕಳಚಿ ಹಾಕುವ ಯೋಚನೆ ಇಟ್ಟು-ಕೊಂಡಂತೆ ಕಾಣುತ್ತದೆ, ಇದು ಕೋಟ್ಯಂತರ ರೈತರು ಜೀವನಾಧಾರಕ್ಕೇ ಏಟು ಕೊಡುತ್ತದೆ. ಜತೆಗೆ ದೇಶದ ಆಹಾರ ಭದ್ರತೆಗೆ ಗಂಭೀರ ಕುತ್ತು ತರುತ್ತದೆ. ಕಾರ್ಪೊರೇಟ್ ವಲಯ ಲಾಭ ಕೋರತನಕ್ಕೆ ಇಳಿಯಲು ಅವಕಾಶ ಮಾಡಿಕೊಡುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಪ್ರತಿಭಟಿಸಿದೆ.

ಮೋದಿ ಸರಕಾರ ರಾಜ್ಯಗಳಿಗೆ ಕಳಿಸಿದ ಪತ್ರದಲ್ಲಿ ಕೇಂದ್ರ ಸರಕಾರ ಪ್ರಕಟಿಸುವ ಬೆಂಬಲ ಬೆಲೆಗಿಂತ ಹೆಚ್ಚಿನ ಬೆಲೆ ಕೊಡಲು ರಾಜ್ಯ ಸರಕಾರಗಳು ಬೋನಸ್ ಘೋಷಿಸಿದರೆ ಅದು 'ಮಾರುಕಟ್ಟೆಯನ್ನು ವಿರೂಪಗೊಳಿಸುತ್ತದೆ', ಮತ್ತು "ಖಾಸಗಿ ಖರೀದಿದದಾರರನ್ನು ಮಾರುಕಟ್ಟೆಯಿಂದ ಹೊರಹಾಕುತ್ತದೆ" ಎಂದು ಹೇಳಿದೆ! ಪಾಪ, ' ಖಾಸಗಿ ಖರೀದಿದಾರರೆಂಬ 'ಬಡ' ಕುಳಗಳ ಬಗ್ಗೆ ಎಂತಹ ಕಾಳಜಿ! ಈ ರೀತಿ ಬೋನಸ್ ಘೋಷಿಸುವ ರಾಜ್ಯಗಳಿಂದ ಅಷ್ಟರ ಮಟ್ಟಿಗೆ ಕೇಂದ್ರ ದಾಸ್ತಾನಿಗೆ ಖರೀದಿಯನ್ನು ಮೊಟಕು ಗೊಳಿಸಲಾಗುವುದು, ಅಂದರೆ ಅದಕ್ಕನುಗುಣವಾಗಿ ಸಬ್ಸಿಡಿಗಳನ್ನು ಕಡಿತ ಮಾಡಲಾಗುವುದಂತೆ. ರಾಜ್ಯಗಳು ಹೆಚ್ಚಿನ ಖರೀದಿಯನ್ನು ಮಾಡಿದರೆ ಅದಕ್ಕೆ ಅವರೇ ಹೊಣೆ ಎಂದು ಈ ಪತ್ರ ಎಚ್ಚರಿಸಿದೆ. ಇದು ನಮ್ಮ ಸಂವಿಧಾನದ ಒಕ್ಕೂಟ ತತ್ವದ ಉಲ್ಲಂಘನೆ ಕೂಡ ಆಗುತ್ತದೆ ಎಂದು ಎಐಕೆಎಸ್ ನೆನಪಿಸಿದೆ.

ಯಾವ ರಾಜ್ಯಗಳಲ್ಲಿ ಬೆಲೆ ಉತ್ಪಾದನೆಗೆ ತಗಲುವ ಖರ್ಚು ಹೆಚ್ಚಿದೆಯೋ ಅಂತಹ ರಾಜ್ಯಗಳು ತಮ್ಮ ರೈತರಿಗೆ ಅನಿವಾರ್ಯವಾಗಿಯೇ ಬೋನಸ್ ಘೋಷಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಏಕೆ-ೆಂದರೆ ಕೇಂದ್ರ ಸರಕಾರ ನಿಗದಿ ಪಡಿಸಿರುವ ಬೆಂಬಲ ಬೆಲೆಗಳಿಗೇ ಸೀಮಿತಗೊಂಡರೆ ಈ ರಾಜ್ಯಗಳ ರೈತರು ತಮ್ಮ ಜಮೀನನ್ನು ಕೃಷಿಯೇತರ ಬಳಕೆಗೆ ಕೊಟ್ಟು ಕೃಷಿ ಕಾಯಕವನ್ನೇ ತ್ಯಜಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಎಐಕೆಎಸ್ ಹೇಳಿದೆ. ಕೇರಳ ಮಾತ್ರವಲ್ಲ, ಮಧ್ಯಪ್ರದೇಶ, ಛತ್ತೀಸ್‌ಗಡದಂತಹ ರಾಜ್ಯಗಳೂ ಹೀಗೆ ಬೋನಸ್‌ಗಳನ್ನು ಘೋಷಿಸುತ್ತವೆ.

ಸಾರ್ವಜನಿಕ ಖರೀದಿ ವ್ಯವಸ್ಥೆಯನ್ನು ಕಳಚಿ ಹಾಕಿ ಖಾಸಗಿಯವರಿಗೆ ಮೈದಾನವನ್ನು ಪೂರ್ಣವಾಗಿ ತೆರೆದು ಕೊಡುವ ಹುನ್ನಾರ ಇದರ ಹಿಂದಿರುವಂತೆ ಕಾಣುತ್ತದೆ. ಇದು ರೈತರ ಹಿತಕ್ಕೆ ವಿರುದ್ಧವಾದದ್ದು ಮಾತ್ರವಲ್ಲ, ಆಹಾರಧಾನ್ಯಗಳ ಬೆಲೆಗಳನ್ನು ಹೆಚ್ಚಿಸಲು ಲಾಭಕೋರರಿಗೆ ಅವಕಾಶ ಮಾಡಿಕೊಡುವ ಹುನ್ನಾರ ಕೂಡ.

ಮಾಜಿ ಸೈನಿಕರಿಗೂ ತೀವ್ರ ಭ್ರಮನಿರಸನ?

ಒಂದು ರ್‍ಯಾಂಕ್‌ಗೆ ಒಂದೇ ರೀತಿಯ ಪೆನ್ಶನ್ ಮಾಜಿ ಸೈನಿಕರ ಬಹುಕಾಲದ ಬೇಡಿಕೆ. ಈ ಬೇಡಿಕೆ ಈಡೇರಿಕೆಗೆ ಕಾದು-ಕಾದು ಬೇಸತ್ತ ಹಲವು ಮಾಜಿ ಸೈನಿಕರು ಪ್ರತಿಭಟಿಸಿ ತಮ್ಮ ಮೆಡಲ್‌ಗಳನ್ನು ಹಿಂದಿರುಗಿಸಿದ್ದರು. ಯುಪಿಎ ಸರಕಾರ ಕೊನೆಗೂ ತನ್ನ ಕೊನೆಯ ವರ್ಷದಲ್ಲಿ ಈ ಬೇಡಿಕೆಯನ್ನು ಒಪ್ಪಿಕೊಂಡು ಕಳೆದ ವರ್ಷ ಇದ್ಕಕಾಗಿ 500 ಕೋಟಿ ರೂ.ಗಳನ್ನು ಕೊಟ್ಟಿತ್ತು. ಆದರೆ ಅದಿನ್ನೂ ಜಾರಿಯಾಗಿಲ್ಲ.

ಮೋದಿಯವರ ಚುನಾವಣಾ ಪ್ರಚಾರ ಈ ಬಗ್ಗೆ ಮತ್ತು ಮಾಜಿ ಸೈನಿಕರ ಇತರ ಪ್ರಶ್ನೆಗಳ ಬಗ್ಗೆ ಬಹಳಷ್ಟು ಆಶ್ವಾಸನೆಗಳನ್ನು ಕೊಟ್ಟಿತ್ತು. 5ಲಕ್ಷ ಸದಸ್ಯತ್ವ ಹೊಂದಿದೆ ಎನ್ನಲಾದ ಇಂಡಿಯನ್ ಎಕ್ಸ್-ಸರ್ವಿಸ್‌ಮನ್ ಮೂವ್‌ಮೆಂಟ್(ಐಇಎಸ್‌ಎಂ-ಮಾಜಿ ಸೈನಿಕರ ಆಂದೋಲನ) ಅಧ್ಯಕ್ಷ ನಿವೃತ್ತ ಮೇಜರ್ ಜನರಲ್ ಸತ್‌ಬೀರ್ ಸಿಂಗ್ ಮತ್ತು ಇನ್ನೂ ಹಲವು ಸೇನಾಧಿಕಾರಿಗಳು ಮೋದಿಯವರ ಬೆಂಬಲಕ್ಕೆ ನಿಂತು ಮಾಜಿ ಸೈನಿಕರ ಮತಗಳನ್ನು ಮೋದಿಯವರ ಪಕ್ಷಕ್ಕೆ ಅಣಿನೆರೆಸಿದ್ದರು. ಈ ಬಜೆಟಿನಲ್ಲಿ ನಮ್ಮ 'ಧೀರ ಸೈನಿಕರ'ನ್ನು ಎಂದಿನಂತೆ ಹೊಗಳುತ್ತ 1000ಕೋಟಿ ರೂ.ಗಳನ್ನು ನೀಡಲಾಗುವುದು ಎಂದು ಘೋಷಿಸಲಾಗಿತ್ತು. ಆದರೆ ಜೂನ್ 12 ರ ಸಭೆಯ ನಂತರ ಸತ್‌ಬೀರ್ ಸಿಂಗ್ ಅವರಿಗೂ ಭ್ರಮನಿರಸನವಾಗಿರುವಂತೆ ಕಾಣುತ್ತದೆ. "ಈ ಪ್ರಕ್ರಿಯೆಗೆ ಸಮಯ ತಗಲುತ್ತದೆ ಎಂದು ನಮಗೂ ತಿಳಿದಿದೆ. ಆದರೆ ಈ ಸಭೆಯ ನಂತರ ಸರಕಾರದ ಆಶಯಗಳ ಬಗೆಗೇ ನಮಗೆ ಸಂದೇಹ ಮೂಡಲಾರಂಭಿಸಿದೆ. ಸರಕಾರ ರಕ್ಷಣಾ ಮಂತ್ರಾಲಯದ ಅಧಿಕಾರಶಾಹಿ ಸೃಷ್ಟಿಸಿರುವ ಗೊಂದಲಗಳಿಗೆ ಬಲಿ ಬಿದ್ದಿರುವಂತೆ ಕಾಣುತ್ತದೆ' ಎಂದಿರುವುದಾಗಿ ವರದಿಯಾಗಿದೆ.

ಈ ಆಶ್ವಾಸನೆಯ ಜಾರಿಗೆ ಈಗ ಹಣದುಬ್ಬರವನ್ನು ಲೆಕ್ಕ ಹಾಕಿದರೆ 4,000 ಕೋಟಿ ರೂ. ಬೇಕಾಗುತ್ತದೆ. ಆದ್ದರಿಂದ ರಕ್ಷಣಾ ಮಂತ್ರಾಲಯದ ಅಧಿಕಾರಿಗಳು ಒಂದು ಪರ್ಯಾಯ ಪ್ರಸ್ತಾವವನ್ನು ಇಟ್ಟಿದ್ದಾರಂತೆ. ಸರಕಾರ ಮಾಜಿ ಸೈನಿಕರಿಗೆ ಎಲ್ಲ ತೆರನ ಆಶ್ವಾಸನೆಗಳನ್ನು ನೀಡಿ ಒಬ್ಬ ಮಾಜಿ ಸೇನಾಧಿಪತಿ ಸೇರಿದಂತೆ ಹಲವಾರು ನಿವೃತ್ತ ಸೇನಾಧಿಕಾರಿಗಳಿಗೆ ಟಿಕೇಟು ಕೊಟ್ಟು ಗೆಲ್ಲಿಸಿರುವ ಬಿಜೆಪಿಯ ಸರಕಾರ ಅದರಲ್ಲಿ ಕಡಿತ ತರುವ ಈ ಪ್ರಸ್ತಾವವನ್ನು ಒಪ್ಪುವಂತೆ ಕಾಣುತ್ತದೆ. ಇದರ ಪ್ರಕಾರ ಒಬ್ಬ ಸಾಮಾನ್ಯ ಮಾಜಿ ಸೈನಿಕನಿಗೆ ಈಗ 5,196 ರೂ. ಪೆನ್ಶನ್ ಸಿಗುತ್ತಿದ್ದರೆ ಚುನಾವಣಾ ಆಶ್ವಾಸನೆಯ ಪ್ರಕಾರ 8,349ರೂ. ಸಿಗಬೇಕಾಗಿತ್ತು. ಆದರೆ ಈಗ ಮೋದಿ ಸರಕಾರ ಸದನ್ನು 6,450ಕ್ಕೇ ಸೀಮಿತಗೊಳಿಸುವಂತೆ ಕಾಣುತ್ತದೆ ಎನ್ನಲಾಗುತ್ತಿದೆ. ತಮ್ಮ ಮೆಡಲ್‌ಗಳನ್ನು ಹಿಂದಿರುಗಿಸಿದವರು ಅದನ್ನು ಮರಳಿ ಪಡೆಯುವ 'ಒಳ್ಳೆಯ' ದಿನಗಳು ಕೂಡ ಬೇಗನೇ ಬರುವಂತಿಲ್ಲ.


'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ಪ್ರಧಾನಿಗಳ ಅಮೆರಿಕಾ ಪ್ರವಾಸಕ್ಕೆ ಸಿದ್ಧತೆ

ಪ್ರವಾಸದ ಉಡುಗೆಗಳು–ರಕ್ಷಣಾ ವ್ಯವಹಾರಗಳಿಗೊಂದು, ವ್ಯಾಪಾರ ವ್ಯವಹಾರಗಳಿಗೊಂದು, ಸರಕಾರಿ ಕೂಟಗಳಿಗೊಂದು.....



PM's US trip wardrobe is all finalised.

ಕೃಪೆ: ನೈನನ್, ಟೈಂಸ್ ಆರ್ಫ ಇಂಡಿಯಾ

'ಅಭಿವೃದ್ಧಿ' ಅಜೆಂಡಾದ ಆಚೆ

ಆಳುವ ಕೂಟದ ಎಂ.ಪಿ.ಗಳ ಅನಾಗರಿಕ ವರ್ತನೆ

ಶಿವಸೇನೆಯ ಲೋಕಸಭಾ ಸದಸ್ಯ ರಾಜನ್ ವಿಚಾರೆ ಮತ್ತು ಆತನ 10 ಸಹ-ಎಂ.ಪಿ.ಗಳು ಜುಲೈ 23ರಂದು ನಡೆಸಿದ ದಾಂಧಲೆ ಈಗ ದೊಡ್ಡ ಸುದ್ದಿಯಾಗಿದೆ. ಮೊದಲ ಬಾರಿಗೆ ಚುನಾಯಿತರಾಗಿರುವುದರಿಂದಾಗಿ ಇನ್ನೂ ದಿಲ್ಲಿಯಲ್ಲಿ ನಿವಾಸ ವ್ಯವಸ್ಥೆ ಆಗದೆ 'ನ್ಯೂ ಮಹಾರಾಷ್ಟ್ರ ಸದನ'ದಲ್ಲಿ ತಾತ್ಕಾಲಿಕವಾಗಿ ತಂಗಿರುವ ಈ ಎಂ.ಪಿ.ಗಳು ತಮಗೆ ಒದಗಿಸಿದ ಊಟದ ವಿಷಯದಲ್ಲಿ ತಗಾದೆ ತೆಗೆದು ಕ್ಯಾಂಟೀನಿನ ಸೂಪರ್‌ವೈಸರ್ 'ನೀನೇ ಇದನ್ನು ತಿನ್ನು' ಎಂದು ಆತ ತಾನು ರಮಜಾನ್ ಉಪವಾಸದಲ್ಲಿ ಇದ್ದೇನೆ ಎಂದರೂ ಕಿವಿಗೆ ಹಾಕಿಕೊಳ್ಳದೆ ಚಪಾತಿಯನ್ನು ಆತನ ಬಾಯಿಗೆ ತುರುಕಿದರು ಎಂದು ವರದಿಯಾಗಿತ್ತು.



Believe us. We were practising our usual goondaism and had no intention to hurt anyone's religious feelings.

ನಮ್ಮನ್ನು ನಂಬಿ, ನಾವು ನಮ್ಮ ಎಂದಿನ ಗೂಂಡಾಗಿರಿ ನಡೆಸುತ್ತಿದ್ದೆವು, ಯಾರದೇ ಧಾರ್ಮಿಕ ಭಾವನೆಗಳನ್ನು ಕೆಣಕುವ ಆಶಯ ನಮಗಿರಲಿಲ್ಲ

ಕೃಪೆ: ಮಂಜುಲ್, ಡಿಎನ್‌ಎ

ಸಂಸತ್ತಿನಲ್ಲಿ ಇದ-ರಿಂದಾಗಿ ಕೋಲಾಹಲವೆದ್ದಾಗ ಇದನ್ನು ತಳ್ಳಿ ಹಾಕಲು ಬಿಜೆಪಿ ಮುಖಂಡರು ಶತಪ್ರಯತ್ನ ನಡೆಸಿದರೂ ಸಫಲರಾಗಲಿಲ್ಲ. ಸಂಸದೀಯ ವ್ಯವಹಾರಗಳ ಮಂತ್ರಿ ನಿಜವಾಗಿ ಏನು ನಡೆಯಿತು ಎಂಬುದು ಯಾರಿಗೂ ಗೊತ್ತಿಲ್ಲ ಎನ್ನುತ್ತಿರುವಾಗಲೇ ಸುದ್ದಿ ವಾಹಿನಿಗಳಲ್ಲಿ ನಿಜವಾಗಿ ಏನು ನಡೆಯಿತೆಂಬುದು ಬಿತ್ತರವಾಗುತ್ತಿತ್ತು. ಆಗ ಬಿಜೆಪಿಯ ವಕ್ತಾರ ಟಿವಿಯಲ್ಲಿ ಏನು ನಡೆದರೂ ಅದಕ್ಕೆ ಸರಕಾರ ಉತ್ತರ ಕೊಡಬೇಕೇ ಎಂದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಸಹಜವಾಗಿಯೇ ಬಿಜೆಪಿಯ ಮತ್ತು ಅದರ ಮಿತ್ರಪಕ್ಷ ಶಿವಸೇನೆಯ ಸಮರ್ಥನೆಗಳನ್ನು ಯಾರೂ ಒಪ್ಪಿಕೊಳ್ಳು ಸಾಧ್ಯವಿರಲಿಲ್ಲ.

ಈ ಎಂ.ಪಿ.ಯ ಮೇಲೆ ಒಟ್ಟು 19 ಪೊಲಿಸ್ ಕೇಸುಗಳಿವೆಯಂತೆ. ಗಲಭೆ ಎಬ್ಬಿಸುವುದರಿಂದ ಹಿಡಿದು ಬೇರೆಯವರಿಗೆ ಅವಮಾನ ಮಾಡುವ ವರೆಗಿನ ಆಪಾದನೆಗಳು ಈಗಾಗಲೇ ಈತನ ಮೇಲಿವೆ. ಒಬ್ಬ ಎಂ.ಪಿ.ಯ ಇಂತಹ ಕ್ರಿಮಿನಲ್ ಮತ್ತು ಅನಾಗರಿಕ ವರ್ತನೆಯನ್ನು ಸಹಿಸಬಾರದು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಮೋದಿ ಸರಕಾರ ಈ ಆಕ್ಷೇಪಣಾಕಾರಿ ವರ್ತನೆಯನ್ನು ಉಪೇಕ್ಷಿಸದೆ ತಕ್ಷಣವೇ ಆತನ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ಆತನನ್ನು ಬಂಧಿಸಬೇಕು ಹಾಗೂ ಸಂಸತ್ತಿನಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದೆ.

ಆದರೆ ಯಥಾಪ್ರಕಾರ ಯಾರನ್ನು ಪ್ರಧಾನ ಮಂತ್ರಿ ಮಾಡಲು ಈ ಮಂದಿ ಎಂ.ಪಿ.ಗಳಾಗಿದ್ದರೋ ಅವರು ತಮ್ಮ ಹಿಂದಿನವರಂತೆ ಮೌನವಾಗಿದ್ದಾರೆ. **"ಚಹಾದ ಮೇಲೆ ಚರ್ಚೆ, ಚಪಾತಿಯ ಮೇಲೆ ಮೌನ?"** ಎಂದು ಖ್ಯಾತ ವ್ಯಂಗ್ಯಚಿತ್ರಕಾರ ಇ.ಪಿ.ಉನ್ನಿ ಈ ತಮ್ಮ ಕಾರ್ಟೂನಿನಲ್ಲಿ ಪ್ರಶ್ನಿಸಿದ್ದಾರೆ.



ಚಹಾದ ಮೇಲೆ ಚರ್ಚೆ, ಚಪಾತಿಯ ಮೇಲೆ ಮೌನ?

ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ತುರ್ತಾಗಿ ಮಧ್ಯಪ್ರವೇಶಿಸಿ –ಪ್ರಧಾನಿಗಳಿಗೆ ಅತ್ಯಾಚಾರಕ್ಕೊಳಗಾದ ರಾಜಸ್ತಾನ ಮಹಿಳೆಯ ಮನವಿ

ಮೋದಿ ಸಂಪುಟದ ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯಮಂತ್ರಿಗಳು ಮತ್ತು ಇತರ 16 ಮಂದಿ ತನ್ನ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂದು ಆಪಾದಿಸಿರುವ ರಾಜಸ್ತಾನದ ಮಹಿಳೆ 'ನನ್ನ ಅಹವಾಲನ್ನು ಕೇಳಿ, ತಕ್ಷಣವೇ ಮಧ್ಯಪ್ರವೇಶಿಸಿ' ಎಂದು ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಮತ್ತು ಪೊಲೀಸ್ ರಕ್ಷಣೆಯನ್ನು ಒದಗಿಸಬೇಕು ಎಂದೂ ಆಕೆ ಕೇಳಿದ್ದಾರೆ.

"ನಾನು ಶಾಂತಿಯಿಂದ ಬದುಕ ಬಯಸುತ್ತೇನೆ. ಕೋರ್ಟುಗಳಲ್ಲಿ ಈ ಕೇಸನ್ನು ಸದಾ ಎಳೆಯುವುದು ನನಗೆ ಬೇಕಿಲ್ಲ" ಎಂದಿರುವ ಆಕೆ, ಆಪಾದಿತರು ಶ್ರೀಮಂತರು ಮತ್ತು ಬಲಿಷ್ಟರು, ತನಗೆ ಮತ್ತು ತನ್ನ ಕುಟುಂಬದವರಿಗೆ ಬೆದರಿಕೆಗಳು ಬರುತ್ತಿವೆಯಾದ್ದರಿಂದ ಸಿಬಿಐ ತನಿಖೆ ನಡೆಸಬೇಕು ಎಂದಿದ್ದಾರೆ. "ನಾನು ಕೇಸು ಹಿಂತೆಗೆದುಕೊಂಡರೆ ಒಂದು ಒಳ್ಳೆಯ ಕೆಲಸ ಕೊಡಿಸುವುದಾಗಿಯೂ ಹೇಳುತ್ತಿದ್ದಾರೆ" ಎಂದು ಆಕೆ ಹೇಳಿದ್ದಾರೆ.

ಈ ನಡುವೆ ಮಹಿಳಾ ಸಂಘಟನೆಗಳು ಪ್ರಧಾನ ಮಂತ್ರಿಗಳು ಅಥವ ಗೃಹಮಂತ್ರಿಗಳನ್ನು ಈ ಬಗ್ಗೆ ಭೇಟಿಯಾಗಲು ಅವಕಾಶ ಕೊಡಬೇಕು, ಸಂಬಂಧಪಟ್ಟ ಮಂತ್ರಿ ಆಪಾದನೆಯಿಂದ ಮುಕ್ತನಾಗುವ ವರೆಗೆ ಮಂತ್ರಿ ಹುದ್ದೆಯಲ್ಲಿ ಇರಬಾರದು, ಆತನನ್ನು ಮಂತ್ರಿ ಪದವಿಯಿಂದ ತೆಗೆದು ಹಾಕಬೇಕು ಎಂದು ಆಗ್ರಹಿಸಿವೆ.

ಈಗಾಗಲೇ ಈ ಅಂಕಣದಲ್ಲಿ ಗಮನಿಸಿರುವಂತೆ ಈ ಮಂತ್ರಿಗೆ ಒಂದು ಜಯಪುರ ನ್ಯಾಯಾಲಯ ನೋಟೀಸು ಕಳಿಸಿದ್ದರೂ 'ನಿರ್ಧಾರಶೀಲ' ಎಂದೆನಿಸಿಕೊಂಡಿರುವ ಪ್ರಧಾನ ಮಂತ್ರಿಗಳು ಈ ಬಗ್ಗೆ ಮೌನವಾಗಿದ್ದಾರೆ. ಇದು 'ಕಡಿಮೆ ಸರಕಾರ ಮತ್ತು ಹೆಚ್ಚು ಆಳ್ವಿಕೆ'ಯ ಇನ್ನೊಂದು ಮಾದರಿಯಿರಬಹುದೇನೋ.

ಅಂಗವಿಕಲರು ಮತ್ತು ಪಾಲಕರ ರಾಜ್ಯವ್ಯಾಪಿ ಪ್ರತಿಭಟನೆ

0 ಅಂಗವಿಲಕರಿಗೆ ಮಾಸಿಕ 3,000 ರೂ. ನಿರ್ವಹಣಾ ಭತ್ಯೆ

0 ಶೇ. 75ಕ್ಕಿಂತ ಹೆಚ್ಚು ಅಂಗವಿಕಲತೆ ಇರುವವರಿಗೆ 5,000 ರೂ.

0 ಏಕ ರೂಪ ಗುರುತು ಪತ್ರಕ್ಕೆ ಆಗ್ರಹ



ಬೆಂಗಳೂರು ಪ್ರತಿಭಟನೆ

ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್.ಪಿ.ಆರ್.ಡಿ.) ಸಂಯೋಜಿತ 'ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ' (ಕೆ.ಎಸ್.ಡಿ.ಸಿ.ಎಫ್.)ದ ಕ–ರೆಯ ಮೇರೆಗೆ ಜುಲೈ 23, 2014 ರಂದು ರಾಷ್ಟ್ರಾದ್ಯಂತ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಅಂಗವಿಕಲರು ಪ್ರತಿಭಟನೆ ಹಮ್ಮಿಕೊಂಡಿದ್ದು ಅದರ ಭಾಗವಾಗಿ ರಾಜ ಧಾನಿ ಬೆಂಗಳೂರು ಸೇರಿದಂತೆ ಕರ್ನಾಟಕ ರಾಜ್ಯದ ಸುಮಾರು 12 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆಗಳನ್ನು ನಡೆಸಲಾಗಿದೆ ಎಂಬ ವರದಿ ಬಂದಿದೆ.

ಬೆಂಗಳೂರು: ಪ್ರತಿಭಟನಾ ಮೆರವಣಿಗೆ – ಪ್ರದರ್ಶನ

ಜೂನ್ 23 ರಂದು ಬೆಂಗಳೂರು ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಅಂಗವಿಕಲರು, ಪಾಲಕರು ಸೇರಿ ಘೋಷಣೆಗಳನ್ನು ಕೂಗುತ್ತ ಪ್ರತಿಭಟನಾ ಮೆರವಣಿಗೆ ನಡೆಸಿದರು. ನಂತರ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನೆರೆದ ಪ್ರತಿಭಟನಾಕಾರರನ್ನುದ್ದೇಶಿಸಿ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಜಿ.ಎನ್. ನಾಗರಾಜ್, ರಾಜ್ಯ ಕಾರ್ಯದರ್ಶಿ ವೆಂಕಟೇಶ್ ಮುಂತಾದವರು ಮಾತನಾಡಿದರು. ಸಂಘಟನೆಯ ಮುಖಂಡರಾದ ಜಿ.ಎನ್. ಯಶು, ಅರ್ಪುದ ರಾಜನ್ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿಭಟನಾಕಾರರು ಸಲ್ಲಿಸಿದ ಮನವಿಯನ್ನು ಜಿಲ್ಲಾಧಿಕಾರಿಗಳು ಸ್ವೀಕರಿಸಿದರು.

ಈ ಪ್ರತಿಭಟನೆಗಳ ಭಾಗವಾಗಿ ಬಿಜಾಪುರ ಜಿಲ್ಲೆಯಲ್ಲಿ ಕೂಡ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

'ಕರ್ನಾಟಕ ರಾಜ್ಯ ಅಂಗವಿಕಲರು ಹಾಗೂ ಪಾಲಕರ ಒಕ್ಕೂಟ'ದ ಬಿಜಾಪುರ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನೂರಾರು ಅಂಗವಿಕಲರು ಬಿಜಾಪುರ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಪ್ರತಿಭಟನೆ ಮಾಡಿ ನಗರಾಭಿವೃದ್ಧಿ ಕೋಶಾಧಿಕಾರಿ ಮಾದೇವ ಮುರಗಿ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಜಿಲ್ಲಾಧ್ಯಕ್ಷರಾದ ಪರಶುರಾಮ ಗುನ್ನಾಪುರ ಮಾತನಾಡಿ, ದೇಶದಲ್ಲಿ ಹೊಸದಾಗಿ ಬಂದಂತಹ ಬಿಜೆಪಿ ಸರ್ಕಾರ ಬಜೆಟ್‌ನಲ್ಲಿ ಅಂಗವಿಕಲರಿಗೆ ಶಿಕ್ಷಣ ಹಾಗೂ ಉದ್ಯೋಗದ ಬಗ್ಗೆ ಯಾವುದೇ ಭರವಸೆಯನ್ನು ನೀಡಿರುವುದಿಲ್ಲ. ಹಾಗೂ ರಾಜ್ಯದಲ್ಲಿ ರುವ ಕಾಂಗ್ರೆಸ್ ಸರ್ಕಾರ ಚುನಾವಣೆಗಿಂತ ಮೊ ದಲು ಅಂಗವಿಕಲರಿಗೆ ನಿರ್ವಹಣಾ ಭತ್ಯೆಯನ್ನು 3000 /– ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರೂ ಅದನ್ನು ಈಡೇರಿಸಿಲ್ಲ. ಆದರೆ ಆಂಧ್ರ ಪ್ರದೇಶದಲ್ಲಿ ಮಾಸಾಶನವನ್ನು 3,000 ರೂ.ಗೆ ಈಗಾಗಲೇ ಏರಿಕೆ ಮಾಡಲಾಗಿದೆ. ರಾಜ್ಯ ಸರ್ಕಾರ ಬೆಲೆ ಏರಿಕೆಯ ಪ್ರಮಾಣವನ್ನು ನೋಡಿ ಮಾಸಾಶನವನ್ನು ಹೆಚ್ಚಿಸಬೇಕೆಂದು ಹೇಳಿದರು. ಹಾಗೂ ಪ್ರತಿ ತಿಂಗಳು ಜಿಲ್ಲಾಧಿಕಾರಿಗಳು ಮೂರನೇ ಸೋಮವಾರ ಅಂಗವಿಕಲರ 'ಕುಂದು ಕೊರತೆ ಸಭೆ'ಯನ್ನು ಕರೆಯಬೇಕೆಂದು ಒತ್ತಾಯಿಸಿದರು.

ಅಂಗವಿಕಲರ ಒಕ್ಕೂಟದ ಕಾರ್ಯದರ್ಶಿ ಅಶೋಕ ವಾಲಿಕಾರ ಮಾತನಾಡಿ, ಅಂಗವಿಕಲರ ಗುರುತಿನ ಚೀಟಿಗಳು ಏಕರೂಪವಾಗಿರಬೇಕು. ಈಗ ಹಾಗಿಲ್ಲದೇ ಅಂಗವಿಕಲರಿಗೆ ತುಂಬಾ ತೊಂ ದರೆಯಾಗಿದೆ. ಬೇರೆ ಬೇರೆ ಗುರುತಿನ ಚೀಟಿ ಪಡೆಯಲು ನಾಲ್ಕಾರು ಕಛೇರಿಗಳಿಗೆ ಅಂಗವಿಕಲರು ಸುತ್ತಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಏಕರೀತಿಯ ಗುರುತಿನ ಚೀಟಿ ನೀಡುವ ಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಅದು ಎಲ್ಲ ಕೆಲಸಕ್ಕೆ ಬರುವಂತೆ ಏಕಗವಾಕ್ಷಿ ಪದ್ಧತಿಯಾಗಬೇಕು ಎಂದರು.

ಅಂಗವಿಕಲರ ರಾಜ್ಯದ ವಲಯ ಕಾರ್ಯದರ್ಶಿ ಸೋಮಪ್ಪ ಆಯಟ್ಟಿ ಮಾತನಾಡಿ, 'ಅಚ್ಛೆ ದಿನ್ ಆತಿ' ಎಂದು ಹೇಳಿರುವ ನರೇಂದ್ರ ಮೋದಿ ಸರ್ಕಾರ ನೀತಿಗಳಿಂದ 'ಒಳ್ಳೆಯ ದಿನಗಳು' ಕಾರ್ಪೋರೇಟ್‌ಗಳಿಗೆ ಮತ್ತು ಈ ದೇಶದ ದೊಡ್ಡ ಶ್ರೀಮಂತರಿಗೆ ಬಂದಿವೆ. ಅಂಗವಿಕಲರಿಗೆ ಒಳ್ಳೆಯ ದಿನಗಳು ಬಂದಿರುವುದಿಲ್ಲ. ಹಾಗೂ ಈ ದೇಶದ ಕಾರ್ಮಿಕರಿಗೂ ಕೂಡ ಆ ದಿನಗಳಿಲ್ಲ. ಆದ್ದ–ರಿಂದ ನಾವು ನಮ್ಮ ಹಕ್ಕುಗಳನ್ನು ಪಡೆಯಲು ಸದಾ ಒಕ್ಕಟ್ಟಿನಿಂದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಇವುಗಳ ವಿರುದ್ಧ ಐಕ್ಯ ಹೋರಾಟ ಮಾಡಬೇಕಾಗುತ್ತದೆ. ಅಂದಾಗ ಮಾತ್ರ ಅಂಗವಿಕಲರೆಲ್ಲರಿಗೆ ಉದ್ಯೋಗ, ಶಿಕ್ಷಣ ಹಾಗೂ ಗೌರವಯುತ ಬದುಕು ನಿರ್ಮಾಣ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಶೇ. 75ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿದವರಿಗೆ 5 ಸಾವಿರ ರೂಪಾಯಿ ನಿರ್ವಹಣಾ ಭತ್ಯೆಯನ್ನು ನೀಡಬೇಕೆಂದು ಅವರು ಒತ್ತಾಯಿಸಿದರು.



ಬಿಜಾಪುರ

ಸುರೇಶ ಚವ್ಹಾಣ, ಭೀಮನಗೌಡ ಪಾಟೀಲ, ಮಲ್ಲಿಕಾರ್ಜುನ ಬಿರಾದಾರ, ಮಲ್ಲಿಕಾರ್ಜುನ ಉಮರಾಣಿ, ಶಿವಗಂಗಾ ಬಿರಾದಾರ, ರಮೇಜಾ ಮಕಾಂದಾರ, ಮಂಗಲಾ ನಿರಂಜನ, ಲಲಿತ, ಪರಶುರಾಮ ಕುಂಚಿಕೊರವ, ಸುನೀಲ ತೆಲಕರ, ವಿರೇಶ ವಾಂಗಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ 100 ಜನ, ಸಿರುಗುಪ್ಪ 150, ಹೂ, ಹಡಗಲಿ 40ಜನ ಸೇರಿ ತಾಲೂಕು ಕಛೇರಿಗಳ ಮುಂದೆ ಪ್ರತಿಭಟನೆ ನಡೆಸಿ ತಹಸೀಲ್ದಾರ ಮೂಲಕ ಪ್ರಧಾನ ಮಂತ್ರಿ, ರಾಜ್ಯದ ಮುಖ್ಯಮಂತ್ರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಬಳ್ಳಾರಿಯಲ್ಲಿ 200 ಜನ ಸೇರಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು. ಈ ಹೋರಾಟಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ ಸಮೀರ್ ಶುಕ್ಲರವರು ಮರುದಿನ ಒಕ್ಕೂಟದ ಮುಖಂಡರನ್ನು ಸಭೆ ಕರೆದು ಆಗಸ್ಟ್‌ನಲ್ಲಿ ನಡೆಯುವ ಬಳ್ಳಾರಿ ಗ್ರಾಮೀಣ ವಿಧಾನಸಭಾ ಉಪ ಚುನಾವಣೆ ಮುಗಿದ ಕೂಡಲೇ ಮತ್ತೊಮ್ಮೆ ಒಕ್ಕೂಟದ ಮುಖಂಡರ ಸಭೆ ಕರೆದು ಹೋರಾಟದಲ್ಲಿ ಇಟ್ಟಿದ್ದ ಸ್ಥಳೀಯ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು.

ಮಂಡ್ಯದಲ್ಲಿ 150, ಉಡುಪಿಯಲ್ಲಿ 125, ಬಿಜಾಪುರ 70, ರಾಯಚೂರು 60, ಗುಲ್ಬರ್ಗಾ 60, ಯಾದಗಿರಿ 60, ಜನ ಸೇರಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಹೋರಾಟ ನಡೆಸಿ ಮನವಿ ಸಲ್ಲಿಸಿದ್ದಾರೆ. ಬಾಗಲಕೋಟೆಯಲ್ಲಿಯೂ ಪ್ರತಿಭಟನೆ ನಡೆದಿದೆ. ಹುಬ್ಬಳ್ಳಿಯಲ್ಲಿ ಒಕ್ಕೂಟದ ನಿಯೋಗವು ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಮನವಿ ಸಲ್ಲಿಸಿದೆ.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ

ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಅಂಗವಿಕಲರು ಹಾಗೂ ಪಾಲಕರು ಉಡುಪಿ ಮಣಿಪಾಲದ ರಜತಾದ್ರಿ ಜಿಲ್ಲಾಧಿಕಾರಿ ಕಚೇರಿ ಎದುರು 23 ಜುಲೈ 2014ರಂದು ಪ್ರತಿಭಟನಾ ಧರಣಿ ನಡೆಸಿದರು.

ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ವೆಂಕಟೇಶ ಕೋಣಿ ಧರಣಿಯಲ್ಲಿ ಪಾಲ್ಗೊಂಡ ಅಂಗವಿಕಲರನ್ನುದ್ದೇಶಿಸಿ ಮಾತನಾಡುತ್ತಾ ಅಂಗವಿಕಲರು ಇನ್ನೊಬ್ಬರ ಮೇಲೆ ಅವಲಂಬಿತರಾಗಿ ಹಲವು ಸಂಕಷ್ಟಗಳಿಂದ ಬದುಕುತ್ತಿದ್ದಾರೆ. ಅಂಗವಿಕಲರ ಬದುಕಿಗೆ ಭದ್ರತೆಯೇ ಇಲ್ಲದಂತಾಗಿ ಬದುಕು ಬೀದಿಗೆ ಬರುವಂತಾಗಿದೆ. ಸರಕಾರದ ಯಾವುದೇ ಯೋಜನೆ, ನೀತಿಗಳನ್ನು ರೂಪಿಸುವಾಗ ಅಂಗವಿಕಲರ ಬಗೆಗೆ ಸಂಪೂರ್ಣ ನಿರ್ಲಕ್ಷ್ಯ ತೋರುತ್ತಿರುವುದರಿಂದ ಅವರು ಘನತೆ, ಗೌರವದಿಂದ ಬದುಕಲು ಅಡ್ಡಿಯಾಗುತ್ತಿದೆ ಎಂದು ಹೇಳಿದರು.

ಒಕ್ಕೂಟದ ಉಡುಪಿ ಜಿಲ್ಲಾಧ್ಯಕ್ಷ ಮಂಜುನಾಥ ಹೆಬ್ಬಾರು, ಕಾಲ್ತೋಡು ಪ್ರತಿಭಟನಾಕಾರ ಅಂಗವಿಕಲರು ಹಾಗೂ ಪಾಲಕರನ್ನು ಉದ್ದೇಶಿಸಿ ಮಾತನಾಡಿದರು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಮಂಡಿಸುವ ಯಾವ ಬಜೆಟ್‌ಗಳಲ್ಲೂ ಅಂಗವಿಕಲರಿಗೆ ಉದ್ಯೋಗ ನೀಡುವ ಬಗ್ಗೆ ಆದ್ಯತೆ ನೀಡದೇ, ಅವರನ್ನು ಸಮಾಧಾನ ಪಡಿಸಲು ನಾಲ್ಕೈದು ವರ್ಷಕ್ಕೊಮ್ಮೆ ರೂ. 50–100 ಜೀವನ ನಿರ್ವಹಣೆ ಭತ್ಯೆ (ಮಾಶಾಸನ) ಹೆಚ್ಚಳ ಮಾಡಿ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದೆ. ಅಂಗವಿಕಲರು ಸಮಾಜದಲ್ಲಿ ಘನತೆಯಿಂದ ಬದುಕಲು ಉದ್ಯೋಗ ಬಯಸುತ್ತಿದ್ದಾರೆ ವಿನ: ಜೀವನ ನಿರ್ವಹಣಾ ಭತ್ಯೆ ಅತ್ಯವಶ್ಯಕವಾಗಿದೆ ಎಂದು ಹೆಬ್ಬಾರ್‌ನವರು ಸರಕಾರದ ನೀತಿಯನ್ನು ಖಂಡಿಸಿದರು.

ಅಂಗವಿಕಲರಿಂದ ಸಂಗ್ರಹಿಸಿದ ಯಂತ್ರ ಚಾಲಿತ ದ್ವಿಚಕ್ರ ವಾಹನವನ್ನು ನೀಡಲು ಆಡಳಿತಾತ್ಮಕ ಅನುಮೋದನೆ ನೀಡಬೇಕೆಂದು ಒತ್ತಾಯಿಸಿ 19 ಅರ್ಜಿಗಳನ್ನು ಜಿಲ್ಲಾಧಿಕಾರಿಗೆ ಸಲ್ಲಿಸಲಾಯಿತು. ಅಂಗವಿಕಲರಿಗೆ ಅಂತ್ಯೋದಯ, ಅನ್ನದಾಸೋಹ ಪಡಿತರ ಚೀಟಿ ಮಂಜೂರು ಮಾಡಲು ಹಾಗೂ ಅಂಗವಿಕಲರ ಕುಂದು ಕೊರತೆ ಸಭೆಗಳನ್ನು ಪ್ರತೀ ತಿಂಗಳು ತಪ್ಪದೆ ನಡೆಸಬೇಕೆಂದು ಒತ್ತಾಯಿಸಲಾಯಿತು.

ಪ್ರತಿಭಟನಾ ಹೋರಾಟದಲ್ಲಿ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಜಿಲ್ಲಾ ಮುಖಂಡರಾದ ಬಾಬು.ಕೆ ದೇವಾಡಿಗ, ಉಪ್ಪುಂದ, ರಾಧಾಕೃಷ್ಣ ಬೈಂದೂರು, ಅನಿತಾ ಪಡುವರಿ, ರಾಘವೇಂದ್ರ ಹಕ್ಲಾಡಿ, ಮೂಕಾಂಬು ಯಡ್ತರೆ, ಸುಕೇಶ ಶೆಟ್ಟಿ, ಕಾರ್ಕಳ, ವಿಜಯ, ಕಿರಿಮಂಜೇಶ್ವರ, ಕೃಷ್ಣ ಬ್ರಹ್ಮಾವರ ನೇತೃತ್ವ ವಹಿಸಿದರು.

ನಿವೇಶನ ಒದಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ

ಕಿರಿಮಂಜೇಶ್ವರದ ಸುಮತಿ ಆಚಾರ್ಯ ಮತ್ತು ಅವರ 2 ಮಕ್ಕಳಾದ ನಿತೇಶ (8 ವರ್ಷ), ನಿರಜ್ (3 ವರ್ಷ)ಗೆ ಕಣ್ಣು ಕಾಣಿಸುವುದಿಲ್ಲ. ಸುಮತಿಯವರ ಪತಿ ರಮೇಶ ಆಚಾರ್ಯ ಕಬ್ಬಿಣದ ಕೆಲಸ ಮಾಡಿ ಇವರನ್ನು ಸಾಕುತ್ತಿದ್ದಾರೆ. 5 ವರ್ಷದ ಹಿಂದೆ ಕಿರಿಮಂಜೆಶ್ವರದ ಸರಕಾರಿ ಜಾಗದಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದರು. ಅದು ಜಿಲ್ಲಾಧಿಕಾರಿಯವರಿಗೆ ದೂರು ಹೋಗಿ ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದಿದ್ದರು. ಇಲ್ಲಿ ಬೇಡ, ನಿಮಗೆ ಬೇರೆ ಜಾಗ ತೋರಿಸುತ್ತೇನೆ ಎಂದು ಹೇಳಿ ಹೆರೂರು ಪಂಚಾಯತ್ ವ್ಯಾಪ್ತಿಯಲ್ಲಿ ಸರಕಾರಿ ಭೂಮಿ ತೋರಿಸಿ ಹೋದರು. ಅಲ್ಲಿ ಸುಮತಿ ಆಚಾರ್ಯ ಕುಟುಂಬ ಗುಡಿಸಲು ಕಟ್ಟಿದ್ದರೆ, ಸ್ಥಳೀಯರು ರಾತ್ರಿ– ಬೆಳಗಾಗುವ ಮೊದಲು ಗುಡಿಸಲು ಇಲ್ಲದಂತೆ ಮಾಡಿದರು. ಅದಾಗಿ 5 ವರ್ಷಗಳು ಕಳೆದರೂ ನಿವೇಶನಕ್ಕಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ಆದರೆ ನಿವೇಶನ ಮಾತ್ರ ದೊರೆತಿಲ್ಲ. ನಿವೇಶನ ಒದಗಿಸುವಂತೆ ಜಿಲ್ಲಾಧಿಕಾರಿಗೆ ಕಣ್ಣೀರಿಡುತ್ತಾ ಸುಮತಿ ಆಚಾರ್ಯ ದೂರು ಸಲ್ಲಿಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಲ್ಲುಕಂಭ ಗ್ರಾಮ ಪಂಚಾಯತಿ ಕಛೇರಿ ಎದುರು ಕೂಲಿಕಾರರ ಧರಣಿ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡಿದ ಕೂಲಿಕಾರರಿಗೆ ಕೂಲಿ ಹಣವನ್ನು ಕೂಡಲೇ ಪಾವತಿಸಬೇಕೆಂದು ಒತ್ತಾಯಿಸಿ ಹಾಗೂ ಕೂಲಿಕಾರರ ಇತರ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಬಳ್ಳಾರಿ ತಾಲೂಕ್ ಕುರುಗೋಡು ಸಮೀಪದ ಕಲ್ಲುಕಂಭ ಗ್ರಾಮದ ಕೂಲಿಕಾರರು ಇತ್ತೀಚೆಗೆ ಗ್ರಾಮ ಪಂಚಾಯತಿ ಕಛೇರಿ ಎದುರು ಸಾಮೂಹಿಕ ಧರಣಿ ನಡೆಸಿದರು.

ಧರಣಿಯನ್ನು ಉದ್ಘಾಟಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಎಸ್.ಪಿ. ಮಹ್ಮದ್‌ಖಾನ್ ಮಾತನಾಡಿ ಉದ್ಯೋಗಖಾತ್ರಿ ಯೋಜನೆ ಅಡಿ ಕೂಲಿಕಾರರು ವಿವಿಧ ಕಾಮಗಾರಿಗಳನ್ನು ಮುಗಿಸಿ 4 ತಿಂಗಳು ಕಳೆದರೂ ಬಟವಾಡೆ ಆಗಬೇಕಾದ ಅಂದಾಜು 3 ಲಕ್ಷ ರೂ. ಇದುವರೆಗೂ ನೀಡಿಲ್ಲ ಎಂದು ಟೀಕಿಸಿದರು. ಗ್ರಾಮಕ್ಕೆ 43 ಆಶ್ರಯ ಮನೆಗಳು ಮಂಜೂರಾಗಿವೆ. ಬಡ ಫಲಾನುಭವಿಗಳು ಖಾಸಗಿ ಸಾಲ ಪಡೆದು ಬುನಾದಿ ನಿರ್ಮಿಸಿಕೊಂಡಿದ್ದಾರೆ. ಆದರೆ ಇದುವರೆಗೆ ಅನುದಾನ ವರ್ಗಾವಣೆಯಾಗಿಲ್ಲ. ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಅನುದಾನ ನೀಡಿಲ್ಲ ಎಂದು ಅವರು ದೂರಿದರು.

ಕೂಲಿಕಾರರ ಹೋರಾಟವನ್ನು ಬೆಂಬಲಿಸಿ ಸಿಐಟಿಯು ಮುಖಂಡ ಹೆಚ್.ಎಂ. ವಿಶ್ವನಾಥ ಮಾತನಾಡಿದರು. ಕೂಲಿಕಾರರ ಸಂಘದ ಮುಖಂಡರಾದ ಜಿ. ಪಂಪಾಪತಿ ಮಾತನಾಡಿದರು. ಪ್ರಾರಂಭದಲ್ಲಿ ಗ್ರಾಮದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಕೂಲಿಕಾರರು ಗ್ರಾಮ ಪಂಚಾಯತಿ ಆವರಣದಲ್ಲಿ ಸಮಾವೇಶಗೊಂಡು ಧರಣಿ ಆರಂಭಿಸಿದರು. ಅಡವಿ ಕುಮಾರ್, ಕೆ. ಮಾರೆಣ್ಣ, ಎಚ್. ರಾಮಾಂಜನೇಯ, ಬಿ. ಮಲ್ಲಿಕಾರ್ಜುನ, ಬಿ. ಬಾಬು, ಜಿ. ಸುಂಕಣ್ಣ, ಹೆಚ್. ಈರಣ್ಣ ಪ್ರಸಾದ್, ಶಿವಪ್ಪ, ದೇವದಾಸಿ ವಿಮೋಚನಾ ಸಂಘದ ಗ್ರಾಮ ಘಟಕದ ಅ ಧ್ಯಕ್ಷೆ ಅನ್ನಪೂರ್ಣಮ್ಮ, ಟಿ. ಹುಲಿಗೆಮ್ಮ, ಜೇಡಮ್ಮ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

–ಎಸ್.ಪಿ. ಮಹ್ಮದ್ ಖಾನ್

ಮಕ್ಕಳು ಮತ್ತು ಮಹಿಳೆಯರ ಮೇಲಿನ

ಪುಟ 08 ರಿಂದ

ಪ್ರಶ್ನಾರ್ಹ ಮುಂತಾದ ಅಯೋಗ್ಯ ಪ್ರಶ್ನೆಗಳನ್ನು ನೊಂದವರೆದೇಗೇ ಎಸೆದು ಪುರುಷಪ್ರಧಾನ ವ್ಯವಸ್ಥೆಯನ್ನು ಜೋಪಾನವಾಗಿ ಕಾಪಿಟ್ಟುಕೊಳ್ಳುವ ಪರಂಪರೆ ನಮ್ಮದು. ಸಮಾಜದಲ್ಲಿನ ಸಾಂಸ್ಕೃತಿಕ ಅಧಃಪತನಕ್ಕೂ ಹೆಂಗಸರನ್ನೇ ಹೊಣೆಮಾಡಿ 'ಮನೆಯಪಾಠ' ಸರಿಯಾಗಿ ನಡೆದಿಲ್ಲ ಎಂದು ಹೆಂಗಸರ ಪಾತ್ರವನ್ನ ದೂಷಿಸಿ ಬಿಡುವುದು, ಆಕೆ-ಯ ಮೇಲೆಯೇ ದೌರ್ಜನ್ಯಗಳು ಸಂಭವಿಸಿದಾಗ ಅವಳಲ್ಲಿಯೇ ತಪ್ಪುಗಳ ಪಟ್ಟಿ ಮಾಡುತ್ತಾ ಹೋಗುವುದು ಇದು ಭಾರತೀಯ 'ಸಾಂಸ್ಕೃತಿಕ ಪರಂಪರೆ'ಯಲ್ಲಿ ಅಂತರ್ಗತವಾಗಿಬಿಟ್ಟಿರುವ ರೂಢಿಗತ ಮೌಲ್ಯ. ಇದನ್ನೇ ಕಾಲದಿಂದ ಕಾಲಕ್ಕೆ ಸಾಧ್ಯವಾದಷ್ಟು ಸಾಗಿಸಿಕೊಂಡು ಹೋಗುತ್ತಾ ಪುರುಷ ಹಿತಾಸಕ್ತಿಗಳಿಗೆ, ಸ್ಥಾಪಿತ ಹಿತಾಸಕ್ತಿಗಳಿಗೆ ಧಕ್ಕೆಯಾಗದಂತೆ ನಿಗಾವಹಿಸುವುದು, ಈ ಘನ ಕಾರ್ಯಕ್ಕೆ ಸಾಧ್ಯವಾದಷ್ಟೂ ಮಹಿಳೆಯರನ್ನೇ ಬಳಸಿಕೊಳ್ಳುವುದು ಅಂದಿನಿಂದ ಇಂದಿನವರೆಗೆ ಮುಂದುವರೆದಿರುವ ಮೆಗಾ ಸೀರಿಯಲ್‌ನ ಒಂದು ಅಂಕ ಅಷ್ಟೆ.

ತಂದೆಯೇ ಮಗಳ ಮೇಲೆ ಎರಗುತ್ತಿರುವ ಗಂಭೀರ ಸ್ಥಿತಿ ಬಂದಿರುವಾಗಲು, ಹೆತ್ತ ಮಗನೇ ತಾಯಿಯ ಮೇಲೆ ಬೀಳುವ ಸನ್ನಿವೇಶ ನಿರ್ಮಾಣವಾದಾಗಲು ನಮಗೆ ಮಾಡಲು ಬಹಳಷ್ಟು ಬೇರೆ ಕೆಲಸಗಳಿವೆ ಎಲ್ಲವನ್ನು ಮಾಡಲು ನಾವು ದೇವರಲ್ಲ ಎಂದು 'ನಾಗರಿಕ' ಸರ್ಕಾರಗಳು ಸಮಜಾಯಿಷಿ ನೀಡಿ ಸರಿಪಡಿಸುವ ಹೊಣೆಯನ್ನು ಹೆಂಗಸರ ಮೇಲೆಯೇ ಹೇರಿ ನೆಮ್ಮದಿಯ ನಿದ್ರೆ ಮಾಡಬಹುದೆ? ಹೆಂಗಸರಾದರೂ ತಮ್ಮ ಮೇಲೇ ಹೊರಿಸಿದ ಈ 'ಕಳಂಕವನ್ನು' ಕಿಂಚಿತ್ ಯೋಚಿಸಲೂ ಹೋಗದೆ ಅರಿಶಿನ ಕುಂಕುಮ ಮತ್ತಿಕೊಂಡಂತೆ ತಮ್ಮ ಕೆನ್ನೆಗೆ ಮತ್ತಿಕೊಳ್ಳಬಹುದೆ?

ಹೆಣ್ಣಿನ ಮೇಲಿನ ಹಿಂಸೆಯ...........

ಪುಟ 15 ರಿಂದ

ಕಾಲೊನಿಗೆ ನುಗ್ಗಿ ಮುದುಕಿಯರ ಮೇಲೆ ಮಾತ್ರ ಅತ್ಯಾಚಾರ ನಡೆಯುವ ವಿಚಿತ್ರ ಪರಿಸ್ಥಿತಿ ಕೀನ್ಯಾದ 'ಕುಂಗ್ ಫೂ ಗ್ರಾಂಡ್ ಮಾ'ದ ವಸ್ತು. ಅದನ್ನು ಎದುರಿಸಲು ಒಬ್ಬ ಅಜ್ಜಿ ಮುದುಕಿಯರಿಗೆ ಕುಂಗ್ ಫೂ ಕಲಿಸುವ ರಾತ್ರಿ-ಸ್ಕೂಲು ನಡೆಸುವ ಕಥನವೂ ದಾರುಣವೂ ಸ್ಫೂರ್ತಿದಾಯಕವೂ ಆಗಿವೆ. ನೇಪಾಳದ ರಾಜಸತ್ತೆಯ ವಿರುದ್ಧ ಪ್ರಜಾಪ್ರಭುತ್ವದ ಹೋರಾಟದಲ್ಲಿ ವಿವಿಧ ವಿಭಾಗಗಳಿಂದ ಭಾಗವಹಿಸಿದ ಆರು ಜನ ಮಹಿಳೆಯರು ಪಟ್ಟ ಪಾಡು, ಆದರೂ ಅವರು ವಹಿಸಿದ ಮಹತ್ವದ ಪಾತ್ರದ ಅದ್ಭುತ ಚಿತ್ರಣ 'ಸ್ಕಾರಿ ಸೋಲ್ಜರ್ಸ್'. ರಾಜನ ಮಿಲಿಟರಿಯಿಂದ ಅಪಹರಣ(ಮತ್ತು ಅತ್ಯಾಚಾರ-ಹತ್ಯೆ)ಕ್ಕೆ ಒಳಗಾದ ಮಗಳನ್ನು ಪಡೆಯಲು ಹೋರಾಡುವ ಒಬ್ಬ ಸಾಮಾನ್ಯ ಮಹಿಳೆ, ಆಕೆಯ ಬೆಂಬಲಕ್ಕೆ ನಿಲ್ಲುವ ಮಾನವ ಹಕ್ಕು ಹೋರಾಟಗಾರ್ತಿ, ಮಾವೋವಾದಿ ಗೆರಿಲ್ಲಾ ಸೈನ್ಯದ ಒಬ್ಬಾಕೆ ಕಮಾಂಡರ್, ಪ್ರಜಾಪ್ರಭುತ್ವ ಚಳುವಳಿಯ ಸಮರಶೀಲ ವಿದ್ಯಾರ್ಥಿ ನಾಯಕಿ, ತಮ್ಮ ಹಳ್ಳಿ ಮಿಲಿಟರಿ-ಮಾವೋವಾದಿಗಳ ರಣಾಂಗಣ ಆಗುವುದನ್ನು ತಪ್ಪಿಸಿ ಶಾಂತಿಯುತ ಪ್ರದೇಶವಾಗಿರುವಂತೆ ಪ್ರಯತ್ನಿಸುವ ಗ್ರಾಮೀಣ ಮಹಿಳೆ, ರಾಜನ ಸೈನ್ಯದ ಮಹಿಳಾ ಯುನಿಟ್ ಸೇರುವ ಮಹಿಳಾ ಅಧಿಕಾರಿ-ನೇಪಾಳೀ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಈ ಆರು ಮಹಿಳೆಯರ ಪಾತ್ರ ನೇಪಾಳದ ಬದಲಾಗುತ್ತಿರುವ ಸಮಾಜದ ಚಿತ್ರಣ ನೀಡುತ್ತದೆ.

ಶೇ.60 ಭಾಗ ಕೌಟುಂಬಿಕ ಹಿಂಸಾಚಾರದ್ದೇ

ಅತ್ಯಾಚಾರ ಹೆಣ್ಣಿನ ಮೇಲಿನ ದೌರ್ಜನ್ಯಗಳಲ್ಲಿ ಅತ್ಯಂತ ಭೀಕರ ರೂಪ ಆದರೂ, ದೌರ್ಜನ್ಯಗಳಲ್ಲಿ ಒಂದು ರೂಪ ಮಾತ್ರ. ಇವತ್ತಿನ ಸಂಕಥನಗಳಲ್ಲಿ ಪ್ರಧಾನವಾಗಿ ಕೇಳಿ ಬರುತ್ತಿರುವ 'ಸಾರ್ವಜನಿಕ ಸ್ಥಳಗಳಲ್ಲಿ ಅಪರಿಚಿತರಿಂದ ನಡೆಯುವ ಲೈಂಗಿಕ ಅತ್ಯಾಚಾರಗಳು' ಹೆಣ್ಣಿನ ಮೇಲಿನ ದೌರ್ಜನ್ಯದ ಘಟನೆಗಳ ಶೇ.6 ಮಾತ್ರ. ಇದು ಹೆಣ್ಣಿನ ಮೇಲೆ ದೌರ್ಜನ್ಯಗಳ ಭೀಕರ ಸಮಸ್ಯೆಯ ಮೇಲೆ ಇತ್ಯಾದಿಗಳಂತೂ ಅಲ್ಲವೇ ಅಲ್ಲ. ಮಹಿಳೆಯರ ಮೇಲೆ ದೌರ್ಜನ್ಯದ ಬಗ್ಗೆ ಸಾರ್ವಜನಿಕ ಚರ್ಚೆ ಮತ್ತು ಅರಿವು ಮೂಡಿಸುವುದೇ ಪರಿಹಾರಗಳತ್ತ ಮೊದಲ ಹೆಜ್ಜೆ. ವಿಚಾರ ಸಂಕಿರಣದಲ್ಲಿ ಇಂತಹ ಬಹಳ ಭಿನ್ನವಾದ ಆದರೆ ಅರ್ಥಪೂರ್ಣ ದನಿ



ಜಾಹಿರಾತು ಭಿತ್ತಿ ಪ್ರದರ್ಶನ

ಕಾಣುವ ಒಂದು ಸಣ್ಣ ಭಾಗ ಮಾತ್ರ. ಆಸ್ಪತ್ರೆಯಲ್ಲಿ ದಾಖಲಾಗುವ ಸಾಯುವ ಪ್ರಕರಣಗಳ ದೊಡ್ಡ ಪಾಲು (ಶೇ.60 ಭಾಗ) ಕೌಟುಂಬಿಕ ಹಿಂಸಾಚಾರದ್ದೇ. ಇದು ಬಹಳ ಹಿಂದಿನಿಂದ ಬಂದದ್ದು. ಆದರೆ 90ರ ದಶಕದ ನಂತರ ಕ್ರೌರ್ಯ ವಿಪರೀತವಾಗಿ ಹೆಚ್ಚಿದೆ. ಇವೆಲ್ಲದಕ್ಕೂ ಕಾರಣಗಳು ಏನು ಎಂದು ಹೇಳುವುದು ಕಷ್ಟ. ಆದರೆ ಹೆಣ್ಣಿನ ಮೇಲಿನ ದೌರ್ಜನ್ಯಕ್ಕೆ 'ಚಾಲನೆ/ ಕುಮ್ಮಕ್ಕು ಕೊಡುವ' (ಟ್ರಿಗರ್) ಅಂಶಗಳಲ್ಲಿ ಮದ್ಯಪಾನದ್ದೇ ಸಿಂಹಪಾಲು. ಮೊಬೈಲು, ಉಡುಪು ಎತ್ತಿದವರು ನಿಮ್ಹಾನ್ಸ್‌ನ ಮನೋವೈದ್ಯ ಡಾ. ವಿವೇಕ್ ಬೆನೆಗಲ್.


'ವಿಮೋಚನಾ'ದ ಮಮತಾ ಮತ್ತು 'ಜೆ.ಎಂ.ಎಸ್.'ನ ಗೌರಮ್ಮ ಪೋಲಿಸ್ ಠಾಣೆಗಳಲ್ಲಿ ಅದರಲ್ಲೂ ಮಹಿಳಾ ಪೋಲಿಸ್ ಠಾಣೆಗಳಲ್ಲಿ, ದೌರ್ಜನ್ಯಗಳ ವಿರುದ್ಧ ವಿವಿಧ ತೊಡಕುಗಳು ಕಷ್ಟನಷ್ಟಗಳನ್ನು ಎದುರಿಸಿ ಧೈರ್ಯದಿಂದ ದೂರು ದಾಖಲಿಸಲು ಬರುವ ಮಹಿಳೆಯರು ಪಡುವ ಪಾಡಿನ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪೋಲಿಸ್ ವ್ಯವಸ್ಥೆಯ ಹಲವು ನ್ಯೂನ್ಯತೆಗಳನ್ನು ಒಪ್ಪಿಕೊಳ್ಳುತ್ತಾ, ಪೋಲಿಸರು ಎದುರಿಸುವ ಸಾಂಸ್ಥಿಕ ಸಮಸ್ಯೆಗಳು/ಸವಾಲುಗಳು ಮಿತಿಗಳ ಬಗ್ಗೆ ಹೇಳುತ್ತಾ ಪೋಲಿಸ್ ಕಣ್ನೋಟವನ್ನು ಮಾಜಿ ಹಿರಿಯ ಪೋಲಿಸ್ ಅಧಿಕಾರಿ ಗೋಪಾಲ್ ಹೊಸೂರ್ ಮಂಡಿಸಿದರು. 90ರ ದಶಕದ ನಂತರದ 'ಜಾಗತೀಕರಣ' ಮಹಿಳೆಯರ ಮೇಲೆ ದೌರ್ಜನ್ಯಗಳ ಸಂಖ್ಯೆಯಲ್ಲಿ ಮತ್ತು ಭೀಕರತೆಯಲ್ಲಿ ಏರಿಕೆಗೆ ಒಂದು ಕಾರಣ. ಬರಿಯ 'ಪೋಲಿಸಿಂಗ್'ನಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಅವರು ಅಭಿಪ್ರಾಯ ಪಟ್ಟರು. ಸಾಮಾನ್ಯವಾಗಿ ಮುನ್ನೆಲೆಗೆ ಬರದ ಕೆಳಸ್ತರದ ಗ್ರಾಮೀಣ ಮಹಿಳೆಯರ ಮೇಲೆ ದೌರ್ಜನ್ಯಗಳ ಹಲವು ಆಯಾಮಗಳು ಮತ್ತು ಮೂಲಕಾರಣಗಳಾದ ಸಾಮಾಜಿಕ-ಆರ್ಥಿಕ ಮೂಲರಚನೆಯ ಹಲವು ಅಂಶಗಳ ಬಗ್ಗೆ ಐಸೆಕ್‌ನ ಡಾ.ಗಾಯತ್ರಿ ದೇವಿ ಅವರು ಗಮನ ಸೆಳೆದರು. ಹಾವೇರಿಯ ಸ್ವಸಹಾಯ ಸಂಘದ ಪರಮ್ಮ ಲಂಬಾಣಿ ಮತ್ತು ನಾಗಮ್ಮ ಚಾವಡಿ ಹಲವು ತೊಡಕುಗಳನ್ನು ಎದುರಿಸಿಯೂ ಸಂಘದ ಸಹಾಯದಿಂದ ಬದುಕು ಕಟ್ಟಿಕೊಂಡ ಬಗೆಗಿನ ಅನುಭವ ಕಥನವೂ ಸ್ಫೂರ್ತಿದಾಯಕವಾಗಿತ್ತು.

20ನೇ ಶತಮಾನದ ಆರಂಭದಿಂದ ಇದುವರೆವಿಗೂ ಅಮೆರಿಕದ ಜಾಹೀರಾತುಗಳಲ್ಲಿ ಮಹಿಳೆಯನ್ನು ಸರಕು, ಆಸ್ತಿಯಂತೆ ಪರಿಗಣಿಸುವ, ಆಕೆಯ ಮೇಲೆ ದೌರ್ಜನ್ಯಗಳ ಮನೋಭೂಮಿಕೆ ಸಿದ್ಧಪಡಿಸುವ, ಅವುಗಳನ್ನು ಸಮರ್ಥಿಸುವ ಹಲವು ಆಯ್ದ ಜಾಹೀರಾತುಗಳ ಪ್ರದರ್ಶನವೂ ಇತ್ತು. ಮಹಿಳೆಯರ ಮೇಲೆ ದೌರ್ಜನ್ಯದ ಚಿತ್ರಣ ವಿಶ್ಲೇಷಣೆ ನೀಡುವ ಶಶಿಧರ ಬಾರಿಘಾಟ್ ನಿರ್ದೇಶಿಸಿದ ಬೀದಿ ನಾಟಕ 'ಟೈಮ್ ಲೈನ್'ನ್ನು ಬೆಂಗಳೂರು ಸಮುದಾಯ ತಂಡ ಪ್ರದರ್ಶಿಸಿತು. ಡಾ.ಆಶಾದೇವಿ, ಕೆ.ಶರೀಫಾ, ಡಾ. ತಸ್ನೀಂ ತಾಜ್ ಮುಂತಾದವರು ಭಾಗವಹಿಸಿದ ಕವಿಗೋಷ್ಠಿ ಸಾಂಸ್ಕೃತಿಕ ಸ್ಪಂದನದ ಭಾಗವಾಗಿತ್ತು.

JANASHAKTHI KANNADA VARA PATRIKE AUG 03, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಹೆಣ್ಣಿನ ಮೇಲಿನ ಹಿಂಸೆಯ ನೆಲೆ ಹುಡುಕುತ್ತಾ......

ಎನ್. ಕೆ. ವಸಂತ ರಾಜ



ನಮ್ಮ ರಾಜ್ಯ ಮತ್ತು ದೇಶದಲ್ಲಿ ವಯಸ್ಸು, ಶಿಕ್ಷಣ, ಸಾಮಾಜಿಕ-ಆರ್ಥಿಕ ಸ್ಥಾನಮಾನಗಳ ಬೇಧವಿಲ್ಲದೆ ಹೆಣ್ಣಿನ ಮೇಲೆ ದಿನೇ ದಿನೇ ಭೀಕರ ಬರ್ಬರ ಅತ್ಯಾಚಾರಗಳು ನಡೆಯುತ್ತಿರುವ ಬಗ್ಗೆ ವರದಿಯಾಗುತ್ತಿವೆ. ಮೊದಲ ಶಾಕ್, ಆಕ್ರೋಶ, ಆತಂಕಗಳ ನಂತರ, ಇದಕ್ಕೆ ಕಾರಣಗಳೇನು? ಪರಿಹಾರಗಳೇನು?- ಎನ್ನುವುದರ ಬಗ್ಗೆ ನಮ್ಮನ್ನು ಇವು ಚಿಂತನೆಗೆ ಹಚ್ಚುತ್ತಿವೆ. ಅತ್ಯಾಚಾರಗಳು ನಿಜವಾಗಿ ಹೆಚ್ಚುತ್ತಿವೆಯೇ? ಅಥವಾ ಈ ಬಗ್ಗೆ ಪ್ರಜ್ಞೆ ಮೂಡುತ್ತಿರುವುದರಿಂದ ಮತ್ತು ಮಾಧ್ಯಮಗಳ ಬಾಹುಳ್ಯದಿಂದ 'ಸೆನ್ಸೆಶನ್ ಸುದ್ದಿ ಬೇಡಿಕೆ'ಯಿಂದ ಹೆಚ್ಚೆಚ್ಚು ವರದಿಯಾಗುತ್ತಿವೆಯೆ? ಅಥವಾ ಇವು ಉನ್ನತ ಸಾಮಾಜಿಕ-ಆರ್ಥಿಕ ಸ್ಥಾನಮಾನದವರನ್ನೂ ತೀವ್ರವಾಗಿ ತಟ್ಟುತ್ತಿರುವುದರಿಂದ ಮುನ್ನೆಲೆಗೆ ಬರುತ್ತಿವೆಯೆ? ಸಾವಿರಾರು ವರ್ಷಗಳಿಂದಲೂ ಹೆಣ್ಣಿನ ಮೇಲೆ ನಿರಂತರವಾಗಿ ನಡೆಯುತ್ತಿರುವ ಹಲವು ದೌರ್ಜನ್ಯಗಳಲ್ಲಿ ದೊಡ್ಡ ಪ್ರಮಾಣಾತ್ಮಕ, ಗುಣಾತ್ಮಕ ಬದಲಾವಣೆಗಳು ಕಂಡಿವೆಯೆ? ಹೆಣ್ಣಿನ ಮೇಲೆ ಹಿಂಸೆಯ ನೆಲೆ ಏನು? ಇಂತಹ ಪ್ರಶೆಗಳಿಗೆ ಸುಲಭ ಸರಳ ಉತ್ತರಗಳಿಲ್ಲ. ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನದ ಭಾಗವಾಗಿ ಜುಲೈ 18ರಿಂದ 21ರವರೆಗೆ ಒಂದು ವಿಶಿಷ್ಟ ಸಾಂಸ್ಕೃತಿಕ ಸ್ಪಂದನ ನಡೆಯಿತು. ಇದರಲ್ಲಿ ವಿಚಾರ ಸಂಕಿರಣ, ಡಾಕ್ಯುಮೆಂಟರಿ ಫಿಲಂಗಳು, ಬೀದಿ ನಾಟಕ, ಕಾವ್ಯ ವಾಚನ, ಅನುಭವ ಕಥನ, ಜಾಹಿರಾತು ಭಿತ್ತಿ ಪ್ರದರ್ಶನ -ಹೀಗೆ ಹಲವು ಪ್ರಕಾರಗಳ ಸ್ಪಂದನವಿತ್ತು. ಇದನ್ನು ಸಂಘಟಿಸಿದವರು - ಸುಚಿತ್ರ ಫಿಲಂ ಸೊಸೈಟಿ, ಸಮುದಾಯ, ರೇಡಿಯೋ ಟಿವಿಯಲ್ಲಿರುವ ಮಹಿಳೆಯರ ಅಂತರ್ರಾಷ್ಟ್ರೀಯ ಸಂಘಟನೆ, ಕನ್ಸರ್ನ್ಡ್ ಇಂಡಿಯಾ-ಜಂಟಿಯಾಗಿ. ಇದರ ಭಾಗವಾಗಿ ತೋರಿಸಲಾದ ಡಾಕ್ಯುಮೆಂಟರಿಗಳದ್ದು ಒಂದು ವಿಶೇಷವೆಂದರೆ ಇವೆಲ್ಲದರ ನಿರ್ದೇಶಕ/ತಯಾರಕರೂ ಮಹಿಳೆಯರೇ.

ಹೆಣ್ಣಿನ ದೇಹವೇ ಪ್ರಮುಖ ಸಂಘರ್ಷಗಳ ನೆಲೆ

ಅಮರ್ ಕನ್ವರ್ ಅವರ 'ರೋಶನ್ ಬಯಾನ್' (ಮಿಂಚಿನಂತೆ ಹೊಡೆದ ಅನುಭವ ಕಥನಗಳು)ನಲ್ಲಿ ಕಂಡ ಹುಡುಕಾಟ ಭಾರತದ ಸಂದರ್ಭದಲ್ಲಂತೂ ಅತ್ಯಂತ ಸಮಗ್ರ ಮತ್ತು ಆಳವಾದದ್ದು. ಭಾರತದ ವಿಭಜನೆ ಸಂದರ್ಭದಲ್ಲಿ ಅಪಹರಣಕ್ಕೆ (ಮತ್ತು ಹೆಚ್ಚಾಗಿ ಅತ್ಯಾಚಾರಕ್ಕೂ ಒಳಗಾಗಿದ್ದ) ಸುಮಾರು ಎರಡೂವರೆ ಲಕ್ಷ ಮಹಿಳೆಯರಲ್ಲಿ ಕೆಲವರ ಮತ್ತು ಅವರ ಹುಡುಕಾಟ, ಪುನರ್ವಸತಿಗಳಲ್ಲಿ ತೊಡಗಿಸಿಕೊಂಡಿದ್ದ ಮಹಿಳೆಯರ ಅನುಭವ ಕಥನದಿಂದ ಆರಂಭವಾಗುತ್ತದೆ. ಎರಡು ಪಕ್ಷಗಳ, ಕೋಮುಗಳ, ರಾಷ್ಟ್ರಗಳ ಸಂಘರ್ಷ ಅಂತಿಮವಾಗಿ ನಡೆದದ್ದು ಎರಡೂವರೆ ಲಕ್ಷ ಹೆಣ್ಣುಗಳ ದೇಹದ ಮೇಲೆ. ಇದೇ ಪುನಃ ಇನ್ನೊಂದು ವಿಭಜನೆಯಲ್ಲಿ ಮರುಕಳಿಸುತ್ತದೆ. ಈ ಬಾರಿ ಪಾಕಿಸ್ತಾನದ ಒಂದೇ ದೇಶದ ಒಂದೇ ಕೋಮಿನ ಎರಡು-ಭಾಷೆ, ರಾಜ್ಯ, ಪಕ್ಷ ಮತ್ತು 'ರಾಷ್ಟ್ರೀಯತೆ'ಗಳ- ನಡುವೆ ಸಂಘರ್ಷ (ಪಾಕಿಸ್ತಾನಿ ಮಿಲಿಟರಿಯಿಂದ ಬರ್ಬರ ಅತ್ಯಾಚಾರಕ್ಕೆ ಮತ್ತು ಹೆಚ್ಚಾಗಿ ಕೊಲೆಗೂ ಒಳಗಾದ) ಒಂದೂವರೆ ಲಕ್ಷ ಹೆಣ್ಣುಗಳ ದೇಹದ ಮೇಲೆ ನಡೆಯುತ್ತದೆ. ಈ ಬರ್ಬರತೆಗೆ ಒಳಗಾಗಿಯೂ ಬದುಕುಳಿದ ಮತ್ತು ಕೆಲವು ಪ್ರತ್ಯಕ್ಷದರ್ಶಿಗಳ ಬೆಚ್ಚಿ ಬೀಳಿಸುವ ಅನುಭವ ಕಥನಗಳು, 1947ರ ಭೀಕರತೆ ಚಾರಿತ್ರಿಕ ಆಕಸ್ಮಿಕ ಅಲ್ಲ ಎಂಬ ಅರಿವನ್ನು ಯಾವುದೇ ಅನುಮಾನವಿಲ್ಲದಂತೆ ಮೂಡಿಸುತ್ತವೆ.


ವಿಚಾರ ಸಂಕಿರಣದಲ್ಲಿ ಮಾತನಾಡುತ್ತಿರುವ ನಿಮ್ಹಾನ್ಸ್‌ನ ಮನೋವೈದ್ಯ ಡಾ. ವಿವೇಕ್ ಬೆನೆಗಲ್.

2002ರ ಗೋದ್ರಾ ಪ್ರಕರಣದ 'ಅಪರಾಧಿ'ಗಳಾದ 'ಅಲ್ಪಸಂಖ್ಯಾತರ' ಮೇಲೆ 'ಸೇಡು ತೀರಿಸಿಕೊಳ್ಳುವ' ಪ್ರಭುತ್ವ ಬೆಂಬಲಿತ ದಂಗೆಗಳೂ ನಡೆದದ್ದು ನೂರಾರು ಹೆಣ್ಣುಗಳ ದೇಹದ ಮೇಲೆ. ಇಲ್ಲಿ 1947 ಅಥವಾ 1971ರಂತೆ ಎರಡು ಭಾಷೆ, ರಾಜ್ಯ, ಪಕ್ಷ ಮತ್ತು 'ರಾಷ್ಟ್ರ'ಗಳ ನಡುವೆ ಘರ್ಷಣೆ ಇರಲಿಲ್ಲ. ಇದ್ದಿದ್ದು ಬರಿಯ ಅಧಿಕಾರ ಉಳಿಸಿಕೊಳ್ಳುವ ಕೋಮು-ರಾಜಕಾರಣವಷ್ಟೇ. ಇವಲ್ಲದೆ ಮಣಿಪುರ, ನಾಗಾಲ್ಯಾಂಡ್ ಮುಂತಾದ ಈಶಾನ್ಯ ರಾಜ್ಯಗಳಲ್ಲಿ, ಹಾಗೂ ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಚಳುವಳಿಯನ್ನೂ, ಹಲವು ಗುಡ್ಡಕಾಡು ಅರಣ್ಯ ಪ್ರದೇಶಗಳಲ್ಲಿ ನಡೆದ ನಡೆಯುತ್ತಿರುವ ನಕ್ಸಲ್ ಉಗ್ರಗಾಮಿ ಚಳುವಳಿಗಳನ್ನು ಹತ್ತಿಕ್ಕಲು ಭಾರತದ ಪ್ರಭುತ್ವ ಯುದ್ಧ ಹೂಡುವುದೂ ನೂರಾರು ಹೆಣ್ಣುಗಳ ದೇಹದ ಮೇಲೆ. ಈ ಎಲ್ಲದರ ನಡುವೆ ಮೂಡಿ ಬರುವ 'ನಗ್ನ ಪ್ರತಿಭಟನೆ' ಮಾಡಿದ 12 ಮಣಿಪುರಿ ಮಹಿಳೆಯರ, ಗುಜರಾತ್ ಹತ್ಯಾಕಾಂಡದ ಬಿಕ್ಕಿಸ್, ಮಣಿಪುರದ ಇರೊಮ್ ಮುಂತಾದ ಮಹಿಳೆಯರ ದಿಟ್ಟ ಪ್ರತಿರೋಧ-ಹೋರಾಟ 'ಪರಿಹಾರವೇನು?' ಎಂಬ ಪ್ರಶ್ನೆಗೆ ಉತ್ತರಿಸುವಂತಿದೆ.


ಬೆಂಗಳೂರು ಸಮುದಾಯ ತಂಡದಿಂದ ಬೀದಿ ನಾಟಕ – 'ಟೈಮ್ ಲೈನ್'

'ದೇವರು ರ್‍ವಾಂಡಾದಲ್ಲಿ ಮಲಗಿದ್ದಾನೆ'

ಹೆಣ್ಣಿನ ದೇಹವೇ ಹೆಚ್ಚಿನ ಪ್ರಮುಖ ಸಂಘರ್ಷಗಳ ನೆಲೆಯಾಗುವುದು ನಮ್ಮ ದೇಶದ ವಿಶಿಷ್ಟ ಸಾಮಾಜಿಕ ಸಾಂಸ್ಕೃತಿಕ ವ್ಯಾಧಿಯೇನೋ ಎಂಬ ಅನುಮಾನವನ್ನು, ಆಫ್ರಿಕಾದ ಮೂರು ಡಾಕ್ಯುಮೆಂಟರಿಗಳು ಹೋಗಲಾಡಿಸಿದವು. ಅವು- 'ಫೈಟಿಂಗ್ ದ ಸೈಲೆನ್ಸ್' (ಮೌನ ಮುರಿಯುವ ಬಗೆ: ಕಾಂಗೋದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಹಿಂಸೆ), 'ಗಾಡ್ ಸ್ಲೀಪ್ಸ್ ಇನ್ ರ್‍ವಾಂಡಾ' (ದೇವರು ರ್‍ವಾಂಡಾದಲ್ಲಿ ಮಲಗಿದ್ದಾನೆ), 'ಕುಂಗ್ ಫೂ ಗ್ರಾಂಡ್ ಮಾ' (ಕುಂಗ್ ಫೂ ಅಜ್ಜಿ). ಆಫ್ರಿಕಾದಲ್ಲಿ ಬುಡಕಟ್ಟುಗಳು, ರಾಷ್ಟ್ರ ಪ್ರಭುತ್ವಗಳು, ವಿರೋಧಿ ಗೆರಿಲ್ಲಾಗಳು, ವಿದೇಶೀ ಶಕ್ತಿ-ರಾಷ್ಟ್ರಗಳ ನಡುವಿನ ಬಹು-ಆಯಾಮದ ಸಂಘರ್ಷಗಳೂ ನಡೆಯುವುದು ಅಂತಿಮವಾಗಿ ಹೆಣ್ಣಿನ ದೇಹದ ಮೇಲೆನೇ ಎಂಬ ಭೀಕರ ಸತ್ಯವನ್ನು ಇವು ಬಿಚ್ಚಿಡುತ್ತವೆ. ಆದರೆ ಪ್ರತಿಯೊಂದು ಬುಡಕಟ್ಟು, ದೇಶ ಅತ್ಯಾಚಾರ 'ನಮ್ಮ ಸಂಸ್ಕೃತಿ'ಯದ್ದು ಅಲ್ಲ. ಇನ್ನೊಂದು ಬುಡಕಟ್ಟು-ದೇಶದ್ದು ಅನ್ನುತ್ತಲೇ ಹೆಣ್ಣಿನ ದೇಹದ ಮೇಲೆ ಸಂಘರ್ಷದಲ್ಲಿ ತೊಡಗುತ್ತದೆ. ಕಾಂಗೋದ 7 ವರ್ಷಗಳ ಆಂತರಿಕ ಯುದ್ಧದಲ್ಲಿ 80 ಸಾವಿರ ಮಹಿಳೆಯರು ಅತ್ಯಾಚಾರ-ಕ್ಕೆ ಒಳಗಾದ ನಂತರದ ಭೀಕರ ಸನ್ನಿವೇಶದಲ್ಲಿ ಮಹಿಳೆಯರೂ ಸಮುದಾಯವೂ ಎದುರಿಸಿದ ಸಮಸ್ಯೆಗಳು ಮತ್ತು ಎದುರಿಸಿದ ಬಗೆಯನ್ನು 'ಫೈಟಿಂಗ್ ದ ಸೈಲೆನ್ಸ್' ಮನೋಜ್ಞವಾಗಿ ಹೇಳುತ್ತದೆ. ಹೆಣ್ಣಿನ ಮೇಲೆ ಎಲ್ಲಾ ದೌರ್ಜನ್ಯಗಳಿಗೆ (ಯುದ್ಧದ ಸಂದರ್ಭದಲ್ಲೂ) ಹೆಣ್ಣಿನ ಉಡುಪು, ವರ್ತನೆ ಇತ್ಯಾದಿಗಳು ಕಾರಣ ಎಂದು ಹೇಳುತ್ತಾ ಅವಳನ್ನೇ ತಪ್ಪಿತಸ್ಥೆಯಾಗಿಸುವ, ಅದರಿಂದಾಗಿ ಅವಳನ್ನು ತ್ಯಜಿಸುವ ಮೂಲಕ ಅವಳಿಗೆ ಶಿಕ್ಷೆ ವಿಧಿಸುವ ಹಲವು ಮಹಿಳೆಯರ ದಾರುಣ ಅನುಭವ ಕಥನವನ್ನು ಅದು ಮುಂದಿಡುತ್ತದೆ. ಅದರ ಜತೆಗೆ ಸಾಮಾಜಿಕ ಕಾರ್ಯಕರ್ತೆಯ ಸತತ ಪ್ರಯತ್ನಗಳ ಮೂಲಕ ಈ ಪುರುಷರ ಪೂರ್ವಗ್ರಹ ಹೋಗಲಾಡಿಸಿ ಅವರಲ್ಲಿ ಅರಿವು ಮೂಡಿಸುವ, ತ್ಯಜಿಸಿದ ಮಹಿಳೆಯರ ಜತೆ ಮತ್ತೆ ಬದುಕು ಕಟ್ಟಿಕೊಳ್ಳುವ ಚಿತ್ರಣವೂ ಇದೆ.

ನೇಪಾಳದ 'ಸ್ಯಾರಿ ಸೋಲ್ಜರ್ಸ್'

1994ರ ರ್‍ವಾಂಡಾ ನರಮೇಧದ ನಂತರ ಉಳಿದ ಜನಸಂಖ್ಯೆಯಲ್ಲಿ ಮಹಿಳೆಯರು ಎದುರಿಸಬೇಕಾದ ಕಠಿಣ ಸವಾಲುಗಳು ಮತ್ತು ಹಿಂದೆ ಕಂಡರಿಯದ ಹೊಸ ಸಾಧ್ಯತೆಗಳ ಕಥನ 'ಗಾಡ್ ಸ್ಲೀಪ್ಸ್ ಇನ್ ರ್‍ವಾಂಡಾ'. ರ್‍ವಾಂಡಾ ನರಮೇಧದ ನಂತರ ಬದುಕುಳಿದ ನಾಲ್ಕು ಮಹಿಳೆಯರ ಸ್ಥಿತಿ ಮತ್ತು ಅದನ್ನು ಅವರು ಎದುರಿಸಿದ ಬಗೆ ದಾರುಣವಾಗಿದ್ದಷ್ಟೇ ಸ್ಫೂರ್ತಿದಾಯಕವಾದ್ದು ಕೂಡಾ. ಯುವತಿಯರು ಏಡ್ಸ್ ಪೀಡಿತರಾಗಿರುತ್ತಾರೆ ಎಂಬ ಅನುಮಾನದಿಂದ, ಚಿಂದಿ ಆಯುವವರ ಸ್ಲಂ

ಪುಟ 12 ಕ್ಕೆ

JANASHAKTHIKANNADAVARAPATRIKE: Printed by G.V.SRIRAMAREDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI